ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 16 ಮಂಗಳವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 61 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಳೆ ಮೈಸೂರಿನ ಶ್ರೀ ಮಹಾಗಣಪತಿ ದೇವಸ್ಥಾನದ 36ನೇ ವಾರ್ಷಿಕೋತ್ಸವ

- 16ರ ಸಂಜೆ ಗಣಪತಿ ಪೂಜೆ, ಮಹಾ ಸಂಕಲ್ಪ ಸೇರಿದಂತೆ ವಿವಿಧ ಪೂಜೆಗಳು
- ಬೃಂದಾವನ ಬಡಾವಣೆಯ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್‌ನಿಂದ ಆಯೋಜನೆ



ಮೈಸೂರು, ಜೂ. 15– ಮೈಸೂರಿನ ಬೃಂದಾವನ ಬಡಾವಣೆಯ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ವತಿಯಿಂದ ಜೂ. 17ರಂದು ಶ್ರೀ ಮಹಾಗಣಪತಿ ದೇವಸ್ಥಾನದ 36ನೇ ವರ್ಷದ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನೆರವೇರಲಿದೆ.

ಜೂ.16ರ ಸಂಜೆ 6ಕ್ಕೆ ಪೂಜೆ ಪ್ರಾರಂಭವಾಗಲಿದ್ದು, ಗಣಪತಿ ಪೂಜೆ, ಮಹಾ ಸಂಕಲ್ಪ, ವಾಸ್ತು ವರುಣ ಪೂಜೆ, ಪುಣ್ಯಾಹ, ಆಚಾರ್ಯ, ವೈದಿಕರ ಋತ್ವಿಕ್‌ವರ್ಣ, ಪಂಚಗವ್ಯ ಶುದ್ಧಿ, ಯಾಗ ಶಾಲಾ ಪ್ರವೇಶ, ಅಗ್ನಿ ಪ್ರತಿಷ್ಠಾಪನೆ, ಕಲಾ ಕಲಶ ಸ್ಥಾಪನೆ, ಆಕರ್ಷಣೆ, ಷೋಡಶ ಉಪಚಾರ ಪೂಜೆ.

ಪ್ರಧಾನ ದೇವತೆಗಳು– ವಾಸ್ತು ಪೂಜೆ, ರಾಕ್ಷೋಘ್ನ ಪೂಜೆ, ಅಘೋರ ರುದ್ರ ಪೂಜೆ. **ಉಪ ದೇವತೆಗಳು:** ದಿಕ್ಪಾಲಕ ಪೂಜೆ, ಸಾದ್ಗುಣ್ಯ ಪೂಜೆ, ಕ್ಷೇತ್ರಪಾಲಕ ಪೂಜೆ, ನಂತರ ಷೋಡಶ ಉಪಚಾರ ಪೂಜೆ, ನಂತರ ಪ್ರಧಾನ ಮತ್ತು ಉಪದೇವತೆ ಹೋಮ, ಮಹಾಬಲಿ, ಪೂರ್ಣಾಹುತಿ, ಮಹಾಮಂಗಳಾರತಿ.

ಜೂ.17ರ ಬೆಳಗ್ಗೆ 7ಕ್ಕೆ ಪುನಃ ಪೂಜೆ, ಕಲಾ ಹೋಮ, ಪೂರ್ಣಾಹುತಿ, ಮಂಗಳಾರತಿ, ಕಲಾ ಕಲಶಾಭಿಷೇಕ, ನಂತರ ಪಂಚಾಮೃತ ಅಭಿಷೇಕ, ಅಲಂಕಾರ, ಗಣಪತಿ ಪೂಜೆ. ಅಧಿದೇವತೆಗಳು–ಮಹಾಲಕ್ಷ್ಮೀ ಪೂಜೆ, ನಾರಾಯಣ ಪೂಜೆ, ಓಂಕಾರೇಶ್ವರ ಪೂಜೆ, ದುರ್ಗಾಂಬದೇವಿ ಪೂಜೆ.

ಉಪದೇವತೆಗಳು– ನವಗ್ರಹ ಪೂಜೆ, ಆಂಜನೇಯ ಪೂಜೆ, ಚಂಡಿಕೇಶ್ವರ ಪೂಜೆ, ಕೋದಂಡರಾಮ ಪೂಜೆ, ಪದ್ಮಾವತಿ ಸಮೇತ ವೆಂಕಟೇಶ್ವರ ಪೂಜೆ, ಮಹಾ ಮೃತ್ಯುಂಜಯ ಪೂಜೆ, ಬ್ರಹ್ಮ, ವಿಷ್ಣು, ಮಹೇಶ್ವರ ಸ್ವಪತ್ನೀ ಸಮೇತ ಪೂಜೆ, ದುರ್ಗಾದಿ ಸಾದ್ಗುಣ್ಯ ಪೂಜೆ, ಎಲ್ಲ ದೇವತೆ ಪೂಜಾ ನಂತರ ಹೋಮ, ಮಹಾಬಲಿ, ಪೂರ್ಣಾಹುತಿ, ಮಂಗಳಾರತಿ, ಪ್ರಧಾನ ದೇವರಿಗೆ ಕಲಶ ಅಭಿಷೇಕ, ಪ್ರೋಕ್ಷಣೆ, ವಿಶೇಷ ಪೂಜೆ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ. ಹೆಚ್ಚಿನ ಮಾಹಿತಿಗೆ ಪ್ರಧಾನ ಪುರೋಹಿತರು–ಮೊ. 9980687133, ಪ್ರಕಾಶ್, ವ್ಯವಸ್ಥಾಪಕರು–ಮೊ. 9243529039 ಸಂಪರ್ಕಿಸಬಹುದು.

ಎಸ್‌ಬಿಎಂ ಮಂಜುಗೆ ಅಭಿನಂದನೆ...



ಮೈಸೂರು ನಗರ ಜೆಡಿಎಸ್ ಅಧ್ಯಕ್ಷರಾಗಿ ನೇಮಕಗೊಂಡ ಎಸ್‌ಬಿಎಂ ಮಂಜು ಅವರನ್ನು ಸನ್ ರೈಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಶೋಕ್ ಅಭಿನಂದಿಸಿದರು. ಈ ವೇಳೆ ನಿರ್ದೇಶಕರಾದ ಪುರುಷೋತ್ತಮ್, ರವೀಂದ್ರ, ಶಶಿಕಲಾ, ರಾಮಕೃಷ್ಣ, ಚಂದ್ರಹಾಸ್ ಉಪಸ್ಥಿತರಿದ್ದರು.


ಹಾಕಿಯಲ್ಲಿ ಮೈಸೂರು ಸರ್ಕಾರಿ ನೌಕರರ ತಂಡಕ್ಕೆ ದ್ವಿತೀಯ ಸ್ಥಾನ



ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ರಾಜ್ಯಮಟ್ಟದ ಸರ್ಕಾರಿ ನೌಕರರ ಹಾಕಿ ಪಂದ್ಯಾವಳಿಯಲ್ಲಿ ಮೈಸೂರು ಸರ್ಕಾರಿ ನೌಕರರ ಹಾಕಿ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ಚಿತ್ರದಲ್ಲಿ ಮೈಸೂರು ಸರ್ಕಾರಿ ನೌಕರರ ಹಾಕಿ ತಂಡದ ನಾಯಕ ಕೆ.ಸಿ.ರವಿ, ಮ್ಯಾನೇಜರ್ ಅಪ್ಪಾಜಿ ಮೆಂಟರ್ ಬ್ರೆಗಿಲ್, ಪ್ರದೀಪ್, ಸಂಪತ್, ಕಾರಿಯಪ್ಪ, ಮಂಜುನಾಥ್, ಡಿ.ಮಾಲೇಗೌಡ, ಪ್ರಸನ್ನ, ಕುಟ್ಟಪ್ಪ, ಲೋಕೇಶ್, ಜಸ್ಟಿನ್ ಸುನಿಲ್, ಗೋಲ್ ಕೀಪರ್ ಪವನ್, ಆದರ್ಶ್, ಡಾ.ದೀಪು, ಡಾ.ಅರುಣ್‌ಕುಮಾರ್, ಚಂದ್ರಕಾಂತ್, ವೆಂಕಟೇಶ್, ರವಿ, ಶಂಕರಲಿಂಗ, ಗಿರೀಶ್ ಅವರನ್ನು ಕಾಣಬಹುದು.

ನಿಧನ

ಬಲ್ಲಿಮಾಡ ಪೂವಯ್ಯ



ಮೈಸೂರು,ಜೂ.15–ಮೈಸೂರಿನ ಬನ್ನಿಮಂಟಪ ಹುಡ್ಕೋ ಎಂಐಜಿ–30 ನಿವಾಸಿ ಬಲ್ಲಿಮಾಡ ಪೂವಯ್ಯ ಸೋಮವಾರ ಬೆಳಗ್ಗೆ ನಿಧನರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು.


ಮೂಲತಃ ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಗ್ರಾಮದವರಾದ ಇವರು ಪತ್ನಿ ಐಡಿಯಲ್ ಜಾವಾ ರೋಟರಿ ಶಾಲೆ ನಿವೃತ್ತ ಶಿಕ್ಷಕರಾದ ಗಂಗಮ್ಮ (ಮಾಲೆಟಿರಾ, ಕೆದಮಲ್ಲೂರು) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಜಿ.ನಂಜಮ್ಮ



ಮೈಸೂರಿನ ರಮ್ಯಾ ಡ್ರೈವ್ ಇನ್ ರೆಸ್ಟೋರೆಂಟ್ (ಈಗ ಮುಚ್ಚಿದ) ಮಾಲೀಕರಾದ ದಿವಂಗತ ಜಿ.ಬಿ. ಗೋವಿಂದರಾಜ ಶೆಟ್ಟಿ ಅವರ ಪತ್ನಿ ಜಿ.ಜಿ.ನಂಜಮ್ಮ(87) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರರಾದ ಜಿ.ಜಿ. ಮಹೇಂದ್ರ ಮತ್ತು ಜಿ.ಜಿ. ಸುರೇಶ್, ಪುತ್ರಿಯರಾದ ಹೆಚ್.ವಿ.ಆಶಾ, ಲೀಲಾ ಮಹೇಶ್ ಮತ್ತು ಜಿ.ಜಿ. ಆಶಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಿಯಾಜ್ ಅಹಮದ್



ಮೈಸೂರಿನ ಲಷ್ಕರ್ ಮೊಹಲ್ಲಾ ನಿವಾಸಿ ದಿವಂಗತ ಲೇಟ್ ಅಬ್ದುಲ್ ನಬಿ ಅವರ ಪುತ್ರ ರಿಯಾಜ್ ಅಹಮದ್ (76) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶವ ಸಂಸ್ಕಾರ ಬೆಂಗಳೂರು–ಮೈಸೂರು ರಸ್ತೆಯಲ್ಲಿರುವ ಟಿಪ್ಪು ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿ.ಜೆ. ನಂದೀಶ್



ಮೈಸೂರಿನ ಸಿದ್ಧಾರ್ಥನಗರ ಬಡಾವಣೆಯ ವಿನಯಮಾರ್ಗ ನಿವಾಸಿ ಹಾಗೂ ವಕೀಲ ಡಿ.ಜೆ.ನಂದೀಶ್ ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಕವಿತಾ ಸೇರಿದಂತೆ ಅಪಾರ ಬಂಧು, ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಸಿ.ರಾಜಶೇಖರ ಚಾರ್



ನಂಜನಗೂಡು ತಾಲೂಕಿನ ಮುಳ್ಳೂರು ಗ್ರಾಮದ ನಿವಾಸಿ, ನಿವೃತ್ತ ಡಿವೈಎಸ್ಪಿ ಎಂ.ಸಿ.ಮರಿಸ್ವಾಮಿ ಅವರ ಸಹೋದರ ಎಂ.ಸಿ.ರಾಜಶೇಖರ ಚಾರ್(79) ಸೋಮವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಕುಟುಂಬಸ್ಥರು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ (ಜೂ.16) ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಸಿ.ಬಸವರಾಜು ಅವರಿಗೆ ವಿಧಾನಪರಿಷತ್ ಸ್ಥಾನ ನೀಡಲು ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ

ಮೈಸೂರು, ಜೂ.15(ಜಿಎ)–ಮೈಸೂರು ಭಾಗದ ನಾಯಕ ಸಮುದಾಯಕ್ಕೆ ಈವರೆಗೂ ಒಂದೇ ಒಂದು ವಿಧಾನಪರಿಷತ್ ಸದಸ್ಯ ಸ್ಥಾನ ನೀಡಿಲ್ಲ. ಈ ಬಾರಿಯಾದರೂ ಎಸ್.ಸಿ.ಬಸವರಾಜು ಅವರಿಗೆ ಮುಂಬರುವ ವಿಧಾನಪರಿಷತ್‌ನಲ್ಲಿ ಅವಕಾಶ ನೀಡಬೇಕೆಂದು ಆಗ್ರಹಿಸಿ ಮೈಸೂರಿನಲ್ಲಿ ನಾಯಕ ಸಂಘಟನೆಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು ಪ್ರಾಂತ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ವತಿಯಿಂದ ನಗರದ ನಂಜರಾಜ ಬಹದ್ದೂರ್ ಛತ್ರದಿಂದ ಕಾಂಗ್ರೆಸ್ ಕಚೇರಿವರೆಗೆ ಮೆರವಣಿಗೆ ನಡೆಸಿದ ನೂರಾರು ಮಂದಿ ಕೈಯಲ್ಲಿ ಬಸವರಾಜು ಅವರ ಭಾವಚಿತ್ರ ಹಿಡಿದು, ಎಂಎಲ್‌ಸಿ ಸ್ಥಾನ ನೀಡುವಂತೆ ಘೋಷಣೆಗಳನ್ನು ಕೂಗಿದರಲ್ಲದೇ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಹಾಗೂ ನಗರಾಧ್ಯಕ್ಷ ಆರ್.ಮೂರ್ತಿ ಮೂಲಕ ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠರಿಗೆ ಹಕ್ಕೊತ್ತಾಯದ ಮನವಿ ಸಲ್ಲಿಸಿದರು.

ಮೈಸೂರು ಭಾಗದ ನಾಯಕ ಸಮಾಜದ ಹಿರಿಯ ಮುಖಂಡ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜುಗೆ ವಿಧಾನ ಪರಿಷತ್ ಸ್ಥಾನ ನೀಡಬೇಕು. ಅವರು ಮೈಸೂರು ಭಾಗದ ಪ್ರಭಾವಿ ಮುಖಂಡರಾಗಿದ್ದು, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾಗಿದ್ದಾರೆ. 40 ವರ್ಷಗಳಿಂದ ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜತೆಗೆ ಸಾಮಾಜಿಕ ಸೇವಾ ಕಾರ್ಯ ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ, ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಉತ್ತಮ ಕೆಲಸ ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ತಿಳಿಸಿದರು.



ಮುಂಬರುವ ವಿಧಾನಪರಿಷತ್‌ನಲ್ಲಿ ಎಸ್.ಸಿ.ಬಸವರಾಜು ಅವರಿಗೆ ಅವಕಾಶ ನೀಡಬೇಕೆಂದು ಆಗ್ರಹಿಸಿ ಮೈಸೂರಿನಲ್ಲಿ ನಾಯಕ ಸಂಘಟನೆಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದವು.

ಕೆಪಿಸಿಸಿ ಕಾರ್ಯದರ್ಶಿಯಾಗಿ ನಂತರ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯಾದ್ಯಂತ ಪಕ್ಷ ವಹಿಸಿದ್ದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ. ಪರಿಶಿಷ್ಟ ಪಂಗಡದ ಮೀಸಲಾತಿಯ 15 ಕ್ಷೇತ್ರಗಳ ಪೈಕಿ 14ರಲ್ಲಿ ಕಾಂಗ್ರೆಸ್ ಗೆಲ್ಲಲು ಪ್ರಮುಖ ಪಾತ್ರ ವಹಿಸಿದ್ದಾರೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲೂ ಕಾಂಗ್ರೆಸ್ ಹೆಚ್ಚಿನ ಸಂಖ್ಯೆಯಲ್ಲಿ ಜಯ ಸಾಧಿಸಲು ಕಾರಣರಾಗಿದ್ದಾರೆ. ಆದ್ದರಿಂದ ಎಸ್.ಸಿ.ಬಸವರಾಜು ಅವರಿಗೆ ಎಂಎಲ್‌ಸಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

2023ರ ವಿಧಾನಸಭಾ ಚುನಾವಣೆಯಲ್ಲಿ ನಾಯಕ ಜನಾಂಗದವರು ಒಗ್ಗಟ್ಟಾಗಿ ನಿಂತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಿರುವುದರಿಂದ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ 8 ಕ್ಷೇತ್ರ, ಚಾಮರಾಜನಗರದಲ್ಲಿ 4 ಕ್ಷೇತ್ರಗಳಲ್ಲಿ 3 ಜನ ಶಾಸಕರು ಗೆಲುವು ಸಾಧಿಸಿದ್ದಾರೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ಕೆಪಿಸಿಸಿ ಅಧ್ಯಕ್ಷ, ಮುಖ್ಯಮಂತ್ರಿ, ಪಕ್ಷದ ವರಿಷ್ಠರಿಗೆ ಮನವಿ ಸಲ್ಲಿಕೆ

ನಾಯಕ ಸಮಾಜಕ್ಕೆ ಅನ್ಯಾಯವಾದಾಗ, ಮುಂದಾಳತ್ವವಹಿಸಿ ಹೋರಾಟ ಮಾಡಿ ಸಮಾಜಕ್ಕೆ ನ್ಯಾಯಕೊಡಿಸಿ ಸಮಾಜಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಎಸ್.ಸಿ.ಬಸವರಾಜು ಅವರಿಗೆ ಈ ಬಾರಿ ವಿಧಾನಪರಿಷತ್ ಸ್ಥಾನವನ್ನು ನೀಡದೆ ಅನ್ಯಾಯ ಮಾಡಿದ್ದೀರ. ಇದನ್ನು ಸರಿಪಡಿಸಿ ಬೇಕಾದರೆ ಮುಂದಿನ ತಿಂಗಳು ನಡೆಯುವ ವಿಧಾನಪರಿಷತ್ ಚುನಾವಣೆಗೆ ನಾಮನಿರ್ದೇಶನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಇದರಿಂದ 2028ರ ಸಾರ್ವತ್ರಿಕ ವಿಧಾನಸಭೆ ಚುನಾವಣೆಯ ಸಂಘಟನೆಗೆ ಸಹಕಾರಿಯಾಗಿ ನಾಯಕ ಸಮಾಜ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷದ ಪರವಾಗಿ ಬೆನ್ನೆಲುಬಾಗಿ ನಿಲ್ಲುತ್ತೇವೆ ಎಂದರು.

ಈ ವೇಳೆ ಪ್ರತಿಭಟನೆಯಲ್ಲಿ ಕರ್ನಾಟಕ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು, ಒಕ್ಕೂಟದ ಅಧ್ಯಕ್ಷ ದ್ಯಾವಪ್ಪನಾಯಕ, ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯ, ಮುಖಂಡರಾದ ಉದ್ಬೂರು ಕೃಷ್ಣ, ಎಸ್.ಆರ್. ರವಿಕುಮಾರ್, ಹೊಂಗ ನೂರು ಚಂದ್ರು, ಅರಕಲವಾಡಿ ಸೋಮನಾಯಕ, ಹೊಸಕೋಟೆ ಬಸವರಾಜು, ಕುಪ್ಪಳ್ಳಿ ಮಹದೇವ ನಾಯಕ, ಪಾಳ್ಯ ಕೃಷ್ಣ, ಸಿದ್ದರಾಜು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ವಾರಿಯರ್ಸ್‌ಗೆ ಮತ್ತಿಬ್ಬರು ಪ್ರತಿಭಾನ್ವಿತ ಆಟಗಾರರು

ಮೈಸೂರು,ಜೂ.15(ಎಂಕೆ)–ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ 5ನೇ ಆವೃತ್ತಿಯಲ್ಲಿ ಎನ್‌ಆರ್ ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡಕ್ಕೆ ಹೊಸದಾಗಿ ಇಬ್ಬರು ಪ್ರತಿಭಾನ್ವಿತ ಆಟಗಾರರು ಸೇರ್ಪಡೆಯಾಗಿದ್ದಾರೆ.

ಮೈಸೂರು ವಾರಿಯರ್ಸ್ ತಂಡ ಈ ವರ್ಷ ನಡೆಸಿದ ಪ್ರತಿಭಾನ್ವೇಷಣೆಯಲ್ಲಿ ಸ್ಥಳೀಯ ಆಟಗಾರರಾದ ಗೌತಮ್ ಸಾಗರ್ ಮತ್ತು ಕೆ.ಎಸ್.ಲಂಕೇಶ್ ತಂಡಕ್ಕೆ ಆಯ್ಕೆಯಾಗಿದ್ದು, ಮುಂಬರುವ 5ನೇ ಆವೃತ್ತಿಯಲ್ಲಿ ಭಾಗವಹಿಸಲಿದ್ದಾರೆ. ಜೋ ಜೋ ಕ್ರಿಕೆಟ್ ಕ್ಲಬ್ ಪ್ರತಿನಿಧಿಸುವ ಬಲಗೈ ವೇಗಿ ಗೌತಮ್ ಸಾಗರ್ ಮತ್ತು ಎಡಗೈ ಸ್ಪಿನ್ನರ್ ಕೆ.ಎಸ್. ಲಂಕೇಶ್ ಪ್ರತಿಭಾನ್ವೇಷಣೆಯಲ್ಲಿ ತಮ್ಮ ಕೌಶಲ್ಯ ಪ್ರದರ್ಶಿಸುವ ಮೂಲಕ ತಂಡದ ತರಬೇತುದಾರರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಬಹು ನಿರೀಕ್ಷಿತ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ 5ನೇ ಆವೃತ್ತಿಯಲ್ಲಿ ತಂಡ ಪರ ಆಡಲು ಅವಕಾಶ ಪಡೆದಿದ್ದಾರೆ.

2026ರ ಮಹಾರಾಜ ಟ್ರೋಫಿಗೆ ಸಿದ್ಧವಾಗುತ್ತಿರುವ ವಾರಿಯರ್ಸ್ ತಂಡಕ್ಕೆ ಗೌತಮ್ ಸಾಗರ್ ಮತ್ತು ಲಂಕೇಶ್ ಅವರನ್ನು ಮೈಸೂರು ವಾರಿಯರ್ಸ್ ತಂಡಕ್ಕೆ ಸ್ವಾಗತಿಸಲು ನಮಗೆ ತುಂಬಾ ಸಂತೋಷವಾಗಿದೆ. ತಳಮಟ್ಟದ ಪ್ರತಿಭೆಯನ್ನು ಗುರ್ತಿಸಿ, ಅವಕಾಶ ನೀಡುವ ವೇದಿಕೆ ಇದಾಗಿದೆ. ತಂಡಕ್ಕೆ ಹೊಸ ಶಕ್ತಿ ಸೇರ್ಪಡೆಯಾಗಿದ್ದು, ಈ ವರ್ಷ ಚಾಂಪಿಯನ್ ಆಗುವ ವಿಶ್ವಾಸವಿದೆ ಎಂದು ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೌತಮ್ ಸಾಗರ್ ಕೆ.ಎಸ್.ಲಂಕೇಶ್

ಇಂದು ಮೈಸೂರಿಗೆ ಎಸ್‌ಐಆರ್ ಜಾಗೃತಿ ಜಾಥಾ

ಜಾತ್ಯಾತೀತ ಪಕ್ಷ, ಪ್ರಗತಿಪರ ಸಂಘಟನೆಗಳಿಂದ ಸ್ವಾಗತ

ಮೈಸೂರು, ಜೂ.15 (ಜಿಎ)– ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳು ಹಾಗೂ ಕರ್ನಾಟಕ ಜನಪರ ಸಂಘಟನೆಗಳ ಒಕ್ಕೂಟವು ರಾಜ್ಯಾದ್ಯಂತ ಎಸ್‌ಐಆರ್ ವಿರೋಧಿಸಿ ಹಮ್ಮಿಕೊಂಡಿರುವ ಜಾಗೃತಿ ಜಾಥಾವು ಮಂಗಳವಾರ (ಜೂ.16)ಮಧ್ಯಾಹ್ನ 1.30ಕ್ಕೆ ಪುರಭವನ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆ ಮುಂಭಾಗಕ್ಕೆ ಆಗಮಿಸಲಿದೆ.

ಜಾತ್ಯಾತೀತ ಪಕ್ಷಗಳು ಹಾಗೂ ಪ್ರಗತಿಪರ ಸಂಘಟನೆ ಮುಖಂಡರು ಜಾಥಾ ಸ್ವಾಗತಿಸಲಿದ್ದೇವೆ ಎಂದು ಪ್ರಗತಿಪರ ಮುಖಂಡ ಕಮಲ್ ಗೋಪಿನಾಥ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾನದ ಹಕ್ಕು ಕಸಿಯುತ್ತಿರುವ ಸತ್ಯವನ್ನು ಜನರಿಗೆ ತಿಳಿಸಲು ಜಾಥಾ ನಡೆಸುತ್ತಿದ್ದು, ಮಂಗಳವಾರ ಬೆಳಿಗ್ಗೆ ಹುಣಸೂರಿನ ಹಾಡಿಯಲ್ಲಿ ನಂತರ ಹುಣಸೂರು ಪಟ್ಟಣ, ಹೆಚ್.ಡಿ.ಕೋಟೆಯಲ್ಲಿ ಜಾಗೃತಿ ಜಾಥಾ ನಡೆಯಲಿದೆ. ಮೈಸೂರು ನಗರದಲ್ಲಿ ಪುರಭವನದ ಮುಂಭಾಗ, ಮಿಲಾದ್ ಪಾರ್ಕ್ ಹಾಗೂ ಅಶೋಕಪುರಂನ ಬುದ್ಧ ವಿಹಾರದಲ್ಲಿ ಸಭೆಗಳನ್ನು ನಡೆಸಲಿದ್ದೇವೆ. ಸಾರ್ವಜನಿಕರಿಗೆ ಮುಕ್ತ ಅವಕಾಶ ಇದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಎಸ್‌ಡಿಪಿಐ ಪಕ್ಷದ ಅಮ್ಜದ್ ಖಾನ್, ಪ್ರಗತಿಪರ ಸಂಘಟನೆಗಳ ಮುಖಂಡರಾದ ಪೂರ್ಣಾನಂದ, ರತಿರಾವ್, ಸವಿತಾ ಪ.ಮಲ್ಲೇಶ್, ರೈತ ಸಂಘದ ಮರಂಕಯ್ಯ ಉಪಸ್ಥಿತರಿದ್ದರು.

ಉನ್ನತ ಶಿಕ್ಷಣ ಪಡೆದು ದೊಡ್ಡ ಮಟ್ಟದ ಸಾಧನೆ ಮಾಡಿ

ಐಎಎಸ್ ಇನ್‌ಸೈಟ್ ನಿರ್ದೇಶಕ ವಿನಯ್‌ಕುಮಾರ್ ವಿದ್ಯಾರ್ಥಿಗಳಿಗೆ ಕರೆ

ಮೈಸೂರು, ಜೂ.15(ಎಂಟಿವೈ)– ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶ್ರದ್ಧೆಯಿಂದ ಉನ್ನತ ಶಿಕ್ಷಣ ಪಡೆದು ದೊಡ್ಡ ಮಟ್ಟದ ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸಬೇಕು ಎಂದು ಐಎಎಸ್ ಇನ್‌ಸೈಟ್ಸ್ ನಿರ್ದೇಶಕ ಜಿ.ಬಿ.ವಿನಯ್ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕನಕ ಸಮುದಾಯ ಭವನದಲ್ಲಿ ಕನಕಶ್ರೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆ ಹೊಂದಿದ ಕುರುಬ, ಹಾಲುಮತ, ಕಾಡು ಕುರುಬ, ಜೇನು ಕುರುಬ ಸಮುದಾಯದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಮೈಸೂರಿನ ಕನಕ ಸಮುದಾಯ ಭವನದಲ್ಲಿ ಕುರುಬ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸುವ ಕಾರ್ಯಕ್ರಮವನ್ನು ಐಎಎಸ್ ಇನ್‌ಸೈಟ್ಸ್ ನಿರ್ದೇಶಕ ವಿನಯ್‌ಕುಮಾರ್ ಉದ್ಘಾಟಿಸಿದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಉತ್ತಮ ಶಿಕ್ಷಣದತ್ತ ಗಮನಹರಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಪಣ ತೊಡಬೇಕು. ಶಿಕ್ಷಣ ಪಡೆಯುವಾಗಲೇ ವಿದ್ಯಾರ್ಥಿಗಳು ದೊಡ್ಡ ಮಟ್ಟದ ಸಾಧನೆಯ ಗುರಿ ಇಟ್ಟುಕೊಳ್ಳಬೇಕು. ಇದರಿಂದ ಸಾಧನೆ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣುವುದಿಲ್ಲ. ಈ ಕಾರಣಕ್ಕಾಗಿ ದೊಡ್ಡ ಸಾಧನೆ ತೋರಲು ಸಾಧ್ಯವಾಗುತ್ತಿಲ್ಲ. ಸಣ್ಣದೊಂದು ಹುದ್ದೆ ಸಿಕ್ಕರೆ ಅದರಲ್ಲಿಯೇ ನಾವು ಸಂತೃಪ್ತಿ ಕಾಣಲು ಬಯಸುತ್ತೇವೆ. ಕಾನೂನು ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗುವ ಕನಸು ಕಾಣಬೇಕು ಎಂದರು.

ಅದೇ ರೀತಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ತಯಾರಿ ಮಾಡಿಕೊಳ್ಳಬೇಕು. ದೊಡ್ಡ ಕನಸುಗಳನ್ನು ಕಾಣುವ ವಿಚಾರದಲ್ಲೂ ನಾವು ಭಯಪಡುತ್ತೇವೆ. ಈ ಭಯದಿಂದ ನಮ್ಮ ಆಯ್ಕೆಗಳು ಕಡಿಮೆಯಾಗುತ್ತವೆ. ವಿದ್ಯಾರ್ಥಿಗಳು ಮೊದಲು ಕಂಫರ್ಟ್ ಜೋನ್‌ನಿಂದ ಹೊರಬಂದು ದೊಡ್ಡ ಸಾಧನೆ ಕಡೆ ಗಮನಹರಿಸಬೇಕು. ಕೆಲವರು ಶಿಕ್ಷಕರ ಹುದ್ದೆ ಪಡೆಯುವುದನ್ನೇ ದೊಡ್ಡ ಸಾಧನೆ ಅಂದು ಕೊಂಡು ಅದರಲ್ಲಿಯೇ ಸಂತೃಪ್ತಿ ಪಡುತ್ತಾರೆ. ಅದಕ್ಕೂ ಮೀರಿ ಉನ್ನತ ಹುದ್ದೆಗಳನ್ನು ಅಲಂಕರಿಸಲು ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಮಣ್ಯ, ಕನಕಶ್ರೀ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಟಿ.ಬಿ.ಬಳಗಾವಿ, ಕಾರ್ಯದರ್ಶಿ ಪಿ.ಎನ್. ಕೃಷ್ಣಮೂರ್ತಿ, ಖಜಾಂಚಿ ಎಂ. ಪ್ರಕಾಶ್ ಟ್ರಸ್ಟಿಗಳಾದ ಮುನಿಚೌಡಪ್ಪ, ಕೆ.ಜಯರಾಮು, ಎಂ.ಮಹದೇವ, ಸಿ.ಬಸವರಾಜು, ಪಿ.ರಂಗಧಾಮಯ್ಯ, ಸಂಗಮದ್, ಕಮಲಾ ಅನಂತರಾಮ್ ಹಾಗೂ ಇತರರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.06.2026 ಮಂಗಳವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್,ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್, ಕುತ್ತಿಗೆ ನೋವು ಹಾಗೂ ಬೆನ್ನು ನೋವಿಗೆ ಚಿಕಿತ್ಸಾ ಶಿಬಿರ, ಸಯಾಟಿಕ್/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ. ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡುಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30 ರಿಂದ.
- **ಬೃಂದಾವನ ಬಡಾವಣೆಯ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್:** 36ನೇ ವರ್ಷದ ವಾರ್ಷಿಕೋತ್ಸವ, ಸಂಜೆ 6ರಿಂದ ಗಣಪತಿ ಪೂಜೆ, ಮಹಾ ಸಂಕಲ್ಪ, ವಾಸ್ತು ವರುಣ ಪೂಜೆ, ಪುಣ್ಯಾಹ, ಆಚಾರ್ಯ, ವೈದಿಕರ ಋತ್ವಿಕ್‌ವರ್ಣ, ಪಂಚಗವ್ಯ ಶುದ್ಧಿ, ಯಾಗ ಶಾಲಾ ಪ್ರವೇಶ, ಅಗ್ನಿ ಪ್ರತಿಷ್ಠಾಪನೆ, ಕಲಾ ಕಲಶ ಸ್ಥಾಪನೆ, ಆಕರ್ಷಣೆ, ಷೋಡಶ ಉಪಚಾರ ಪೂಜೆ. ಪ್ರಧಾನ ದೇವತೆಗಳು–ವಾಸ್ತು ಪೂಜೆ, ರಾಕ್ಷೋಘ್ನ ಪೂಜೆ, ಅಘೋರ ರುದ್ರ ಪೂಜೆ. ಉಪ ದೇವತೆಗಳು: ದಿಕ್ಪಾಲಕ ಪೂಜೆ, ಸಾದ್ಗುಣ್ಯ ಪೂಜೆ, ಕ್ಷೇತ್ರಪಾಲಕ ಪೂಜೆ, ನಂತರ ಷೋಡಶ ಉಪಚಾರ ಪೂಜೆ, ನಂತರ ಪ್ರಧಾನ ಮತ್ತು ಉಪದೇವತೆ ಹೋಮ, ಮಹಾಬಲಿ, ಪೂರ್ಣಾಹುತಿ, ಮಹಾಮಂಗಳಾರತಿ, ಸ್ಥಳ: ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್, ಬೃಂದಾವನ ಬಡಾವಣೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತುಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥ ಡಾ.ಶೈಲೇಶ್‌ರಾಜ್ ಅರಸ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಲಕ್ಷ್ಮೀನಾರಾಯಣ, ನಿರ್ಮಾಣ: ಎನ್.ಕೇಶವಮೂರ್ತಿ, 8.30 ಯೋಗದತ್ತ ಜಗತ್ತು– ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ :ಎಂ.ಎಸ್. ಸುನೀಲ್–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಬಿ. ಜಿ. ಕವಿತಾ ಹಾಗೂ ಎಸ್. ಲಕ್ಷ್ಮೀನಾರಾಯಣ

ಮಧ್ಯಾಹ್ನ:12.05 ವನಿತಾ ವಿಹಾರ, ಕವನ ಮಾಲೆ–ಮಹಿಳೆಯರ ಸ್ವರಚಿತ ಕವನಗಳ ವಾಚನ, ಪ್ರಸ್ತುತಿ–ದಿಗ್ವಿಜಯ್ .ಬಿ, 12.35 ದೇವರನಾಮ–ಮೇಧಾ ಮಂಜುನಾಥ್, 12.45 ಕನ್ನಡದಲ್ಲಿ ಭಾಷಣ, ಮಂಡ್ಯದ ನಂದಾದೀಪ ಅವರಿಂದ ಸಣ್ಣಕತೆ ಗಿಳಿಶಾಸ್ತ್ರದ ಕಂಟಕ, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಬಿ.ಆರ್.ಗೀತಾ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬೋನಾಳ ಶಂಕರ ಪ್ರಕಾಶ್–ವೀಣಾವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ, ಉಮಂಗ್, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆರಂಗ–ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ಕೃಷಿಯಲ್ಲಿ ವಿವಿಧ ಅಂತರಗಳ ಅಳವಡಿಕೆ ಮತ್ತು ಹಸಿರೆಲೆ ಗೊಬ್ಬರದ ಬೆಳೆಗಳ ಅಂತರ ಬೇಸಾಯ ಈ ಕುರಿತು ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಂ. ಆರ್. ಭವ್ಯಾ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅಲಿ ಅಹ್ಮದ್ ಹುಸೇನ್ ಮತ್ತು ಸಂಗಡಿಗರು – ಶಹನಾಯ್ ವಾದನ, 8.30 ರಂಗಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎನ್.ರಮಣಿ–ಕೊಳಲು ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಜೂನ್ 16 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 61 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲಿ ಹೊತ್ತಿ ಉರಿದ ಪಬ್

ಇಬ್ಬರು ಸಜೀವ ದಹನ

■ ದಟ್ಟಗಳ್ಳಿಯ ರೆಸ್ಟೋಬಾರ್‌ನಲ್ಲಿ ಅವಘಡ ■ ಅಡುಗೆ ಸಿಬ್ಬಂದಿ ಬೆಂಕಿಗಾಹುತಿ ■ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಬೆಂಕಿ ■ ಸಣ್ಣಪುಟ್ಟ ಗಾಯದೊಂದಿಗೆ ಮಾಲೀಕ ಹಾಗೂ ನಟ ಪ್ರೀತಂ ಸೇರಿ 7ಕ್ಕೂ ಹೆಚ್ಚು ಮಂದಿ ಪಾರು ■ ಅಲಂಕಾರಕ್ಕೆ ಬಳಸಿದ್ದ ಹುಲ್ಲು, ಬಿದಿರಿನಿಂದಾಗಿ ವೇಗವಾಗಿ ವ್ಯಾಪಿಸಿದ ಅಗ್ನಿ ಜ್ವಾಲೆ




ಬೆಂಕಿ ಹೊತ್ತಿ ಉರಿಯುತ್ತಿರುವ ದೃಶ್ಯ. ಅಸುನೀಗಿದವರ ಶವ (ಎಡಚಿತ್ರ) ಹೊರತರುತ್ತಿರುವುದು.

ಮೈಸೂರು, ಜೂ.15(ಪಿಎಂ)– ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿಯ ಮಾರಾ ರೆಸ್ಟೋಬಾರ್ ಪಬ್‌ನಲ್ಲಿ ಸೋಮವಾರ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಇಲ್ಲಿನ ಅಡುಗೆ ಕೆಲಸಗಾರರಿಬ್ಬರು ಸಜೀವ ದಹನವಾಗಿದ್ದಾರೆ.

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಮೂಲದ ಸಾಹಿನ್ (26) ಹಾಗೂ ನೇಪಾಳ ಮೂಲದ ಪ್ರಕಾಶ್ (24) ಬೆಂಕಿಗಾಹುತಿಯಾಗಿ ಮೃತಪಟ್ಟ ದುರ್ದೈವಿಗಳು. ಇವರಿಬ್ಬರು ಈ ರೆಸ್ಟೋಬಾರ್‌ನ ಅಡುಗೆ ಸಿಬ್ಬಂದಿಯಾಗಿದ್ದು, ಹಠಾತ್ ಬೆಂಕಿ ವ್ಯಾಪಿಸಿ ಹೊರಬರಲಾಗದೇ ಸಜೀವ ದಹನವಾಗಿದ್ದಾರೆ.

ಎರಡನೇ ಅಂತಸ್ತಿನಲ್ಲಿದ್ದ ಮಾರಾ ರೆಸ್ಟೋಬಾರ್‌ನಲ್ಲಿ ಮಧ್ಯಾಹ್ನ ಸಂಭವಿಸಿದ ದುರಂತದಲ್ಲಿ ಬಾರ್ ಮಾಲೀಕ ಪ್ರೀತಮ್ ಪುನೀತ್ (40), ಮ್ಯಾನೇಜರ್ ಅವಿನಾಶ್ (25), ಸಿಬ್ಬಂದಿ ಯೋಗೇಶ್ (30) ಸೇರಿದಂತೆ ಹಲವು ಮಂದಿಗೆ ಸಣ್ಣಪುಟ್ಟ ಸುಟ್ಟ ಗಾಯಗಳಾಗಿವೆ. ಗ್ರಾಹಕರಾದ ಮಂಡ್ಯದ ಸೋನಾ (25), ಬೆಂಗಳೂರಿನ ರಮೇಶ್ (25), ರೆಸ್ಟೋಬಾರ್‌ನ ಸಿಬ್ಬಂದಿಗಳಾದ ಮಹದೇವ ಪ್ರಸಾದ್, ಪ್ರಜ್ವಲ್ ಅವರಿಗೂ ಸಣ್ಣಪುಟ್ಟ ಸುಟ್ಟ ಗಾಯಗಳಾಗಿದ್ದು, ಎಲ್ಲಾ ಗಾಯಾಳುಗಳನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಈ ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ.


ಸಾಹಿನ್


ಪ್ರಕಾಶ್



ಲ್ಯಾಡರ್ ಸಹಾಯದಿಂದ 12 ರಿಂದ 15 ಮಂದಿ ರಕ್ಷಣೆ

ಮಾಧ್ಯಮದವರೊಂದಿಗೆ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ರಂಗನಾಥ್ ಮಾತನಾಡಿ, ಮಧ್ಯಾಹ್ನ 3.15ರ ವೇಳೆಗೆ ಸರಸ್ವತಿಪುರಂನ ಅಗ್ನಿ ಶಾಮಕ ಕಂಟ್ರೋಲ್ ರೂಮ್‌ಗೆ ಕರೆ ಬಂದಿತು. ಕೂಡಲೇ ಸರಸ್ವತಿಪುರಂ ಹಾಗೂ ಹೆಬ್ಬಾಳ ಅಗ್ನಿ ಶಾಮಕ ಠಾಣೆಯಿಂದ ವಾಹನಗಳು ಹಾಗೂ ಸಿಬ್ಬಂದಿ ಧಾವಿಸಿ ಬಂದಿದ್ದಾರೆ. ಬಂದು ನೋಡಿದಾಗ, ಗ್ರಾಹಕರು ಹಾಗೂ ಸಿಬ್ಬಂದಿ ರಕ್ಷಣೆಗಾಗಿ ಎದುರು ನೋಡುತ್ತಿದ್ದರು. ತಕ್ಷಣ ವಾಹನಗಳಿಂದ ಎರಡು ಲ್ಯಾಡರ್ ಮೂಲಕ 12ರಿಂದ 15 ಮಂದಿಯನ್ನು ರಕ್ಷಣೆ ಮಾಡಲಾಯಿತು. ಸರ್ಚ್ ಆಪರೇಷನ್ ಮಾಡಿದಾಗ ಒಳಗಡೆ ಇಬ್ಬರು ಪುರುಷರು ಮೃತಪಟ್ಟಿರುವುದು ಕಂಡುಬಂದಿತು. ಆ ಮೃತದೇಹಗಳನ್ನು ತಂದು ಪೊಲೀಸರ ವಶಕ್ಕೆ ಒಪ್ಪಿಸಲಾಯಿತು. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಸಮರ್ಪಕವಾದ ಅಗ್ನಿ ಸುರಕ್ಷತಾ ಕ್ರಮಗಳನ್ನು ಇಲ್ಲಿ ಹೊಂದಿರಲಿಲ್ಲವೆಂಬುದು ನಮಗೆ ಕಂಡು ಬಂದಿದೆ ಎಂದು ಅವರು ಹೇಳಿದರು.

ಒಣ ಹುಲ್ಲು ಮತ್ತು ಬಿದಿರು ಬಳಸಿ ದಕ್ಷಿಣ ಆಫ್ರಿಕಾದ ಮಾರಾ ಜನಾಂಗದ ಶೈಲಿಯಲ್ಲಿ ಈ ರೆಸ್ಟೋಬಾರ್ ಅನ್ನು ಅಲಂಕಾರ ಮಾಡಲಾಗಿತ್ತು. ಈ ಹುಲ್ಲು ಮತ್ತು ಬಿದಿರು ಬಂಬೂಗಳಿಂದ ಬೆಂಕಿ ವೇಗವಾಗಿ ವ್ಯಾಪಿಸಿ ಹೆಚ್ಚಿನ ಅನಾಹುತಕ್ಕೆ ಕಾರಣವಾಯಿತು ಎನ್ನಲಾಗುತ್ತಿದೆ. ಇಂದು ಮಧ್ಯಾಹ್ನ ಸುಮಾರು 3 ಗಂಟೆ ವೇಳೆಗೆ ರೆಸ್ಟೋರೆಂಟ್‌ನಲ್ಲಿ ಅಲಂಕಾರಕ್ಕಾಗಿ ಅಳವಡಿಸಿದ್ದ ವಿದ್ಯುತ್ ಬಲ್ಬ್‌ಗಳು, ಎಲ್‌ಇಡಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಕಿಡಿಗಳು ಹೊಮ್ಮಿ ಬೆಂಕಿ ಕಾಣಿಸಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿದ್ದು, ಪ್ರಕರಣದ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದೂ ತಿಳಿಸಲಾಗಿದೆ.


ಎರಡನೇ ಅಂತಸ್ತಿನ ರೆಸ್ಟೋಬಾರ್‌ನಲ್ಲಿ ಬೆಂಕಿಯಿಂದ ಆಸನ ಸೇರಿದಂತೆ ಎಲ್ಲಾ ಸಾಮಗ್ರಿ ಸುಟ್ಟು ಕರಕಲಾಗಿರುವುದು.

ಪ್ರತ್ಯಕ್ಷದರ್ಶಿಯೊಬ್ಬರು ಮಾಧ್ಯಮದವರೊಂದಿಗೆ ಮಾತನಾಡಿ, ಸ್ನೇಹಿತರೊಂದಿಗೆ ಮಾತನಾಡುತ್ತಾ ನಿಂತಿರುವಾಗ ಪಬ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತು. ಕೆಲವು ಗ್ರಾಹಕರು ತಕ್ಷಣ ಹೊರ ಬಂದರು. ಸುಮಾರು ■ 6ನೇ ಪುಟಕ್ಕೆ

ವಿರಾಜಪೇಟೆ ರೆಸಾರ್ಟ್‌ನಲ್ಲಿ ಕೊಳಕ್ಕೆ ಇಳಿದ ತಕ್ಷಣ ಪ್ರವಾಸಿಗ ಸಾವು

ಮಡಿಕೇರಿ, ಜೂ.15– ಪ್ರವಾಸಿಗರೊಬ್ಬರು ಈಜುಕೊಳಕ್ಕೆ ಇಳಿಯುತ್ತಿದ್ದಂತೆ ಉಸಿರಾಟ ಸಮಸ್ಯೆಯಿಂದ ಮೃತಪಟ್ಟ ಘಟನೆ ವಿರಾಜಪೇಟೆ ಹೊರ ವಲಯದ ಪ್ರತಿಷ್ಠಿತ ರೆಸಾರ್ಟ್‌ನಲ್ಲಿ ನಡೆದಿದೆ.




ಗೋವಾದ ಪಣಜಿಯಿಂದ ವಿರಾಜಪೇಟೆ ಸಮೀಪದ ರೆಸಾರ್ಟ್‌ಗೆ ಆಗಮಿಸಿದ್ದ ಮನೋಜ್ ಆನಂದ್(57) ಮೃತ ದುರ್ದೈವಿಯಾಗಿದ್ದಾರೆ. ಸೋಮವಾರ ಮಧ್ಯಾಹ್ನ 2 ಗಂಟೆಗೆ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ರೆಸಾರ್ಟ್‌ಗೆ ಆಗಮಿಸಿದ್ದರು. 2.30ರ ವೇಳೆಗೆ ಮನೋಜ್ ಆನಂದ್ ಈಜುಕೊಳಕ್ಕೆ ಇಳಿಯುತ್ತಿದ್ದಂತೆ ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡು ಹಠಾತ್ ನೀರಿನಲ್ಲಿ ಮುಳುಗಿದ್ದಾರೆ. ತಕ್ಷಣ ರೆಸಾರ್ಟ್ ಸಿಬ್ಬಂದಿ ಅವರನ್ನು ನೀರಿನಿಂದ ಮೇಲೆತ್ತಿ ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ಕರೆದೊಯ್ದರಾದರೂ ■ 6ನೇ ಪುಟಕ್ಕೆ

ಆರ್‌ಎಸ್‌ಎಸ್ ಲೆಕ್ಕ–ಪತ್ರ ಕೊಡಿ...!

ಮೋಹನ್ ಭಾಗವತ್‌ಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರ




ಬೆಂಗಳೂರು, ಜೂ.15– ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧದ ವಾಗ್ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೋಮವಾರ ಸಂಘದ ನೋಂದಣಿ ಬಗ್ಗೆ ಸ್ಪಷ್ಟನೆ ಕೋರಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದಿದ್ದಾರೆ.


ಮೋಹನ್ ಭಾಗವತ್

ಮೋಹನ್ ಭಾಗವತ್‌ಗೆ ಬರೆದ ಪತ್ರವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ಮೊದಲನೆಯದಾಗಿ, 100 ವರ್ಷಗಳನ್ನು ಪೂರೈಸಿದ ಆರ್‌ಎಸ್‌ಎಸ್‌ಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

60,000ಕ್ಕೂ ಹೆಚ್ಚು ಶಾಖೆಗಳು ಮತ್ತು ಕೋಟಿಗಟ್ಟಲೆ ಸ್ವಯಂಸೇವಕರನ್ನು ಹೊಂದಿರುವುದಾಗಿ ಪ್ರತಿಪಾದಿಸುವ ಸಂಸ್ಥೆಯು ಪಾರದರ್ಶಕತೆ ಮತ್ತು ಸಾಂವಿಧಾನಿಕ ಹೊಣೆಗಾರಿಕೆಯನ್ನು ಎತ್ತಿಹಿಡಿಯಬೇಕು ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ಅತ್ಯುನ್ನತ ಮತ್ತು ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆ ಅಖಿಲ ಭಾರತೀಯ ಪ್ರತಿನಿಧಿ ಸಭಾ ಬಿಡುಗಡೆ ಮಾಡಿದ 2025–26ರ ವಾರ್ಷಿಕ ವರದಿಯ ಪ್ರಕಾರ, ಕರ್ನಾಟಕದಲ್ಲಿ 4,127 ದೈನಂದಿನ ಶಾಖೆಗಳು, 1,389 ಸಾಪ್ತಾಹಿಕ ಮಿಲನ್‌ಗಳು ಮತ್ತು 60 ಮಾಸಿಕ ಮಂಡಳಿಗಳನ್ನು ಹೊಂದುವ ಮೂಲಕ ಸಂಘಟನೆಯು ಭಾರಿ ಹೆಜ್ಜೆ ಗುರುತನ್ನು ಹೊಂದಿದೆ.


ಪ್ರಿಯಾಂಕ್ ಖರ್ಗೆ

ಇಷ್ಟೊಂದು ಬೃಹತ್ ಗಾತ್ರ, ಪ್ರಭಾವ ಮತ್ತು ವ್ಯಾಪ್ತಿಯನ್ನು ಹೊಂದಿರುವುದರಿಂದಲೇ, ಆರ್‌ಎಸ್‌ಎಸ್ ಸಂಘಟನೆಯು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾಂವಿಧಾನಿಕ ಅನುಸರಣೆಯ ಉನ್ನತ ಮಾನದಂಡಗಳನ್ನು ಕಾಯ್ದುಕೊಳ್ಳುವುದು ಅತ್ಯಗತ್ಯವಾಗಿದೆ ಎಂದು ಅವರು ಪತ್ರದಲ್ಲಿ ■ 6ನೇ ಪುಟಕ್ಕೆ

ಇನ್ನು ಕರ್ನಾಟಕದ ಮತದಾರರಿಗೆ ಮಾತ್ರವೇ ಗ್ಯಾರಂಟಿಗಳು!

● ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟನೆ ● ಅನರ್ಹರಿಗೆ ಅನುಕೂಲವಾಗುವುದನ್ನು ತಡೆಯುವ ಕೆಲಸವನ್ನಷ್ಟೇ ಮಾಡುತ್ತಿದ್ದೇನೆ

ಬೆಂಗಳೂರು, ಜೂ.15(ಕೆಎಂಶಿ)– ತಲಾ ಆದಾಯ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು, ನಮ್ಮ ಸರ್ಕಾರ ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಆದರೆ, ಕರ್ನಾಟಕದ ಮತದಾರರಿಗೆ ಮಾತ್ರವೇ ಇನ್ನು ಗ್ಯಾರಂಟಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.




ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತದೆ ಎಂಬುದಾಗಿ ವಿರೋಧ ಪಕ್ಷಗಳು ನಾವು ಏನೇ ಒಳ್ಳೆಯದು ಮಾಡಲು ಮುಂದಾದರೂ ಅಡ್ಡಗಾಲು ಹಾಕುತ್ತವೆ. ಅವರಿಂದ ಆಗದ ಕೆಲಸ ನಾವು ಮಾಡುತ್ತಿದ್ದೇವೆ ಎಂದರು. ಗ್ಯಾರಂಟಿ ಯೋಜನೆ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡಲು ಮುಂದಾಗಿದ್ದೇವೆ. ಆರಂಭದಲ್ಲಿ ಕೆಲವು ಫಲಾನುಭವಿಗಳು ಬೇರೆಯವರ ದೂರವಾಣಿ ಸಂಖ್ಯೆ ಹಾಗೂ ಇತರರ ಮಾಹಿತಿ ನೀಡಿದ್ದಾರೆ. ಬೇರೆಯವರ ಖಾತೆಗೆ ಹಣ ಹೋಗುತ್ತಿರುವ ಬಗ್ಗೆ ಮಾಹಿತಿ ಇದೆ. ಫಲಾನುಭವಿಗಳ ಖಾತೆಗೆ ಹಣ ಹೋಗುವಂತೆ ಮಾಡುವುದು ಸರ್ಕಾರದ ಉದ್ದೇಶ. ಅನ್ಯ ರಾಜ್ಯದವರಿಗೆ ಕರ್ನಾಟಕ ಸರ್ಕಾರದ ಯೋಜನೆ ನೀಡುವುದಿಲ್ಲ. ಉಚಿತ ವಿದ್ಯುತ್ ನಮ್ಮ ರಾಜ್ಯದ ಮತದಾರರಿಗೆ ದೊರಕಬೇಕೇ ಹೊರತು, ಬೇರೆ ರಾಜ್ಯದವರಿಗಲ್ಲ. ಆದ್ದರಿಂದ ಅರ್ಹ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ■ 6ನೇ ಪುಟಕ್ಕೆ

ಗ್ಯಾರಂಟಿಗಳು ಈ ಎರಡು ವರ್ಷ ಮಾತ್ರವಲ್ಲ ಮತ್ತೆ ಅಧಿಕಾರಕ್ಕೆ ಬಂದ ನಂತರವೂ ಮುಂದುವರೆಯುತ್ತವೆ

ವಿಪಕ್ಷಗಳ ಅಪಪ್ರಚಾರಕ್ಕೆ ಕಿವಿಗೊಡಬೇಡಿ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಯ

ಬೆಂಗಳೂರು, ಜೂ.15(ಕೆಎಂಶಿ)– ಪಂಚ ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ, ಮುಂದಿನ ಎರಡು ವರ್ಷ ಮಾತ್ರವಲ್ಲ, ಮುಂದಿನ ಚುನಾವಣೆಯಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರಲಿದ್ದು, ನಂತರವೂ ಮುಂದುವರಿಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಯೋಜನೆಗಳ ಅನುಷ್ಠಾನದಲ್ಲಿನ ದೋಷಗಳನ್ನು ಸರಿಪಡಿಸುವ ಕಾರ್ಯ ಪ್ರಾರಂಭದಿಂದಲೇ ನಡೆಯುತ್ತಿದೆ, ಈಗಲೂ ಮುಂದುವರೆದಿದೆ, ಈ ಯೋಜನೆಗಳ ಫಲಾನುಭವಿಗಳು ವಿರೋಧ ಪಕ್ಷಗಳ ಅಪಪ್ರಚಾರಕ್ಕೆ ಕಿವಿಗೊಟ್ಟು ಆತಂಕಕ್ಕೆ ಒಳಗಾಗಬಾರದು ಎಂದಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಬಿಜೆಪಿ ಮೂಲತಃ ಬಡವರ ವಿರೋಧಿ ಪಕ್ಷ. ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಜೈಲರ್: ನಾಳೆ ನಿನ್ನನ್ನು ಗಲ್ಲಿಗೇರಿಸುತ್ತೇವೆ. ನಿನ್ನ ಕೊನೆ ಆಸೆ ಏನು?
ಖೈದಿ: ತಲೆ ಕೆಳಗೆ ಮಾಡಿ ಕಾಲು ಮೇಲೆ ಮಾಡಿ ನೇಣು ಹಾಕಿ!

ಮೈಸೂರು ಮಿತ್ರ

ಮಂಗಳವಾರ, ಜೂನ್ 16, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕೆಲವು ಸಲ ಪರಿಸ್ಥಿತಿ ಬದಲಾಯಿಸಲು ಆಗುವುದಿಲ್ಲ ಎಂದು ತಿಳಿದ ಮೇಲೆ ಮನಸ್ಥಿತಿಯನ್ನೇ ಬದಲಾಯಿಸಿಕೊಳ್ಳಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಾಲು ಕುಡಿದು ಹಾಗಲಕಾಯಿ ತಿಂದಂತೆ

ನಿಮ್ಮ ಪತ್ರಗಳು

ಗೃಹ ಸಚಿವರು ಏನು ಮಾಡುತ್ತಾರೆ?

ಮಾನ್ಯರೆ,

ವರದಕ್ಷಿಣೆ ಕಿರುಕುಳ ಪ್ರಕರಣದಿಂದ ಆರೋಪಿಗಳ ಹೆಸರನ್ನು ಕೈಬಿಡಲು ಆರೋಪಿಗಳ ಕುಟುಂಬದಿಂದ ಲಂಚ ಪಡೆಯುತ್ತಿದ್ದ ಬೆಂಗಳೂರಿನ ಎಚ್ ಎ ಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಸೇರಿ ಮೂವರು ಸಿಬ್ಬಂದಿಯನ್ನು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದೆ. ಇದರಿಂದ ಕರ್ನಾಟಕದ ಪೊಲೀಸರ ಮಾನ ರಾಷ್ಟ್ರೀಯ ಮಟ್ಟದಲ್ಲಿ ಹರಾಜಾಗಿದೆ.

ಈ ಸುದ್ದಿಯು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಕರ್ನಾಟಕದ ಪೊಲೀಸರ ಸ್ಥೈರ್ಯಕ್ಕೆ ಧಕ್ಕೆ ತರುವ ಇಂತಹ ಘಟನೆಯಿಂದ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗುತ್ತದೆ. ಈ ಘಟನೆಯಿಂದ ನಮ್ಮ ಗೃಹ ಸಚಿವರ ಘನತೆಗೂ ಧಕ್ಕೆ ಉಂಟಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಗೃಹ ಸಚಿವರನ್ನು ನಿಂದಿಸಿ ಧಮಕಿ ಹಾಕಿದವರನ್ನು ಹೆಡೆಮುರಿ ಕಟ್ಟಲು ಪೊಲೀಸರಿಗೆ ಆದೇಶಿಸಿದ ಗೃಹ ಸಚಿವರು ಈಗ ಏನು ಮಾಡುತ್ತಾರೆ? ಯಾರ ವಿರುದ್ಧ ಯಾವ ಕ್ರಮ ಕೈಗೊಳ್ಳುತ್ತಾರೆ? ಯಾರಿಗೆ ನಿರ್ದೇಶನ ನೀಡುತ್ತಾರೆ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಇನ್ನಾದರೂ ಕಸಾಪ ಭ್ರಷ್ಟರ ಕೈಗೆ ಸಿಗದಂತಾಗಲಿ

ಮಾನ್ಯರೆ,

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ ಎರಡು ಕೋಟಿಗೂ ಅಧಿಕ ಅನುದಾನ ದುರ್ಬಳಕೆಯ ಹಗರಣ ಕನ್ನಡಿಗರ ಸಾಂಸ್ಕೃತಿಕ ಅಸ್ಮಿತೆಗೆ ಬಡಿದ ಭೀಕರ ಪೆಟ್ಟು. ಜವಾಬ್ದಾರಿಯುತ ಅಧ್ಯಕ್ಷರೇ ಆರ್ಥಿಕ ವಂಚನೆಯ ಆರೋಪ ಎದುರಿಸಿ ಆಜೀವ ಸದಸ್ಯತ್ವ ಕಳೆದುಕೊಳ್ಳುವಂತಾಗಿರುವುದು ನಾಲ್ಕು ಲಕ್ಷಕ್ಕೂ ಅಧಿಕ ಸದಸ್ಯರ ನಂಬಿಕೆಗೆ ಎಸಗಿದ ಮಹಾ ದ್ರೋಹವಾಗಿದೆ. ಈ ಸಾಂಸ್ಕೃತಿಕ ಪತನವನ್ನು ತಡೆಯಲು ಸರ್ಕಾರವು ತಕ್ಷಣವೇ ಕಠಿಣ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು. ನಿಷ್ಪಕ್ಷಪಾತ ತನಿಖೆಯ ಮೂಲಕ ದುರುಪಯೋಗವಾದ ಸಾರ್ವಜನಿಕರ ಪ್ರತಿ ರೂಪಾಯಿಯನ್ನು ವಸೂಲಿ ಮಾಡಬೇಕು. ಆಡಳಿತಾಧಿಕಾರಿ ಆಳ್ವಿಕೆಯನ್ನು ದೀರ್ಘಕಾಲ ಮುಂದುವರಿಸದೆ ತಕ್ಷಣ ಪಾರದರ್ಶಕ ಚುನಾವಣೆ ನಡೆಸಬೇಕು. ವೆಚ್ಚ ತಗ್ಗಿಸಲು ಡಿಜಿಟಲ್ ಮತದಾನ ಜಾರಿಗೊಳಿಸಬೇಕು. ಅಧ್ಯಕ್ಷರ ಸರ್ವಾಧಿಕಾರಕ್ಕೆ ಬ್ರೇಕ್ ಹಾಕಿ, ಬೈಲಾ ತಿದ್ದುಪಡಿಯ ಮೂಲಕ ಮಹಿಳೆಯರು ಹಿಂದುಳಿದ ವರ್ಗಗಳಿಗೆ ಕಡ್ಡಾಯ ಮೀಸಲಾತಿ ಹಾಗೂ ಸಮಾನ ಪ್ರಾತಿನಿಧ್ಯ ಕಲ್ಪಿಸಿ ಪರಿಷತ್ತಿನ ಸ್ವಾಯತ್ತತೆಯನ್ನು ರಕ್ಷಿಸಬೇಕು.

–ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಹೇಯ ಕೃತ್ಯ

ಮಾನ್ಯರೆ,

ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಬಾಬಾ ಸಾಹೇಬ ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿರುವ ಘಟನೆ ನಿಜಕ್ಕೂ ತಲೆ ತಗ್ಗಿಸುವಂಥ ಹೇಯ ಕೃತ್ಯವಾಗಿದೆ. ಈ ಕೃತ್ಯವನ್ನು ಎಸಗಿರುವ ಆರೋಪಿಯನ್ನು ಸ್ವತಃ ಗ್ರಾಮಸ್ಥರೇ ನೇರವಾಗಿ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಕೃತ್ಯವನ್ನು ಎಸಗಿರುವ ವ್ಯಕ್ತಿಯ ಹಿಂದೆ ಕೆಲಸ ಮಾಡಿರುವ ಕಾಣದ ಕೈಗಳು ಯಾವುದು ಎಂದು ತಕ್ಷಣವೇ ಹುಡುಕಿ ಅವರಿಗೆ ಕಾನೂನಿನ ಅಡಿಯಲ್ಲಿ ತಕ್ಕ ಶಿಕ್ಷೆ ನೀಡಲೇ ಬೇಕು. ಅಲ್ಲದೇ ಮತ್ತೆ ಮುಂದೆ ಈ ರೀತಿಯ ಯಾವುದೇ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು.

ಬಾಬಾ ಸಾಹೇಬರಲ್ಲದೆ ಬೇರೆ ಯಾವುದೇ ರಾಷ್ಟ್ರ ನಾಯಕರಿಗೆ ಈ ರೀತಿಯ ಅಪಮಾನಗಳು ಆಗದಂತೆ ಕಾನೂನಿನ ಅಡಿಯಲ್ಲಿ ಒಂದು ವಿಶೇಷ ಸಮಿತಿಯನ್ನು ರಚಿಸಿ ಇದನ್ನು ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಚರ್ಚಿಸಿ ಕಟ್ಟುನಿಟ್ಟಿನ ಆದೇಶವನ್ನು ಹೊರಡಿಸಬೇಕು. ಅದೇನೇ ಆಗಲಿ ಯಾವುದೇ ರಾಷ್ಟ್ರ ನಾಯಕರನ್ನು ಈ ರೀತಿಯಾಗಿ ಅವಮಾನಿಸುವುದು ದೇಶವೇ ತಲೆತಗ್ಗಿಸುವಂತದ್ದು.

–ರವಿಕುಮಾರ್, ಹರಳಿಪುರ, ಚಾಮರಾಜನಗರ ತಾ.

ರೈತ ಮಹಿಳೆಯರಿಗೆ ಆತ್ಮವಿಶ್ವಾಸ ತುಂಬಲಿ

ಮಾನ್ಯರೆ,

ರೈತ ದೇಶದ ಅಸ್ಮಿತೆ, ರೈತರದು ಸ್ವಾಭಿಮಾನದ ಬದುಕು, ರೈತರಿದ್ದರೇ ದೇಶ, ಇಡೀ ದೇಶಕ್ಕೆ ಅನ್ನ ನೀಡುವ ರೈತರನ್ನು ಗೌರವಿಸಿ, ಇಡೀ ಜಗತ್ತಿಗೆ ಅನ್ನದ ಅನಿವಾರ್ಯತೆ ಇದೆ. ಭೂಮಿ ತಾಯಿಯನ್ನು ನಂಬಿ, ಆಕೆ ಎಂದೂ ನಮ್ಮ ಕೈಬಿಡುವುದಿಲ್ಲ, ಋತು ಆಧಾರಿತ ಬೆಳೆ ಬೆಳೆದಾಗ ಮಾತ್ರ ರೈತ ಬದುಕಲು ಸಾಧ್ಯ. ಕೃಷಿ ಜೊತೆಗೆ ತೋಟಗಾರಿಕೆ, ಹೈನುಗಾರಿಕೆ, ಪಶುಸಂಗೋಪನೆ ಮತ್ತು ದೀರ್ಘಾವಧಿಯಲ್ಲಿ ಆದಾಯ ತರುವ ಶ್ರೀಗಂಧ, ತೇಗ ಬೀಟೆ ಮರಗಳನ್ನು ಬೆಳೆಸಿ ಕೋಟಿಗಟ್ಟಲೆ ಹಣ ಗಳಿಸಲು ನಮ್ಮ ರೈತರು ಶ್ರಮ ಪಡಬೇಕು.

ರೈತರು ಕೋಟಿ ರೂಪಾಯಿಗಳಲ್ಲಿ ಮಾತನಾಡಬೇಕು ಎಂದು ಪ್ರಗತಿಪರ ರೈತ ಮಹಿಳೆ, ರಾಷ್ಟ್ರ ಪ್ರಶಸ್ತಿ ವಿಜೇತೆ ಡಾ.ಕವಿತಾ ಮಿಶ್ರ ಅವರು ಇತ್ತೀಚೆಗೆ ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಸಹಕಾರಿ ರತ್ನ ಪ್ರಶಸ್ತಿ ಪಡೆದ ಲಲಿತಾ ಜಿ.ಟಿ.ದೇವೇಗೌಡರ ಅಭಿನಂದನಾ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು. ಇಡೀ ದೇಶದ ಆರ್ಥಿಕತೆಯನ್ನು ನಿರ್ಧರಿಸುವವರೇ ನಮ್ಮ ರೈತರು. ದೇಶದ ಆರ್ಥಿಕತೆಗೆ ರೈತರ ಕೊಡುಗೆ ಅಪಾರವಾದದ್ದು. ಆದರೆ ಹತ್ತು ಎಕರೆ ಜಮೀನು ಇದ್ದರೂ ಕೃಷಿ ಮಾಡುವ ರೈತ ಯುವಕರಿಗೇ ಯಾರು ಹೆಣ್ಣು ಕೊಡುವುದಿಲ್ಲ ಎಂದು ತಮ್ಮ ಬೇಸರ ವ್ಯಕ್ತಪಡಿಸಿದರು. ಕವಿತಾ ಮಿಶ್ರರವರ ಮಾತುಗಳು ಇಡೀ ಸಭಾಂಗಣದಲ್ಲಿ ನೆರೆದವರನ್ನು ತಲ್ಲಣಗೊಳಿಸಿತು. ತಮ್ಮ ಜೀವನದ ಯಶೋಗಾಥೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು. ರೈತ ಮಹಿಳೆ ಮನಸ್ಸು ಮಾಡಿದರೇ ಏನೆಲ್ಲಾ ಸಾಧಿಸ ಬಹುದು ಎಂದು ತಮ್ಮ ಬದುಕಿನ ಯಶೋಗಾಥೆಯನ್ನು ಸಭಿಕರ ಮುಂದೆ ಮನ ಬಿಚ್ಚಿ ಮಾತನಾಡಿದರು. ಇವರ ಇಪ್ಪತ್ತೈದು ನಿಮಿಷಗಳ ಭಾಷಣ ಈ ಸಮಾರಂಭದ ಪ್ರಮುಖ ಹೈಲೈಟ್. ಇವರ ಅದ್ಭುತ ಭಾಷಣ ಜನಮಾನಸದಲ್ಲಿ ಉಳಿಯುವಂತಹದ್ದು. ಇವರ ಮಾತುಗಳನ್ನು ವೇದಿಕೆ ಮೇಲಿದ್ದ ಎಲ್ಲಾ ಮಠಾಧೀಶರು ತದೇಕಚಿತ್ತದಿಂದ ಆಲಿಸಿದ್ದು ಸಮಾರಂಭದ ಗಂಭೀರತೆಗೆ ಸಾಕ್ಷಿಯಾಯಿತು. ಈ ಅಭಿನಂದನಾ ಸಮಾರಂಭದ ಮತ್ತೊಂದು ವಿಶೇಷವೆಂದರೆ ಅರ್ಧಕ್ಕಿಂತಲೂ ಹೆಚ್ಚು ಮಹಿಳೆಯರೇ ಇದ್ದುದು, ರೈತ ಮಹಿಳೆಯರನ್ನೇ ದೃಷ್ಟಿಯಲ್ಲಿರಿಸಿಕೊಂಡು, ಕವಿತಾ ಮಿಶ್ರ ಆಡಿದ ಸ್ಫೂರ್ತಿದಾಯಕ ಮಾತುಗಳು ನಮ್ಮ ರೈತ ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವಂತಾಗಬೇಕು. –ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸೈಲೆಂಟ್ ಕಿಲ್ಲರ್ ಸೈಬರ್ ಅಪರಾಧ!!

ಅದೊಂದು ಕಾಲವಿತ್ತು. ಈ ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಎತ್ತಿನ ಗಾಡಿ, ಕುದುರೆ ಸವಾರಿ, ಇಲ್ಲವೇ ನಡೆದುಕೊಂಡೇ ಹೋಗಬೇಕಿತ್ತು.

ಯಾರ ಮನೆಯಲ್ಲಾದರೂ ಸಾವಾದರೆ ಸುದ್ದಿಯನ್ನು ತಿಳಿಸಲು ಬೆಳಗಿನಜಾವ ಪಕ್ಕದ ಊರಿರಿಂದೂರಿಗೆ ಹೋಗಿ ತಿಳಿಸಿ ಬರಬೇಕಿತ್ತು. ಇಂತಹ ಕಾಲಘಟ್ಟದಿಂದ ಕ್ಷಣ ಮಾತ್ರದಲ್ಲಿ ಏನನ್ನೂ ಬೇಕಾದರೂ ಮಾಡುವ ಹಂತಕ್ಕೆರಿದ್ದೇವೆ! ಇದಕ್ಕೆ ಕಾರಣ ಬದಲಾವಣೆಯ ಪರ್ವ ವಿಜ್ಞಾನದ ಆವಿಷ್ಕಾರ ತಂತ್ರಜ್ಞಾನದಲ್ಲಿ ಕಂಡುಕೊಂಡ ಅಭಿವೃದ್ಧಿ ಎನ್ನಬಹುದೇ!?

ಈಗ ಇಪ್ಪತ್ತೊಂದನೇ ಶತಮಾನವನ್ನು ಮಾಹಿತಿ ತಂತ್ರಜ್ಞಾನದ ಯುಗ ಎಂದು ಕರೆಯುತ್ತೇವೆ. ಮೊಬೈಲ್, ಇಂಟರ್ನೆಟ್, ಆನ್‌ಲೈನ್ ಬ್ಯಾಂಕಿಂಗ್, ಸಾಮಾಜಿಕ ಜಾಲತಾಣಗಳು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿವೆ. ಒಂದು ಕ್ಲಿಕ್‌ನಲ್ಲಿ ಹಣ ವರ್ಗಾವಣೆ, ಒಂದು ಟ್ಯಾಪ್‌ನಲ್ಲಿ ಶಾಪಿಂಗ್, ವಿಡಿಯೋ ಕಾಲ್‌ನಲ್ಲಿ ದೂರದವರ ಜೊತೆ ಮಾತು–ಎಲ್ಲವೂ ಸುಲಭವಾಗಿದೆ. ಒಂದೇ ನಾಣ್ಯದ ಎರಡು ಮುಖ ಎನ್ನುವಂತೆ ಈ ಅನುಕೂಲದ ನೆರಳಿನಲ್ಲೇ ಅಪರಾಧದ ಹೊಸ ರೂಪ ಹುಟ್ಟಿಕೊಂಡಿದೆ. ಅದುವೇ ಸೈಬರ್ ಅಪರಾಧ. ಕಂಪ್ಯೂಟರ್, ಮೊಬೈಲ್, ಇಂಟರ್ನೆಟ್ ಮೂಲಕ ನಡೆಯುವ ಯಾವುದೇ ಅಕ್ರಮ ಚಟುವಟಿಕೆಯೇ ಸೈಬರ್ ಅಪರಾಧ.

ಸೈಬರ್ ಅಪರಾಧದಲ್ಲಿ ಮೊಬೈಲ್, ಕಂಪ್ಯೂಟರ್ ಸಿಸ್ಟಮ್, ನೆಟ್‌ವರ್ಕ್, ಡೇಟಾ ಅಥವಾ ವ್ಯಕ್ತಿಯ ಖಾಸಗಿತನವನ್ನು ಗುರಿಯಾಗಿಟ್ಟುಕೊಂಡು ಮಾಡುವ ಅಪರಾಧ. ಭಾರತದ ಮಾಹಿತಿ ತಂತ್ರಜ್ಞಾನ ಕಾಯ್ದೆ–2000 ಮೂಲಕ ಇದಕ್ಕೆ ಕಾನೂನಿನ ಚೌಕಟ್ಟು ನೀಡಲಾಗಿದೆ. ಸಾಂಪ್ರದಾಯಿಕ ಅಪರಾಧಕ್ಕೆ ಸ್ಥಳ ಬೇಕು, ಶಸ್ತ್ರ ಬೇಕು. ಆದರೆ, ಸೈಬರ್ ಅಪರಾಧಕ್ಕೆ ಕೇವಲ ಲ್ಯಾಪ್‌ಟಾಪ್ ಮತ್ತು ಇಂಟರ್ನೆಟ್ ಇದ್ದರೆ ಸಾಕು. ಅಪರಾಧಿ, ಮನೆಯಲ್ಲಿ ಕುಳಿತೇ ಇಡೀ ಜಗತ್ತಿಗೆ ತೊಂದರೆ ಕೊಡಬಹುದು ಎನ್ನುವ ಹಂತಕ್ಕೆ ಬಂದಿದೆ.

ಸೈಬರ್ ಅಪರಾಧದಲ್ಲಿ ವಂಚನೆ ಮತ್ತು ಮೋಸ, ಫಿಶಿಂಗ್, ಸ್ಮಿಶಿಂಗ್, ವಿಷಿಂಗ್ ಎಂಬಿತ್ಯಾದಿಗಳಿವೆ. ಇದು ಅತ್ಯಂತ ಸಾಮಾನ್ಯವಾದ ಸೈಬರ್ ಅಪರಾಧ. ಅಪರಾಧಿಗಳು ಬ್ಯಾಂಕ್, ಕಂಪನಿ, ಸರ್ಕಾರಿ ಸಂಸ್ಥೆಯ ಹೆಸರಿನಲ್ಲಿ ನಕಲಿ ಸಂದೇಶ, ಇಮೇಲ್ ಕಳುಹಿಸುತ್ತಾರೆ. ನಿಮ್ಮ ಕೆವೈಸಿ ಅಪ್ಡೇಟ್ ಮಾಡಿ, ಇಲ್ಲದಿದ್ದರೆ ಖಾತೆ ಬ್ಲಾಕ್ ಆಗುತ್ತದೆ ಎಂಬ ಲಿಂಕ್ ಕೊಟ್ಟು ನಿಮ್ಮ ಎಟಿಎಂ ಪಿನ್, ಒಟಿಪಿ ಕದಿಯುತ್ತಾರೆ. ಅರ್ಥಾತ್ ಆ ಮೂಲಕ ದೋಚುವುದು.

ಉದಾಹರಣೆಗೆ: ಹುಬ್ಬಳ್ಳಿಯ ರಮೇಶ್ ಅವರಿಗೆ ಎಸ್‌ಬಿಐ ಹೆಸರಿನಿಂದ ಸಂದೇಶ ಬಂದಿತು. ಲಿಂಕ್ ತೆರೆದು ಕಾರ್ಡ್ ವಿವರ ಹಾಕಿದರು. ಹತ್ತು ನಿಮಿಷದಲ್ಲಿ ಖಾತೆಯಿಂದ ಐವತ್ತು ಸಾವಿರ ರೂಪಾಯಿ ಮಾಯವಾಯಿತು. ಇದು ಫಿಶಿಂಗ್ ವಂಚನೆ.

ಹಾಗೆಯೇ ಸ್ಮಿಶಿಂಗ್ ಎಂದರೆ ಎಸ್‌ಎಂಎಸ್ ಮೂಲಕ, ವಿಷಿಂಗ್ ಎಂದರೆ ಫೋನ್ ಕರೆ ಮೂಲಕ ವಂಚನೆ. ಅಪರಾಧಿ, ಪೊಲೀಸ್ ಅಧಿಕಾರಿಯಂತೆ ಮಾತನಾಡಿ ನಿಮ್ಮ ಮಗ ಆಕ್ಸಿಡೆಂಟ್ ಮಾಡಿದ್ದಾನೆ, ಕೂಡಲೇ ಹಣ ಕಳುಹಿಸಿ ಎಂದು ಹೆದರಿಸಿ ಹಣ ಕಿತ್ತುಕೊಳ್ಳುತ್ತಾರೆ.

ಗುರುತಿನ ಕಳ್ಳತನ (ಐಡೆಂಟಿಟಿ ಥೆಫ್ಟ್) ಎಂದರೆ ನಿಮ್ಮ ವೈಯಕ್ತಿಕ ಮಾಹಿತಿಯನ್ನು ಬಳಸಿ ಅಪರಾಧಿಗಳು ನೀವು ಎಂಬಂತೆ ನಟಿಸುವುದು. ನಿಮ್ಮ ಆಧಾರ್ ಸಂಖ್ಯೆ, ಪ್ಯಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಮೊಬೈಲ್ ನಂಬರ್, ಫೋಟೋ, ಹುಟ್ಟಿದ ದಿನಾಂಕ ಈ ಮಾಹಿತಿ ಒಮ್ಮೆ ಕಳವಾದರೆ ನಿಮ್ಮ ಬದುಕೇ ಕಳವಾಗುತ್ತದೆ.

ಅಪರಾಧಿಗಳು ಇದನ್ನು ಹೇಗೆ ಮಾಡುತ್ತಾರೆ

ಡಂಪ್ಸ್ಟರ್ ಡೈವಿಂಗ್ ಮೂಲಕ ಹಳೆಯ ಬಿಲ್, ಬ್ಯಾಂಕ್ ಸ್ಟೇಟ್ಮೆಂಟ್ ಕದಿಯುವುದು. ಫಿಶಿಂಗ್ ಇಮೇಲ್ ಮೂಲಕ ಮಾಹಿತಿ ಕೇಳುವುದು. ಸಾರ್ವಜನಿಕ ವೈಫೈ ಮೂಲಕ ನಿಮ್ಮ ಡೇಟಾ ಸ್ನಿಫ್ ಮಾಡುವುದು. ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ನೀವು ಹಾಕುವ ಮಾಹಿತಿಯಿಂದಲೇ ನಿಮ್ಮ ಪೂರ್ತಿ ಪ್ರೊಫೈಲ್ ಕಟ್ಟುವುದು.

ಈ ರೀತಿಯ ದಾಳಿಯ ಪರಿಣಾಮವಾಗಿ ನಕಲಿ ಸಿಮ್ ಕಾರ್ಡ್ ತೆಗೆದು ನಿಮ್ಮ ಒಟಿಪಿ ಕದಿಯುತ್ತಾರೆ. ನಿಮ್ಮ ಹೆಸರಿನಲ್ಲಿ ಲೋನ್ ಅಪ್ಲೈ ಮಾಡಿ ಸಿಬಿಲ್ ಸ್ಕೋರ್ ಹಾಳು ಮಾಡುತ್ತಾರೆ. ನಿಮ್ಮ ಆಧಾರ್ ಬಳಸಿ ನಕಲಿ ದಾಖಲೆ ಸೃಷ್ಟಿಸುತ್ತಾರೆ. ನಿಮ್ಮ ಇಮೇಲ್ ಹ್ಯಾಕ್ ಮಾಡಿ ಎಲ್ಲರಿಗೂ ಅವಮಾನಕರ ಮೆಸೇಜ್ ಕಳುಹಿಸುತ್ತಾರೆ.

ಇದಕ್ಕೊಂದು ಉದಾಹರಣೆ: ಧಾರವಾಡದ ಸುನೀತಾ ಅವರ ಆಧಾರ್ ಕಾರ್ಡ್ ಕಳವಾಯಿತು. ಒಂದು ತಿಂಗಳ ನಂತರ ಅವರಿಗೆ ಬ್ಯಾಂಕಿನಿಂದ ಕರೆ ಬಂತು. ಯಾರೋ ಅವರ ಹೆಸರಿನಲ್ಲಿ ಮೂರು ಲಕ್ಷ ರೂಪಾಯಿ ಲೋನ್ ತೆಗೆದುಕೊಂಡಿದ್ದಾರೆ. ಪೊಲೀಸ್ ಸ್ಟೇಷನ್, ಕೋರ್ಟ್ ಅಲೆದು ಸುನೀತಾ ತನ್ನ ಮುಗ್ಧತೆ ಸಾಬೀತು ಮಾಡಲು ಆರು ತಿಂಗಳು ಹಿಡಿಯಿತು. ಮಾನಸಿಕವಾಗಿ, ಆರ್ಥಿಕವಾಗಿ ತುಂಬಾ ನಷ್ಟವಾಯಿತು.

ಇಂತಹ ಅಪರಾಧಗಳನ್ನು ತಡೆಗಟ್ಟುವುದು ಹೇಗೆಂದರೆ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಫೋಟೋ ವಾಟ್ಸಾಪ್‌ನಲ್ಲಿ ಕಳುಹಿಸಬೇಡಿ. ಯಾವುದೇ ವೆಬ್‌ಸೈಟ್‌ನಲ್ಲಿ ಆಧಾರ್ ಅಪ್ಲೋಡ್ ಮಾಡುವ ಮುನ್ನ ಮಾಸ್ಕ್ಡ್ ಆಧಾರ್ ಬಳಸಿ. ವರ್ಷಕ್ಕೊಮ್ಮೆ ಸಿಬಿಲ್ ಸ್ಕೋರ್ ಚೆಕ್ ಮಾಡಿ. ನಿಮ್ಮ ಹೆಸರಿನಲ್ಲಿ ಹೊಸ ಸಿಮ್, ಲೋನ್ ತೆಗೆದಿದೆಯಾ ಎಂದು ನೋಡಿ. ಆಧಾರ್ ಲಾಕ್ ಮಾಡುವ ಸೌಲಭ್ಯ ಬಳಸಿ.



> **ತಂತ್ರಜ್ಞಾನ ಚೂಪಾದ ಆಯುಧದ ಹಾಗೆ. ಅಡುಗೆ ಮಾಡಲು ಬಳಸಿದರೆ ಜೀವ ಉಳಿಸುತ್ತದೆ. ಹಿಂಸೆಗೆ ಬಳಸಿದರೆ ಜೀವ ತೆಗೆಯುತ್ತದೆ. ಡಿಜಿಟಲ್ ಇಂಡಿಯಾ ಕನಸು ನನಸಾಗ ಬೇಕಾದರೆ ಸುರಕ್ಷಿತ ಡಿಜಿಟಲ್ ಇಂಡಿಯಾ ಆಗಬೇಕು. ಪ್ರತಿ ನಾಗರಿಕ ಸೈಬರ್ ರಕ್ಷಕನಾಗಬೇಕು. ಎಚ್ಚರಿಕೆ ಇಲ್ಲದ ಕ್ಲಿಕ್, ಒಂದು ಕೋಟಿ ನಷ್ಟ ತರಬಹುದು. ಒಂದು ಸೆಕೆಂಡಿನ ತಾಳ್ಮೆ ನಿಮ್ಮ ಬದುಕು ಉಳಿಸಬಹುದು. ಯುವ ಜನರ ಕೈಯಲ್ಲಿರುವ ಮೊಬೈಲ್ ಎನ್ನುವ ಆಯುಧ ಭವ್ಯ ಭಾರತದ ಅಭಿವೃದ್ಧಿಗೆ ಉಪಯೋಗವಾಗಲಿ.**

ಮತ್ತೊಂದು ವಿಚಾರ ಸೈಬರ್ ಬುಲ್ಲಿಂಗ್, ಅಂದರೆ ಡಿಜಿಟಲ್ ಮಾಧ್ಯಮ ಬಳಸಿ ಯಾರನ್ನಾದರೂ ಪದೇ ಪದೆ ಕಿರುಕುಳ ಕೊಡುವುದು, ಅವಮಾನಿಸುವುದು, ಹೆದರಿಸುವುದು. ಇದು ಸಾಂಪ್ರದಾಯಿಕ ಬುಲ್ಲಿಂಗ್‌ಗಿಂತ ಅಪಾಯಕಾರಿ. ಯಾಕೆಂದರೆ ಇದಕ್ಕೆ ಸಮಯದ ಮಿತಿ ಇಲ್ಲ, ಸ್ಥಳದ ಮಿತಿ ಇಲ್ಲ. ಮನೆಯಲ್ಲಿ ಕುಳಿತರೂ ಬುಲ್ಲಿಂಗ್ ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಸೈಬರ್ ಬುಲ್ಲಿಂಗ್‌ನ ರೂಪಗಳು : ನಕಲಿ ಪ್ರೊಫೈಲ್ ಸೃಷ್ಟಿಸಿ ಬೆದರಿಕೆ ಹಾಕುವುದು. ಒಬ್ಬರ ಫೋಟೋ ಎಡಿಟ್ ಮಾಡಿ ಅಶ್ಲೀಲವಾಗಿ ಹರಿಬಿಡುವುದು. ಗ್ರೂಪ್‌ನಲ್ಲಿ ಎಲ್ಲರ ಮುಂದೆ ಅವಮಾನಿಸುವುದು. "ಲೀಕ್ ವಿಡಿಯೋ" ಎಂದು ಸುಳ್ಳು ಹೇಳಿ ಬ್ಲಾಕ್‌ಮೇಲ್ ಮಾಡುವುದು. ಯಾರದೋ ಪಾಸ್‌ವರ್ಡ್ ಹ್ಯಾಕ್ ಮಾಡಿ ಅವನ ಹೆಸರಿನಿಂದ ಕೆಟ್ಟ ಪೋಸ್ಟ್ ಹಾಕುವುದು; ಮಾಡುತ್ತಾರೆ ಇಲ್ಲಿ ಶಾಲಾ ಕಾಲೇಜು ಮಕ್ಕಳು, ವಿಶೇಷವಾಗಿ ಹುಡುಗಿಯರು, ಮಾನಸಿಕವಾಗಿ ದುರ್ಬಲರಾದವರು. ಹೊಸದಾಗಿ ಸಾಮಾಜಿಕ ಜಾಲತಾಣಕ್ಕೆ ಬಂದವರು ಬಲಿಯಾಗುತ್ತಾರೆ.

ಇತ್ತೀಚಿಗೆ ಬೆಂಗಳೂರಿನ ಕಾಲೇಜು ವಿದ್ಯಾರ್ಥಿನಿ ಪ್ರಿಯಾ. (ಹೆಸರು ಕಾಲ್ಪನಿಕ) ಅವಳ ಫೋಟೋವನ್ನು ಯಾರೋ ಡೌನ್‌ಲೋಡ್ ಮಾಡಿ, ಎಐ ಬಳಸಿ ಅಶ್ಲೀಲ ವಿಡಿಯೋ ಮಾಡಿದರು. ಆ ವಿಡಿಯೋ ವಾಟ್ಸಾಪ್ ಗ್ರೂಪ್‌ಗಳಲ್ಲಿ ವೈರಲ್ ಆಯಿತು. ಪ್ರಿಯಾ ಕಾಲೇಜು ಬಿಡಬೇಕಾಯಿತು. ತಿನ್ನಲು, ನಿದ್ರೆ ಮಾಡಲು ಆಗಲಿಲ್ಲ. ಡಿಪ್ರೆಶನ್‌ಗೆ ಹೋದಳು. ಪೋಷಕರು ಸೈಬರ್ ಪೊಲೀಸರಿಗೆ ದೂರು ಕೊಟ್ಟರು. ಅಪರಾಧಿ ಸಿಕ್ಕಿದರೂ, ಪ್ರಿಯಾ ಕಳೆದುಕೊಂಡ ಆತ್ಮವಿಶ್ವಾಸ ವಾಪಸ್ ಬರಲಿಲ್ಲ

ಸೈಬರ್ ಬುಲ್ಲಿಂಗ್‌ಗೆ ಒಳಗಾದವರು ಮಾನಸಿಕವಾಗಿ ಬಳಲುತ್ತಾರೆ ಒಂಟಿತನ, ಆತಂಕ, ಖಿನ್ನತೆ, ಆತ್ಮಹತ್ಯಾ ಚಿಂತನೆಗೆ ಒಳಗಾಗುತ್ತಾರೆ. ಶಾಲೆ ಬಿಡುತ್ತಾರೆ, ಸಮಾಜದಿಂದ ದೂರವಾಗುತ್ತಾರೆ. ಇಂತಹ ದುಷ್ಪರಿಣಾಮಗಳು ನಡೆಯುತ್ತವೆ.

ಇವುಗಳಿಗೆ ಪರಿಹಾರವೆಂದರೆ ಬುಲ್ಲಿಂಗ್ ಮೆಸೇಜ್, ಸ್ಕ್ರೀನ್‌ಶಾಟ್ ತಕ್ಷಣ ಸೇವ್ ಮಾಡಿ. ಅಪರಾಧಿಯನ್ನು ಬ್ಲಾಕ್ ಮಾಡಿ, ರಿಪೋರ್ಟ್ ಮಾಡಿ. ಯಾರೊಂದಿಗಾದರೂ ಮಾತಾಡಿ. ಸೈಬರ್ ಪೊಲೀಸ್ 1930ಕ್ಕೆ ಕರೆ ಮಾಡಿ. ನೆನಪಿಡಿ, ತಪ್ಪು ನಿಮ್ಮದಲ್ಲ, ಅಪರಾಧಿಯದ್ದು. ನೀವು ಮೌನವಾಗಬೇಡಿ, ಇದು ಅಪರಾಧಿಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಮಾಲ್‌ವೇರ್ ಎಂದರೆ ಮ್ಯಾಲಿಸಿಯಸ್ ಸಾಫ್ಟ್‌ವೇರ್ ನಿಮ್ಮ ಅನುಮತಿ ಇಲ್ಲದೆ ನಿಮ್ಮ ಕಂಪ್ಯೂಟರ್, ಮೊಬೈಲ್‌ಗೆ ನುಗ್ಗಿ ಹಾನಿ ಮಾಡುವ ಪ್ರೋಗ್ರಾಂ. ವೈರಸ್, ವರ್ಮ್, ಟ್ರೋಜನ್, ಸ್ಪೈವೇರ್, ಆಡ್‌ವೇರ್, ರಾನ್ಸಮ್‌ವೇರ್ ಇವೆಲ್ಲ ಮಾಲ್‌ವೇರ್‌ನ ವಿಧಗಳು.

ರಾನ್ಸಮ್‌ವೇರ್ ಹೇಗೆ ಕೆಲಸ ಮಾಡುತ್ತದೆ ಎಂದರೆ ನೀವು ನಕಲಿ ಇಮೇಲ್ ಅಟ್ಯಾಚ್‌ಮೆಂಟ್ ತೆಗೆಯುತ್ತೀರಿ ಅಥವಾ ನಕಲಿ ಸಾಫ್ಟ್‌ವೇರ್ ಡೌನ್‌ಲೋಡ್ ಮಾಡುತ್ತೀರಿ. ಕ್ಷಣಾರ್ಧದಲ್ಲಿ ನಿಮ್ಮ ಕಂಪ್ಯೂಟರ್‌ನ ಎಲ್ಲ ಫೋಟೋ, ಡಾಕ್ಯುಮೆಂಟ್, ವಿಡಿಯೋ ಫೈಲ್‌ಗಳು ಎನ್‌ಕ್ರಿಪ್ಟ್ ಆಗುತ್ತವೆ. ಅಂದರೆ ಲಾಕ್ ಆಗುತ್ತವೆ. ಪರದೆಯ ಮೇಲೆ ಸಂದೇಶ ಬರುತ್ತದೆ–ನಿಮ್ಮ ಫೈಲ್‌ಗಳು ಲಾಕ್ ಆಗಿವೆ. ಡಿಕೋಡ್ ಮಾಡಲು ಬಿಟ್‌ಕಾಯಿನ್ ಕಳುಹಿಸಿ. 24 ಗಂಟೆಯೊಳಗೆ ಹಣ ಕಳುಹಿಸದಿದ್ದರೆ ಎಲ್ಲ ಡೇಟಾ ಡಿಲೀಟ್ ಆಗುತ್ತದೆ. ಇಂತಹ ದಾಳಿಗಳನ್ನು ಆಸ್ಪತ್ರೆ ರೋಗಿಯ ದಾಖಲೆ ಲಾಕ್ ಮಾಡುತ್ತಾರೆ. ಬ್ಯಾಂಕ್ ವಹಿವಾಟು ಸ್ಥಗಿತಗೊಳಿಸುತ್ತಾರೆ. ಸರ್ಕಾರಿ ಕಚೇರಿ, ಪೌರಕಾರ್ಯ ಸ್ಥಗಿತ. ಸಾಮಾನ್ಯ ಜನರ ಲ್ಯಾಪ್‌ಟಾಪ್ ವೈಯಕ್ತಿಕ ಫೋಟೋ, ವಿದ್ಯಾಭ್ಯಾಸದ ಫೈಲ್‌ಗಳ ಮೇಲೆ ದಾಳಿ ಮಾಡಲಾಗುತ್ತದೆ

2017ರಲ್ಲಿ WannaCry ಎಂಬ ರಾನ್ಸಮ್‌ವೇರ್ ಜಗತ್ತನ್ನೇ ಅಲ್ಲಾಡಿಸಿತು. ಭಾರತದ ಅನೇಕ ಕಂಪನಿ, ಆಸ್ಪತ್ರೆ ಕಂಪ್ಯೂಟರ್ ಲಾಕ್ ಆಯಿತು. ರೋಗಿಗಳ ಚಿಕಿತ್ಸೆ ನಿಂತಿತು. ಅಪರಾಧಿಗಳು ಬಿಟ್‌ಕಾಯಿನ್ ಕೇಳಿದರು. ಹಣ ಕೊಟ್ಟರೂ ಎಲ್ಲರ ಡೇಟಾ ವಾಪಸ್ ಬರಲಿಲ್ಲ.

ಮತ್ತೊಂದು ಉದಾಹರಣೆ: ಹುಬ್ಬಳ್ಳಿಯ ಸಣ್ಣ ಉದ್ಯಮಿ ರವಿಯ ಕಂಪ್ಯೂಟರ್‌ನಲ್ಲಿ 10 ವರ್ಷದ ಅಕೌಂಟ್ ಡೇಟಾ ಇತ್ತು. ರಾನ್ಸಮ್‌ವೇರ್ ದಾಳಿಯಿಂದ ಎಲ್ಲ ಫೈಲ್ (locked) ಲಾಕ್ ಆಯಿತು. ಅಪರಾಧಿ 2 ಲಕ್ಷ ಬಿಟ್‌ಕಾಯಿನ್ ಕೇಳಿದ. ರವಿ ಹಣ ಕೊಡಲಿಲ್ಲ. ಎಲ್ಲ ಡೇಟಾ ಕಳೆದುಕೊಂಡು ಉದ್ಯಮವೇ ಮುಚ್ಚಬೇಕಾಯಿತು.

ಇಂತಹ ದಾಳಿಗಳನ್ನು ತಡೆಗಟ್ಟುವ ವಿಧಾನವೆಂದರೆ ಅಪರಿಚಿತ ಇಮೇಲ್ ಅಟ್ಯಾಚ್‌ಮೆಂಟ್ ತೆರೆಯಬೇಡಿ. ಕ್ರ್ಯಾಕ್ಡ್ ಸಾಫ್ಟ್‌ವೇರ್ ಡೌನ್‌ಲೋಡ್ ಮಾಡಬೇಡಿ. ಎಪಿಕೆ ಫೈಲ್ ಡೌನ್ಲೋಡ್ ಮಾಡಬೇಡಿ ಆಂಟಿವೈರಸ್ ಅಪ್ಡೇಟ್ ಮಾಡಿರಿ. ಮುಖ್ಯ ಫೈಲ್‌ಗಳ ಬ್ಯಾಕಪ್ ಬಾಹ್ಯ ಹಾರ್ಡ್ ಡಿಸ್ಕ್‌ನಲ್ಲಿ ಇರಿಸಿ. ಸಾಫ್ಟ್‌ವೇರ್ ಅಪ್ಡೇಟ್ ನಿರ್ಲಕ್ಷಿಸಬೇಡಿ.

ರಾನ್ಸಮ್‌ವೇರ್ ಬಂದರೆ ಹಣ ಕೊಡಬೇಡಿ. ಯಾಕೆಂದರೆ ಹಣ ಕೊಟ್ಟರೂ ಗ್ಯಾರಂಟಿ ಇಲ್ಲ. ಇಂತಹ ಸಂದರ್ಭದಲ್ಲಿ ಸೈಬರ್ ಪೊಲೀಸರಿಗೆ ದೂರು ಕೊಡುವುದನ್ನು ಮರೆಯಬಾರದು.

ಒಎಲ್‌ಎಕ್ಸ್, ಫೇಸ್‌ಬುಕ್ ಮಾರ್ಕೆಟ್‌ಪ್ಲೇಸ್‌ನಲ್ಲಿ ಕಡಿಮೆ ಬೆಲೆಗೆ ವಸ್ತು ಮಾರಾಟದ ಜಾಹೀರಾತು ಹಾಕಿ ಮುಂಗಡ ಹಣ ಪಡೆದು ವಸ್ತು ಕಳುಹಿಸದಿರುವುದು. ಸೈನಿಕನ ಹೆಂಡತಿ, ದೊಡ್ಡ ಅಧಿಕಾರ ಕಳೆದುಕೊಂಡ ಅಧಿಕಾರಿ ಎಂದು ಹೇಳಿ ಸಹಾನುಭೂತಿ ಪಡೆದು ವಂಚಿಸುವುದು ಸಾಮಾನ್ಯವಾಗಿದೆ. ಯಾರನ್ನಾದರೂ ನಿರಂತರವಾಗಿ ಆನ್‌ಲೈನ್‌ನಲ್ಲಿ ಹಿಂಬಾಲಿಸುವುದು, ಮೆಸೇಜ್ ಮಾಡುವುದು, ಬೆದರಿಕೆ ಹಾಕುವುದು. ಇದಕ್ಕೆ ಹೆಣ್ಣುಮಕ್ಕಳು ಹೆಚ್ಚಾಗಿ ಬಲಿಯಾಗುತ್ತಾರೆ.

ಬ್ಯಾಂಕ್, ಆಸ್ಪತ್ರೆ, ಸರ್ಕಾರಿ ವೆಬ್‌ಸೈಟ್ ಹ್ಯಾಕ್ ಮಾಡಿ ಲಕ್ಷಾಂತರ ಜನರ ವೈಯಕ್ತಿಕ ಮಾಹಿತಿ ಕದಿಯುವುದು. ಈ ಡೇಟಾವನ್ನು ಡಾರ್ಕ್ ವೆಬ್‌ನಲ್ಲಿ ಮಾರಾಟ ಮಾಡುತ್ತಾರೆ. ಇತ್ತೀಚಿಗೆ ತಮಗೆಲ್ಲರಿಗೂ ಗೊತ್ತಿರುವಂತೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಬಳಸಿ ಯಾರದೋ ಮುಖವನ್ನು ಬೇರೆ ವಿಡಿಯೋಗೆ ಅಂಟಿಸಿ ಸುಳ್ಳು ವಿಡಿಯೋ ಮಾಡುವುದು. ಇದು ವ್ಯಕ್ತಿಯ ಪ್ರತಿಷ್ಠೆಗೆ ದೊಡ್ಡ ಹೊಡೆತ. ರಾಜಕಾರಣಿ, ನಟರ ಡೀಪ್‌ಫೇಕ್ ವಿಡಿಯೋಗಳು ಈಗ ಸಾಮಾನ್ಯವಾಗಿವೆ.

ಮಕ್ಕಳ ಅಶ್ಲೀಲ ಚಿತ್ರಗಳ ವಿನಿಮಯ, ಆನ್‌ಲೈನ್ ಜೂಜು, ಮಾದಕ ವಸ್ತುಗಳ ಮಾರಾಟ, ಭಯೋತ್ಪಾದನೆಗೆ ಪ್ರಚೋದನೆ, ಸುಳ್ಳು ಸುದ್ದಿ ಹಬ್ಬಿಸುವುದು–ಇವೆಲ್ಲವೂ ತಂತ್ರಜ್ಞಾನದ ದುರ್ಬಳಕೆ. ಒಂದು ವಾಟ್ಸಾಪ್ ಮೆಸೇಜ್‌ನಿಂದ ಊರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತದೆ.

ಸೈಬರ್ ಅಪರಾಧಕ್ಕೆ ಕಾರಣಗಳು ಮತ್ತು ಪರಿಣಾಮಗಳೇನು!?

ಸುಲಭ ಹಣದ ಆಸೆ, ಕಾನೂನು ಜಾರಿ ಕಷ್ಟ, ಅನಾಮಿಕತೆ, ತಂತ್ರಜ್ಞಾನದ ಅಜ್ಞಾನ. ಪರಿಣಾಮವಾಗಿ ಆರ್ಥಿಕ ನಷ್ಟ, ಮಾನಸಿಕ ಖಿನ್ನತೆ, ಆತ್ಮಹತ್ಯೆ, ಖಾಸಗಿತನ ನಾಶ, ರಾಷ್ಟ್ರದ ಭದ್ರತೆಗೆ ಧಕ್ಕೆತರುತ್ತವೆ

ಸಂದೇಹದ ಲಿಂಕ್ ತೆರೆಯಬೇಡಿ. ಬ್ಯಾಂಕ್ ಎಂದಿಗೂ ಒಟಿಪಿ ಕೇಳುವುದಿಲ್ಲ. ಬಲವಾದ ಪಾಸ್‌ವರ್ಡ್ ಇಡಿ. ಎರಡು ಹಂತದ ಪರಿಶೀಲನೆ ಆನ್ ಮಾಡಿ. ಸಾಫ್ಟ್‌ವೇರ್ ಅಪ್ಡೇಟ್ ಮಾಡುತ್ತಿರಿ. ಸಾರ್ವಜನಿಕ ವೈಫೈ ಬಳಸಿ ಬ್ಯಾಂಕಿಂಗ್ ಮಾಡಬೇಡಿ.

ಮಕ್ಕಳಿಗೆ ಡಿಜಿಟಲ್ ಸುರಕ್ಷತೆಯ ಪಾಠ ಕಲಿಸಿರಿ. ಸೈಬರ್ ಅಪರಾಧ ನಡೆದರೆ ಭಯಪಡಬೇಡಿ. ತಕ್ಷಣ ಸಹಾಯವಾಣಿ 1930ಕ್ಕೆ ಕರೆ ಮಾಡಿ. ವೆಬ್‌ಸೈಟ್ (http://cybercrime.gov.in) ಸೈಬರ್ ಕ್ರೈಮ್ ಡಾಟ್ ಜಿಓವಿ ಡಾಟ್ ಇನ್‌ನಲ್ಲಿ ಆನ್‌ಲೈನ್ ದೂರು ಕೊಡಿ. ಬ್ಯಾಂಕ್ ವಂಚನೆಯಾದರೆ ಕೂಡಲೇ ಬ್ಯಾಂಕಿಗೆ ಕರೆ ಮಾಡಿ ಖಾತೆ ಬ್ಲಾಕ್ ಮಾಡಿಸಿ. ಐಟಿ ಕಾಯ್ದೆ ಪ್ರಕಾರ ಸೈಬರ್ ಅಪರಾಧಿಗೆ ಕಠಿಣ ಶಿಕ್ಷೆ, ದಂಡ ಇದೆ.

ಕೊನೆಯ ಮಾತು: ತಂತ್ರಜ್ಞಾನ ಚೂಪಾದ ಆಯುಧದ ಹಾಗೆ. ಅಡುಗೆ ಮಾಡಲು ಬಳಸಿದರೆ ಜೀವ ಉಳಿಸುತ್ತದೆ. ಹಿಂಸೆಗೆ ಬಳಸಿದರೆ ಜೀವ ತೆಗೆಯುತ್ತದೆ. ಡಿಜಿಟಲ್ ಇಂಡಿಯಾ ಕನಸು ನನಸಾಗಬೇಕಾದರೆ ಸುರಕ್ಷಿತ ಡಿಜಿಟಲ್ ಇಂಡಿಯಾ ಆಗಬೇಕು. ಪ್ರತಿ ನಾಗರಿಕ ಸೈಬರ್ ರಕ್ಷಕನಾಗಬೇಕು. ಎಚ್ಚರಿಕೆ ಇಲ್ಲದ ಕ್ಲಿಕ್ ಒಂದು ಕೋಟಿ ನಷ್ಟ ತರಬಹುದು. ಒಂದು ಸೆಕೆಂಡಿನ ತಾಳ್ಮೆ ನಿಮ್ಮ ಬದುಕು ಉಳಿಸಬಹುದು. ಯುವಜನರ ಕೈಯ್ಯಲ್ಲಿರುವ ಮೊಬೈಲ್ ಎನ್ನುವ ಆಯುಧ ಭವ್ಯ ಭಾರತದ ಅಭಿವೃದ್ಧಿಗೆ ಉಪಯೋಗವಾಗಲಿ.



ಡಾ.ಉಮೇಶ್ ಬಾಬು ಮಠದ್ (ಉಬಾಮ)
ಸಾಹಿತಿ, ಸಾಮಾಜಿಕ ಚಿಂತಕರು,
ಮೊ. 9606363449

ಸ್ಪರ್ಧೆ ನಮ್ಮ ಜೊತೆ; ಸಹಕಾರ ಎಲ್ಲರ ಜೊತೆ!

ಪುನಶ್ಚೇತನ–ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಶ್ರೀಮತ್ ಸ್ವಾಮಿ ಸರ್ವಜಯಾನಂದ್‌ಜೀ ಮಹಾರಾಜ್ ಅಭಿಮತ

ಮೈಸೂರು, ಜೂ. 15– ವಿದ್ಯಾರ್ಥಿಗಳಿಗೆ ಕನಸಿದ್ದರೆ ಸಾಲದು ಆ ಕನಸು ನನಸಾಗಲು ಕಠಿಣ ಪರಿಶ್ರಮ ಬೇಕಾಗುತ್ತದೆ. ಪ್ರತಿಯೊಬ್ಬರು ಕಷ್ಟಪಟ್ಟು ಯಶಸ್ಸನ್ನು ಪಡೆಯುವ ಮೂಲಕ ಸುಂದರ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸ್ವಾಮೀಜಿಗಳಾದಂತಹ ಶ್ರೀಮತ್ ಸ್ವಾಮಿ ಸರ್ವಜಯಾನಂದ್‌ಜೀ ಮಹಾರಾಜ್ ತಿಳಿಸಿದರು.



ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ 'ಪುನಶ್ಚೇತನ ಮತ್ತು ಅಭಿವಿನ್ಯಾಸ' ಕಾರ್ಯಕ್ರಮವನ್ನು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಶ್ರೀಮತ್ ಸ್ವಾಮಿ ಸರ್ವಜಯಾನಂದ್‌ಜೀ ಮಹಾರಾಜ್ ಉದ್ಘಾಟಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ 'ಪುನಶ್ಚೇತನ ಮತ್ತು ಅಭಿವಿನ್ಯಾಸ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಗಂಭೀರ ಚಿಂತನೆ ಅಗತ್ಯವಾಗಿದ್ದು ಮನಸ್ಸಿನ ನಿಯಂತ್ರಣಕ್ಕಾಗಿ ದೈಹಿಕ ಶಕ್ತಿ, ಮಾನಸಿಕ ಶಕ್ತಿ, ನೈತಿಕ ಶಕ್ತಿ ಹಾಗು ಆಧ್ಯಾತ್ಮಿಕ ಶಕ್ತಿಗಳನ್ನು ಅಳವಡಿಸಿಕೊಂಡಲ್ಲಿ ಪ್ರತಿಯೊಬ್ಬರಿಗೂ ಯಶಸ್ಸು ಸಾಧ್ಯ. ನಿರಂತರ ಅಧ್ಯಯನದಿಂದ ಮಾನಸಿಕ ಶಕ್ತಿ ಹೆಚ್ಚುತ್ತದೆ. ಪ್ರತಿ ವಿಷಯದ ಬಗ್ಗೆ ಆಸಕ್ತಿ, ಸತ್ಯ ಪರಿಪಾಲನೆ, ಧ್ಯಾನ ಮತ್ತು ದೈವತ್ವದ ಬಗ್ಗೆ ನಂಬಿಕೆ ಇವುಗಳಿಂದ ವಿದ್ಯಾರ್ಥಿಗಳು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರಸಕ್ತ ಸಾಲಿನ ಭಾರತೀಯ ಆಡಳಿತ ಸೇವೆಯ ಪರೀಕ್ಷೆಯಲ್ಲಿ 53ನೇ ರ್‍ಯಾಂಕ್ ಹಾಗೂ ಕರ್ನಾಟಕಕ್ಕೆ ಪ್ರಥಮ ಸ್ಥಾನ ಪಡೆದ ನಿಯೋಜಿತ ಐ.ಎ.ಎಸ್ ಅಧಿಕಾರಿ ಕಿರಣ್ ಕಾಮಟೆ ಮಾತನಾಡಿ, ದೊಡ್ಡ ಕನಸು ಕಾಣುವುದು ಅಪರಾಧವೆಂದು ಅನೇಕರು ಭಾವಿಸುತ್ತಾರೆ. ಆದರೆ ಅದು ತಪ್ಪು ತಿಳುವಳಿಕೆ, ಕಠಿಣ ಪರಿಶ್ರಮದಿಂದ ತಾವು ಕಂಡ ಕನಸುಗಳನ್ನು ನನಸಾಗಿಸಲು ಸಾಧ್ಯ ಎಂದ ಅವರು. ತಮ್ಮ ವೈಯಕ್ತಿಕ ಬದುಕಿನ ಘಟನೆಗಳನ್ನು ವಿವರಿಸಿದರು. ಹಳ್ಳಿಯಿಂದ ನಾನು ದೆಹಲಿಗೆ ಮೊದಲು ಹೋಗಿದ್ದು ಯುಪಿಎಸ್‌ಸಿ ಸಂದರ್ಶನಕ್ಕೆ. ಗರಿಷ್ಟ ಆಯ್ಕೆಯ ಅಂತಿಮ ಹಂತದಲ್ಲಿ ನಾನು ರಾಜ್ಯಕ್ಕೆ ಮೊದಲಿಗನಾಗಿ ಆಯ್ಕೆಯಾಗಿರುವುದು ನನಗಷ್ಟೇ ಅಲ್ಲದೇ ನನ್ನ ಪೋಷಕರಿಗೂ ಅತೀವವಾದ ಸಂತಸ ತಂದಿದೆ.

ಆದುದರಿಂದ ಪೋಷಕರು ಮಕ್ಕಳ ಕನಸಿಗೆ ನೀರೆರೆಯುವ ಕೆಲಸವನ್ನು ಮಾಡಬೇಕೇ ಹೊರತು, ಅವರ ಕನಸುಗಳನ್ನು ಮುರುಟುವ ಕೆಲಸ ಮಾಡಬಾರದು. ಜೀವನ ಎಂದು ಸುಲಭವಲ್ಲ. ತಂದೆ ತಾಯಿಗಳ ಶ್ರಮವೇ ಮಕ್ಕಳಿಗೆ ಸ್ಫೂರ್ತಿ. ಐಎಎಸ್‌ನಂತಹ ಹುದ್ದೆಗೇರಿದ ಅಧಿಕಾರಿಗಳು ಸಮಾಜಕ್ಕೆ ಬಹಳಷ್ಟು ಕೊಡುಗೆಗಳನ್ನು ನೀಡಬಹುದಾಗಿದೆ. ಹಾಗಾಗಿ ವಿದ್ಯಾರ್ಥಿಗಳು ಪದವಿಯ ಜೊತೆಗೆ ಯುಪಿಎಸ್‌ಸಿ ಪರೀಕ್ಷೆಗಳ ತಯಾರಿ ನಡೆಸಬೇಕೆಂದು ಕರೆನೀಡಿದರು.

ವಿದ್ಯಾವರ್ಧಕ ಸಂಘದ ಗೌರವ ಕಾರ್ಯದರ್ಶಿ ಪಿ.ವಿಶ್ವನಾಥ್ ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ಮಾತನಾಡುತ್ತಾ 5 ದಿನಗಳವರೆಗೆ ನಿಮಗೆ ಪುನಶ್ಚೇತನ ಅಭಿವಿನ್ಯಾಸ ಕಾರ್ಯಕ್ರಮ ನಡೆಯಲಿದ್ದು, ಅದನ್ನು ನೀವು ಸದುಪಯೋಗಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮಗಳಿಂದ ಕಾಲೇಜಿನ ಬಗ್ಗೆ ಅರಿವು ಮೂಡಲು ಸಹಕಾರಿಯಾಗುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಾದ ಜಾಹ್ನವಿ ಹೆಚ್.ಎನ್, ಹೇಮಪ್ರಿಯಾ.ಸಿ.ವಿ, ಸ್ಪಂದನಾ ಕಶ್ಯಪ್.ಟಿ.ಯು, ಮಾಧುರಿ.ಎ.ಎಸ್ ಹಾಗೂ ತೇಜಸ್.ಬಿ.ಆರ್ ಅವರುಗಳನ್ನು ಸನ್ಮಾನಿಸಲಾಯಿತು. ಕು.ಹರಿಪ್ರಿಯ ಪ್ರಾರ್ಥಿಸಿದರು. ಶ್ರೀಮತಿ ವಿದ್ಯಾ.ಆರ್ ನಿರೂಪಿಸಿ, ಶ್ರೀಮತಿ.ಲಾವಣ್ಯ.ಎಸ್ ಸ್ವಾಗತಿಸಿದರು. ವಿ.ವಿ. ಸಂಘದ ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಡಾ.ತೇಜಸ್ ಬಾಬ.ಕೆ.ಸಿ, ಅಧ್ಯಾಪಕರು, ಅಧ್ಯಾಪಕೇತರರು, 2026–27ನೇ ಶೈಕ್ಷಣಿಕ ಸಾಲಿಗೆ ಪದವಿ ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ

ಮೈಸೂರು, ಜೂ.15– 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಜೂ.17ರಂದು ಯೋಗ ಸಂಬಂಧಿತ ರಾಷ್ಟ್ರೀಯ ಯೋಗ ವಿಚಾರ ಸಂಕಿರಣ ಸಮ್ಮೇಳನವನ್ನು ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಹಾಗೂ ಆಯುಷ್ ಇಲಾಖೆಯ ಆಯುಕ್ತ ಡಾ. ಸುನೀಲ್ ಪಂವಾರ್ ಆಗಮಿಸಲಿದ್ದಾರೆ. ಮುಖ್ಯ ಅತಿಥಿ ಭಾಷಣಕಾರರಾಗಿ ಡಾ.ನಾಗರತ್ನ ಆರ್. ವೈದ್ಯಕೀಯ ನಿರ್ದೇಶಕರು, SVYASA ಜಿಗಣಿ ಪಾಲ್ಗೊಳ್ಳಲಿದ್ದಾರೆ ಉಪನ್ಯಾಸಕರಾಗಿ ಡಾ.ವನಿತಾ ಎಸ್.ಶೆಟ್ಟಿ BOS Chairman (RGUHS), ಡಾ.ಗೀತಾ ಬಿ.ಶೆಟ್ಟಿ Prof, Dean Division of Physical therapeutics & Nutrition, SDMCNYS, ಉಜಿರೆ ಡಾ. ವಾದಿರಾಜ್ ಹೆಚ್.ಎಸ್ Asst Director & Nodal Officer CRIYN, ನಾಗಮಂಗಲ ಡಾ. ನಿಖಿಲಾ ಹಿರೇಮಠ್, ಸ್ವಸ್ಥವೃತ್ತ ವಿಭಾಗದ ಮುಖ್ಯಸ್ಥರು ಹಾಗೂ EVAM ಯೋಗ ನಿರ್ದೇಶಕರು ತಮ್ಮ ವಿಚಾರ ಧಾರೆಯನ್ನು ಹಂಚಿಕೊಳ್ಳಲು ಆಗಮಿಸಲಿದ್ದಾರೆ ಎಂದು ಪ್ರಾಚಾರ್ಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ನಗರ ಪಾಲಿಕೆ ವಲಯ ಕಚೇರಿ 3ರಲ್ಲಿ ಶಾಸಕ ಜಿ.ಟಿ.ದೇವೇಗೌಡರಿಂದ ನಗರಸಭೆ, ಪಪಂ ಅಧಿಕಾರಿಗಳ ಸಭೆ

- ಕೂರ್ಗಳ್ಳಿ, ಬೆಳವಾಡಿ ಭಾಗದ ನೀರಿನ ಸಮಸ್ಯೆ ನಿವಾರಣೆಗೆ ಹೆಚ್ಚುವರಿ ಪಂಪ್ ಅಳವಡಿಕೆಗೆ ಜಿಟಿಡಿ ಸೂಚನೆ
- ಮಧ್ಯಪ್ರಾಚ್ಯ ದೇಶಗಳ ನಡುವಿನ ಯುದ್ಧದಿಂದಾಗಿ ಡಾಂಬರೀಕರಣ ಕಾಮಗಾರಿಗೆ ಗುತ್ತಿಗೆದಾರರ ಹಿಂದೇಟು
- ಉಂಡುವಾಡಿ ಯೋಜನೆ ಪೂರ್ಣಗೊಳಿಸಲು ಅಗತ್ಯವಿರುವ ಭೂಮಿ ಕಲ್ಪಿಸಲು ಜಿಲ್ಲಾಧಿಕಾರಿಯೊಂದಿಗೆ ಚರ್ಚೆ

ಮೈಸೂರು: ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ಅಗತ್ಯವಿರುವೆಡೆ ಟ್ಯಾಂಕರ್ ನೀರು ಪೂರೈಸಬೇಕು. ಹೆಚ್ಚುವರಿ ಟ್ಯಾಂಕರ್ ಬಳಕೆಗೆ ಟೆಂಡರ್ ಕರೆದು ಸಜ್ಜಾಗುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರಪಾಲಿಕೆ ವಲಯ ಕಚೇರಿ–3ರ ಸಭಾಂಗಣದಲ್ಲಿ ಸೋಮವಾರ ನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು. ಹೂಟಗಳ್ಳಿ, ಕೂರ್ಗಳ್ಳಿ, ಬೆಳವಾಡಿ ಭಾಗದಲ್ಲಿ ಬೋರ್‌ವೆಲ್ ಸಂಪೂರ್ಣ ಬತ್ತಿ ಹೋಗಿವೆ. ಕೆಲವು ಕಡೆಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುವ ಬಗ್ಗೆ ಸಾರ್ವಜನಿಕರು ನಿತ್ಯ ಮನೆಗೆ ಬಂದು ದೂರು ನೀಡುತ್ತಿದ್ದಾರೆ. ಕಬಿನಿ, ಕೆಆರ್‌ಎಸ್ ಜಲಾಶಯದಿಂದ ಕೆಲವು ಪ್ರದೇಶಗಳಿಗೆ ನೀರು ಕೊಡುತ್ತಿದ್ದರೂ ಹಲವು ಪ್ರದೇಶಗಳಿಗೆ ಸಮಸ್ಯೆಯಾಗಿದೆ. ತಕ್ಷಣವೇ ಅಗತ್ಯವಿರುವ ನೀರನ್ನು ಸರಬರಾಜು ಮಾಡಲು ಟ್ಯಾಂಕರ್‌ನಿಂದ ಒದಗಿಸಬೇಕು ಎಂದು ಸೂಚಿಸಿದರು.

ಹಳೆಯ ಉಂಡುವಾಡಿ ಯೋಜನೆ ಜಾರಿಗೆ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಹೊಂಗಳ್ಳಿ, ಮೇಳಾಪುರ, ಕೆಆರ್‌ಎಸ್ ಯೋಜನೆಗಳಿದ್ದರೂ ಮತ್ತೊಂದು ಯೋಜನೆ ಯಾಕೆ ಬೇಕು ಎಂದು ಅಧಿಕಾರಿಗಳು ಸಂಪುಟಕ್ಕೆ ತಂದಿರಲಿಲ್ಲ. ತಾವು ಸಂಪುಟ ಸಭೆಯಲ್ಲಿ ಪಟ್ಟು ಹಿಡಿದಾಗ 585 ಕೋಟಿ ರೂ.ಬದಲಿಗೆ 355 ಕೋಟಿ ರೂ.ಗೆ ಒಪ್ಪಿಗೆ ನೀಡಲಾಯಿತು.ಈಗ ಕಾಮಗಾರಿ ಮುಗಿಯುವ ಹಂತದಲ್ಲಿದೆ. ಈ ಯೋಜನೆ ಕಾರ್ಯಗತವಾಗುವ ತನಕ ನಾವು ಜನರಿಗೆ ಅಗತ್ಯವಿರುವ ನೀರು ನಿರ್ವಹಣೆ ಮಾಡುವತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಟ್ಯಾಂಕರ್ ನೀರು ಪೂರೈಕೆ: ಹೂಟಗಳ್ಳಿ ನಗರಸಭೆ ಸಹಾಯಕ ಅಭಿಯಂತರ ದಿಲೀಪ್ ಮಾತನಾಡಿ, ಬೆಳವಾಡಿ, ಕೂರ್ಗಳ್ಳಿ ಭಾಗಗಳಲ್ಲಿ ಕೆಲವು ಕಡೆ ನೀರಿನ ಸಮಸ್ಯೆ ಇದೆ. ಅಮೃತೇಶ್ವರಿನಗರ, ಕಾಲೋನಿಗಳಿಗೆ ಅಗತ್ಯ ನೀರು ಪೂರೈಸಲಾಗುತ್ತಿಲ್ಲ. ಕೆಆರ್‌ಎಸ್ ರಸ್ತೆಯಲ್ಲಿರುವ ಪಂಪ್ ಹೌಸ್‌ನಲ್ಲಿ ಹೆಚ್ಚುವರಿಯಾಗಿ ಮೂರು ಮೋಟಾರ್ ಪಂಪ್‌ಗಳನ್ನು ಅಳವಡಿಸಿದರೆ ಸಮಸ್ಯೆ ಇತ್ಯರ್ಥವಾಗಲಿದೆ. ಈಗ ಟ್ಯಾಂಕರ್ ನೀರು ಪೂರೈಸಲು ಕ್ರಮಕೈಗೊಳ್ಳಲಾಗಿದೆ. ಕೆಲವು ಪ್ರದೇಶಗಳಲ್ಲಿ ವಾರದಲ್ಲಿ ಮೂರು ದಿನಗಳ ಕಾಲ ಕೊಡಲಾಗುತ್ತಿದೆ. ವಿಜಯನಗರ ನಾಲ್ಕನೇ ಹಂತಕ್ಕೆ ಕೊಡುತ್ತಿರುವ ನೀರಿನಲ್ಲಿ ಈ ಭಾಗಕ್ಕೆ ಒಂದು ಎಂಎಲ್‌ಡಿ ಕೊಟ್ಟರೆ ಸರಿದೂಗಿಸಬಹುದು ಎಂದು ಶಾಸಕರ ಗಮನಕ್ಕೆ ತಂದರು.

ಟ್ಯಾಂಕರ್‌ಗೆ ಟೆಂಡರ್: ಕಡಕೊಳ ಪಪಂ ಮುಖ್ಯಾಧಿಕಾರಿ ಎಚ್.ಆರ್.ದೀಪಾ ಮಾತನಾಡಿ, ಶಾಂತವೇರಿ ಗೋಪಾಲಗೌಡ ನಗರ, ಕಡಕೊಳ, ಉನ್ನತಹಳ್ಳಿ ಭಾಗಗಳಲ್ಲಿ ಬೋರ್‌ವೆಲ್ ಕೊರೆಸಲಾಗಿದೆ. ಟ್ಯಾಂಕರ್ ನೀರು ಪೂರೈಕೆಗೆ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.

ಶ್ರೀರಾಂಪುರ ಪಪಂ ಮುಖ್ಯಾಧಿಕಾರಿ ಎ.ಎಂ.ಶ್ರೀಧರ್ ಮಾತನಾಡಿ, ಒಂದು ಪ್ರದೇಶ ಬಿಟ್ಟರೆ ಉಳಿದ ಕಡೆಗಳಲ್ಲಿ ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ. ಮುಂಜಾಗ್ರತಾ ಕ್ರಮವಾಗಿ ಟ್ಯಾಂಕರ್‌ನಿಂದ ಕೊಡಲು ಟೆಂಡರ್ ಕರೆಯಲು ಅನುಮೋದನೆ ಪಡೆಯಲಾಗಿದೆ. ಬೋರ್‌ವೆಲ್‌ಗಳನ್ನು ರೀಡ್ರಿಲ್ ಮಾಡಲು ಕ್ರಮಕೈಗೊಳ್ಳಲಾಗಿದೆ ಎಂದು ನುಡಿದರು.

ಹೆಚ್ಚುವರಿ 3 ಪಂಪ್: ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಅಭಿಯಂತರ ಇಕ್ಬಾಲ್ ಆಸಿಫ್ ಮಾತನಾಡಿ, ಹಳೆಯ ಉಂಡುವಾಡಿ ಯೋಜನೆಗೆ ತೊಡಕಾಗಿದ್ದ ಚಿಕ್ಕನಹಳ್ಳಿ ಗ್ರಾಮದ 14 ಎಕರೆ ಜಮೀನಿನಲ್ಲಿ 7 ಎಕರೆ ಜಮೀನು ಇತ್ಯರ್ಥವಾಗಿದೆ. ಉಳಿದ ಏಳು ಎಕರೆ ಜಮೀನಿನ ಮಾಲೀಕರೊಂದಿಗೆ ಜಿಲ್ಲಾಧಿಕಾರಿಗಳು ಸಭೆ ನಡೆಸಿ ಹೆಚ್ಚಿನ ಪರಿಹಾರಕ್ಕೆ ಒಪ್ಪಿದ್ದಾರೆ. ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದರು.

ವಿಜಯನಗರ, ಬೆಳವಾಡಿ, ಕೂರ್ಗಳ್ಳಿ ಬಡಾವಣೆಯ ನೀರಿನ ಸಮಸ್ಯೆ ಇತ್ಯರ್ಥಕ್ಕೆ ಹೆಚ್ಚುವರಿಯಾಗಿ 600 ಎಚ್‌ಪಿ ಸಾಮಾರ್ಥ್ಯದ ಮೂರು ಮೋಟಾರ್ ಪಂಪ್‌ಗಳನ್ನು ಅಳವಡಿಸಲು ಈಗಾಗಲೇ ಕಿರ್ಲೋಸ್ಕರ್ ಕಂಪೆನಿಗೆ ಪ್ರಸ್ತಾಪ ಕಳುಹಿಸಲಾಗಿದೆ. ಪುಣೆಯಿಂದ ಪಂಪ್ ಬಂದ ತಕ್ಷಣವೇ ಅಳವಡಿಸಲಾಗುವುದು. ಇದಾದರೆ ಬೇರೆ ಯಾವ ಸಮಸ್ಯೆ ಇರುವುದಿಲ್ಲ ಎಂದು ಹೇಳಿದರು.

ಮೂರು ಮೋಟಾರ್‌ಗಳ ಖರೀದಿಗೆ ಬೇಕಾದ ಮೊತ್ತವನ್ನು ಹೂಟಗಳ್ಳಿ ನಗರಸಭೆ ಭರಿಸಲಿದೆ. ಕುಡಿಯುವ ನೀರಿನ ಸಮಸ್ಯೆ ಇತ್ಯರ್ಥಕ್ಕೆ ವಾಣಿವಿಲಾಸ ನೀರು ಸರಬರಾಜು ಅಧಿಕಾರಿಗಳ ಮೂಲಕ ಅಗತ್ಯವಿರುವ ನೀರನ್ನು ಪಡೆದರೆ ಸರಿದೂಗಿಸಬಹುದು. ಹಳೆ ಉಂಡುವಾಡಿ ಯೋಜನೆ ಮುಗಿದ ತಕ್ಷಣವೇ ಲೈನ್ ಬದಲಿಸಿಕೊಳ್ಳಬಹುದಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಕಾಮಗಾರಿ ನಿರ್ವಹಣೆಗೆ ಗುತ್ತಿಗೆದಾರರ ಹಿಂದೇಟು: ಮಧ್ಯಪ್ರಾಚ್ಯದೇಶಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಡಾಂಬರ್ ಲಭ್ಯವಾಗದೇ ಡಾಂಬರೀಕರಣ ಕಾಮಗಾರಿ ಟೆಂಡರ್ ಪಡೆಯಲು ಗುತ್ತಿಗೆದಾರರು ಮುಂದಾಗುತ್ತಿಲ್ಲ ಎಂದು ಅಧಿಕಾರಿಗಳು ಶಾಸಕರ ಗಮನಕ್ಕೆ ತಂದರು. ರಸ್ತೆಗಳ ಡಾಂಬರೀಕರಣಕ್ಕಾಗಿ ಗುತ್ತಿಗೆದಾರರು ಎಸ್.ಆರ್. ದರದಂತೆ ಟೆಂಡರ್ ಕರೆದು ವರ್ಕ್ ಆರ್ಡರ್ ನೀಡಿದ್ದರೂ ಕಾಮಗಾರಿ ಆರಂಭಕ್ಕೆ ಮುಂದಾಗಿಲ್ಲ. ಇದಕ್ಕೆ ಡಾಂಬರ್ ಮೊತ್ತ ಜಾಸ್ತಿಯಾಗಿರುವುದರಿಂದ ನಷ್ಟವಾಗುತ್ತದೆ ಎಂಬುದನ್ನು ಮುಂದಿಟ್ಟು ಯಾರೂ ಒಪ್ಪುತ್ತಿಲ್ಲ ಎಂದು ಕಾರ್ಯಪಾಲಕ ಅಭಿಯಂತರರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಗುತ್ತಿಗೆದಾರರೊಂದಿಗೆ ಮುಖಾಮುಖಿ ಮಾತನಾಡಬೇಕು. ಅತೀ ಹೆಚ್ಚು ಟೆಂಡರ್ ಕೋಟ್ ಮಾಡಿರುವ ಗುತ್ತಿಗೆದಾರರನ್ನು ಕರೆದು ಚರ್ಚಿಸಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ ಎಂದು ಸೂಚಿಸಿದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಮೈಸೂರು ಮಹಾ ನಗರಪಾಲಿಕೆ ವಲಯ ಮೂರರ ಕಚೇರಿ ಸಭಾಂಗಣದಲ್ಲಿ ಸೋಮವಾರ ನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳ ಸಭೆ ನಡೆಸಿದರು. ಈ ವೇಳೆ ನಗರಪಾಲಿಕೆ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್,ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಅಭಿಯಂತರ ಇಕ್ಬಾಲ್ ಆಸಿಫ್, ವಲಯ ಮೂರರ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಹೇಗಾನಂದ, ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್. ಚಂದ್ರಶೇಖರ್, ಎಇಇ ಮಧು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಾದ ಸುಜಯ್, ಎ.ಎಂ.ಶ್ರೀಧರ್, ಎಚ್.ಆರ್.ದೀಪಾ, ಮಹೇಶ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

ಡಿಸಿ ಜತೆ ಜಿಟಿಡಿ ಚರ್ಚೆ

ನಗರಸಭೆ, ಪಪಂಗಳಲ್ಲಿ ಉಂಟಾಗಿರುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯವಿರುವ ಅನುದಾನ ಬಿಡುಗಡೆಗೆ ಕೂಡಲೇ ದೂರವಾಣಿ ಮೂಲಕ ಜಿಲ್ಲಾಧಿಕಾರಿಗಳೊಂದಿಗೆ ಶಾಸಕ ಜಿ.ಟಿ.ದೇವೇಗೌಡರು ಚರ್ಚಿಸಿದರು. ಹೂಟಗಳ್ಳಿ ನಗರಸಭೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಉಳಿದ ಕಾಮಗಾರಿಗಳಿಗೂ ಒಪ್ಪಿಗೆ ನೀಡುವುದಾಗಿ ಭರವಸೆ ನೀಡಿದರು. ಅದೇ ರೀತಿ ಉಂಡುವಾಡಿ ಯೋಜನೆ ಭೂಮಿಯ ಪರಿಹಾರದ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿ ಸಾಧ್ಯವಾದಷ್ಟು ಬೇಗನೆ ಕಾಮಗಾರಿ ಆರಂಭಕ್ಕೆ ಅವಕಾಶವಾಗುವ ರೀತಿಯಲ್ಲಿ ನೋಡಿಕೊಳ್ಳುವಂತೆ ಶಾಸಕರು ಸೂಚಿಸಿದರು.

ಬೀದಿದೀಪ ಅಳವಡಿಸಿ: ಬೀದಿದೀಪಗಳನ್ನು ಕೂಡಲೇ ಅಳವಡಿಸಬೇಕು ಎಂದು ಹೂಟಗಳ್ಳಿ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು. ವಿಜಯನಗರ 4ನೇ ಹಂತದಲ್ಲಿ ಈಗಾಗಲೇ ಅಳವಡಿಸಲಾಗಿದ್ದು, ಹೂಟಗಳ್ಳಿ, ಹಿನಕಲ್‌ನಲ್ಲಿ ಅಳವಡಿಸಬೇಕಿದೆ ಎಂದು ಎಇ ದಿಲೀಪ್ ಹೇಳಿದರು. ಇದಕ್ಕೆ ಶಾಸಕರು, ನಾವು ಚಾಲನೆ ಕೊಡುವ ತನಕ ಕಾಯಬಾರದು. ಜನರು ಕತ್ತಲೆಯಲ್ಲಿ ನರಳಬಾರದು. ತಕ್ಷಣವೇ ಎಲ್ಲಾ ಬಲ್ಬ್‌ಗಳನ್ನು ಅಳವಡಿಸಿ ಅನುಕೂಲ ಮಾಡಿಕೊಡಬೇಕು ಎಂದರು.

ಯುಸಿಎಫ್ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿ: ಕೇಂದ್ರ ಸರ್ಕಾರ ನೀಡುವ ಅರ್ಬನ್ ಚಾಲೆಂಜ್ ಫಂಡ್ (ಯುಸಿಎಫ್)ಗೆ ಪ್ರಸ್ತಾವನೆ ಸಲ್ಲಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು. ಕುಡಿಯುವ ನೀರು ಸೇರಿದಂತೆ ಮತ್ತಿತರ ಯೋಜನೆಗಳಿಗೆ ಅನುದಾನ ಕೊಡುತ್ತಿದ್ದಾರೆ. ಈಗಾಗಲೇ ಕ್ರಿಯಾ ಯೋಜನೆ, ಡಿಪಿಆರ್ ಸಿದ್ಧಪಡಿಸಿರುವ ಅಧಿಕಾರಿಗಳು ಕೂಡಲೇ ಸಲ್ಲಿಸಬೇಕು. ಒಪ್ಪಂದಕ್ಕೆ ಬೇಕಾದ ಪ್ರಕ್ರಿಯೆ ಮುಗಿಸಬೇಕು ಎಂದರು. ಈ ವೇಳೆ ಪಾಲಿಕೆ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್, ವಲಯ ಮೂರರ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಹೇಗಾನಂದ, ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್. ಚಂದ್ರಶೇಖರ್, ಎಇಇ ಮಧು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಾದ ಸುಜಯ್, ಎ.ಎಂ.ಶ್ರೀಧರ್, ಎಚ್.ಆರ್. ದೀಪಾ, ಮಹೇಶ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

ಜನರ ಸಮಸ್ಯೆ ನಿವಾರಣೆಗೆ ಮೊದಲ ಆದ್ಯತೆ



ನಿವಾಸಿಗಳಿಗೆ ಸಂಸದ ಯದುವೀರ್ ಭರವಸೆ

ಮೈಸೂರು, ಜೂ. 15– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸರ್ದಾರ್ ವಲ್ಲಭ ಭಾಯಿ ಪಟೇಲ್ ನಗರ, ಹೊಸಹುಂಡಿ, ಗೊರೂರು, ರಮಾಬಾಯಿ ನಗರ ಹಾಗೂ ಮಹದೇವಪುರ ಪ್ರದೇಶಗಳಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಾರ್ವಜನಿಕರೊಂದಿಗೆ ಜನಸಂಪರ್ಕ ಕಾರ್ಯಕ್ರಮ ನಡೆಸಿ, ಅವರ ಕುಂದುಕೊರತೆಗಳು ಹಾಗೂ ಸ್ಥಳೀಯ ಸಮಸ್ಯೆಗಳನ್ನು ಆಲಿಸಿದರು.

ಕಾರ್ಯಕ್ರಮದ ವೇಳೆ ನಾಗರಿಕರು ಕುಡಿಯುವ ನೀರು, ರಸ್ತೆ, ಒಳಚರಂಡಿ, ಬೀದಿ ದೀಪ ಸೇರಿದಂತೆ ನಾನಾ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಂಸದರಿಗೆ ಮಾಹಿತಿ ನೀಡಿದರು.

ಸಾರ್ವಜನಿಕರ ಮನವಿಗಳನ್ನು ಸ್ವೀಕರಿಸಿದ ಸಂಸದರು, ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಶೀಘ್ರ ಪರಿಹಾರಕ್ಕೆ ಕ್ರಮಕೈಗೊಳ್ಳುವ ಭರವಸೆ ನೀಡಿದರು. ಜನರ ಸಮಸ್ಯೆಗಳನ್ನು ನೇರವಾಗಿ ಆಲಿಸಿ ಪರಿಹಾರ ಕಂಡುಕೊಳ್ಳುವುದು ಜನಪ್ರತಿನಿಧಿಗಳ ಕರ್ತವ್ಯ. ಕ್ಷೇತ್ರದ ಅಭಿವೃದ್ಧಿ ಹಾಗೂ ನಾಗರಿಕರ ಕಲ್ಯಾಣಕ್ಕೆ ಸದಾ ಬದ್ಧರಾಗಿರುವುದಾಗಿ ತಿಳಿಸಿದರು. ಈ ವೇಳೆ ಬಿಜೆಪಿ ಮೈಸೂರು ನಗರ ಜಿಲ್ಲಾ ಅಧ್ಯಕ್ಷ ಎಲ್.ನಾಗೇಂದ್ರ, ನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಕೆ.ರುದ್ರಮೂರ್ತಿ, ಮಂಡಲ ಅಧ್ಯಕ್ಷ ಪೈಲ್ವಾನ್ ಟಿ.ರವಿ, ಸುನಿಲ್, ಮಹದೇವಸ್ವಾಮಿ, ರಾಘವೇಂದ್ರ, ಶಿವಕುಮಾರ್, ಪ್ರದೀಪ್ ಇದ್ದರು.

'ಅಗತ್ತಿಯಾರ್; ದಿ ಯುನಿಫೈಯರ್' ತಮಿಳು ಕೃತಿ ಬಿಡುಗಡೆ





ನವದೆಹಲಿಯ ವೈಸ್ ಪ್ರೆಸಿಡೆಂಟ್ ಎನ್‌ಕ್ಲೇವ್‌ನಲ್ಲಿ ಸೋಮವಾರ ನಡೆದಂತಹ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮೈಸೂರಿನ ಖ್ಯಾತ ವಕೀಲ ಶ್ಯಾಂ ಭಟ್ ಹಾಗೂ ಅಗಸ್ತ್ಯ ಆಸ್ಪತ್ರೆಯ ಡಾ.ಎಂ.ಎನ್.ಸುಧಾ ಅವರು ಬರೆದ(ಇಂಗ್ಲಿಷ್ ಮತ್ತು ಕನ್ನಡ) 'ಅಗತ್ತಿಯಾರ್; ದಿ ಯುನಿಫೈಯರ್' ತಮಿಳು ಅವತರಣಿಕೆ ಪುಸ್ತಕವನ್ನು ಬಿಡುಗಡೆ ಮಾಡಿದರು. ನಿವೃತ್ತ ಪ್ರಾಂಶುಪಾಲೆ ಡಾ.ಎಸ್.ಕೆ.ಕಲ್ಯಾಣಿ ಅವರು ತಮಿಳಿಗೆ ಭಾಷಾಂತರ ಮಾಡಿದ್ದಾರೆ. ಇಂದಿನ ಸಮಾರಂಭದಲ್ಲಿ ಶ್ಯಾಂ ಭಟ್ ಹಾಗೂ ಡಾ. ಸುಧಾ ಸಹ ವೇದಿಕೆಯಲ್ಲಿದ್ದಾರೆ. ಎಡಚಿತ್ರದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಕಾಣಬಹುದು.

ಕಾನ್‌ಸ್ಟೇಬಲ್ ಹುದ್ದೆಗೆ ಮೈಸೂರಲ್ಲಿ ವಸತಿಸಹಿತ ತರಬೇತಿ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ, ನೇಗಿಲಯೋಗಿ ಸ್ಪರ್ಧಾ ಕೇಂದ್ರ, ಪೊಲೀಸ್ ಆರಕ್ಷಕ ಸೇವಾ ಟ್ರಸ್ಟ್ ಮತ್ತು ಸಬ್‌ಇನ್ಸ್‌ಪೆಕ್ಟರ್ ರಾಮಲಿಂಗು ಚಾರಿಟಬಲ್ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಪೊಲೀಸ್ ಇಲಾಖೆಯಲ್ಲಿ ಪುರುಷ ಮತ್ತು ಮಹಿಳಾ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿ ಮಾಡಲು ನಡೆಯುತ್ತಿರುವ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತವಾಗಿ ವಸತಿಸಹಿತ ತರಬೇತಿ ಆಯೋಜಿಸುತ್ತಿದೆ. ಆಸಕ್ತ ಅರ್ಹ ಗ್ರಾಮೀಣ ಪ್ರದೇಶದ ಕೆಲವು ಅಭ್ಯರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲಾಗುತ್ತಿದೆ. ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಆನ್‌ಲೈನ್ ಮೂಲಕ ಜು.3ರೊಳಗೆ ಸಲ್ಲಿಸಬಹುದು. ಆಗಸ್ಟ್ 2026ರ ಮಾಹೆಯಲ್ಲಿ ಪರೀಕ್ಷೆ ನಡೆಯುವ ಸಾಧ್ಯತೆಗಳಿವೆ. ಅಪಾರ ಅನುಭವವಿರುವ ಮತ್ತು ಸಮಾಜ ಸೇವಾ ಕಾಳಜಿ ಇರುವ ಬೋಧಕರು ತರಬೇತಿ ನೀಡಲಿದ್ದಾರೆ. ಮಾಹಿತಿಗೆ ಮೊ.ಸಂಖ್ಯೆ: 9483453005, 9900629393, 9164866398, 9448554018, 9141070012 ಸಂಪರ್ಕಿಸಬಹುದು.

ಎಚ್ಚರ ಗ್ರಾಹಕರೇ ಎಚ್ಚರ....ಎಚ್ಚರ....

ಮೈಸೂರಲ್ಲಿ ಕಾರ್ಯಾಚರಿಸುತ್ತಿದೆ 'ನಗದು ನೀಡಿ ಫೋನ್ ಪೇ ಮಾಡುತ್ತೇನೆ' ಎನ್ನುವ ವಂಚನೆ ಜಾಲ

ಎನ್.ಆರ್.ಠಾಣೆಯಲ್ಲಿ ಪ್ರಕರಣ ದಾಖಲು



ಮೈಸೂರು, ಜೂ.15(ಜಿಎ)– 'ನೀವು ನನಗೆ ನಗದು ನೀಡಿ ನಾನು ನಿಮಗೆ ಯುಪಿಐ ಮೂಲಕ ಹಣ ವರ್ಗಾವಣೆ ಮಾಡುತ್ತೇನೆ' ಎಂದು ವಂಚಿಸುವವರ ಸಂಖ್ಯೆ ಮೈಸೂರಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಎಟಿಎಂನ ಡೆಪಾಸಿಟ್ ಮೆಷಿನ್ ಮೂಲಕ ಹಣ ಹಾಕುವವರು ಇನ್ನೂ ಮುಂದೆ ಇಲ್ಲಿಯೂ ಎಚ್ಚರ ವಹಿಸಬೇಕು. ಇಲ್ಲವಾದರೆ ನಿಮ್ಮ ಹಣವನ್ನು ವಂಚಕರು ದೋಚುತ್ತಾರೆ. ಇದೇ ರೀತಿ ಪ್ರತ್ಯೇಕ ಪ್ರಕರಣದಲ್ಲಿ 30 ಸಾವಿರ ವಂಚಿಸಿರುವ ಸಂಬಂಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಎನ್‌ಆರ್ ಮೊಹಲ್ಲಾದ ಇಂಜಿನಿಯರ್‌ರೊಬ್ಬರು ಜೂನ್ 8ರಂದು ರಾತ್ರಿ 10.20ರಲ್ಲಿ ಶಿವಾಜಿ ರಸ್ತೆಯಲ್ಲಿರುವ ಹೆಚ್‌ಡಿಎಫ್‌ಸಿ ಬ್ಯಾಂಕಿನ ಡೆಪಾಸಿಟ್ ಮೆಷಿನ್ ಮೂಲಕ ತಮ್ಮ ಅಣ್ಣನ ಖಾತೆ ಹಣ ಜಮೆ ಮಾಡಲು ತೆರಳಿದ್ದಾಗ ಎಟಿಎಂ ಮುಂಭಾಗವಿದ್ದ ವ್ಯಕ್ತಿಯೋರ್ವ ನೀವು ಹಣ ಡೆಪಾಸಿಟ್ ಮಾಡಲು ಬಂದಿದ್ದೀರಾ ಎಂದು ಪ್ರಶ್ನಿಸಿದ್ದಾನೆ. ಅದಕ್ಕೆ ಇಂಜಿನಿಯರ್ ಹೌದು ನನ್ನ ಅಣ್ಣನ ಖಾತೆಗೆ 10 ಸಾವಿರ ರೂ. ಜಮೆ ಮಾಡಬೇಕಿದೆ ಎಂದು ತಿಳಿಸಿದ್ದಾರೆ.

ಅದಕ್ಕೆ ಆ ವ್ಯಕ್ತಿ ನೀವು ನನಗೆ 10 ಸಾವಿರ ರೂ. ನಗದು ಕೊಡಿ ನಾನು ನಿಮಗೆ ಫೋನ್ ಪೇ ಮಾಡುತ್ತೇನೆ ಎಂದು ಹೇಳಿ ಅವರ ಸ್ಕ್ಯಾನರ್‌ಗೆ 10ಸಾವಿರ ರೂ. ಅನ್ನು ಫೋನ್ ಪೇ ಮಾಡಿದ್ದಾನೆ. ಕಳುಹಿಸಿದ್ದೇನೆ ಎಂದು ಆತನ ಮೊಬೈಲ್‌ನಲ್ಲಿ ತೋರಿಸಿದ್ದಾನೆ. ಇದನ್ನು ನಂಬಿದ ಇಂಜಿನಿಯರ್ 10 ಸಾವಿರ ರೂ. ನಗದು ಕೊಟ್ಟು ಕಳುಹಿಸಿದ್ದಾರೆ. ಆದರೆ, ಖಾತೆಗೆ ಬಂದಿರುವುದಿಲ್ಲ ಜೂ.13ರವರೆಗೂ ಹಣ ಬಾರದಿದ್ದರಿಂದ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

20 ಸಾವಿರ: ಜೂ.12ರಂದು ರಾತ್ರಿ 9.30ಕ್ಕೆ ಉದ್ಯಮಿಯೊಬ್ಬರು ಅವರ ಖಾತೆಗೆ 20 ಸಾವಿರ ರೂ ನಗದನ್ನು ಜಮೆ ಮಾಡಲು ಬನ್ನಿಮಂಟಪದ ಎಸ್‌ಎಸ್ ನಗರದ ಜೆಎಸ್‌ಎಸ್ ಕಾಲೇಜು ಬಳಿ ಇರುವ ಎಸ್‌ಬಿಐ ಬ್ಯಾಂಕಿನ ಡೆಪಾಸಿಟ್ ಮೆಷಿನ್ ಬಳಿ ಹೋಗಿದ್ದಾಗ ಇಬ್ಬರು ಯುವಕರು ಬೈಕಿನಲ್ಲಿ ಬಂದು 'ನೀವು ಡೆಪಾಸಿಟ್ ಮಾಡಲು ಬಂದಿದ್ದೀರಾ' ಎಂದು ಕೇಳಿದ್ದಾರೆ. ಅದಕ್ಕೆ ಉದ್ಯಮಿ ಹೌದು ಎಂದು ಉತ್ತರಿಸಿದಾಗ ನೀವು ನಮಗೆ ನಗದು ನೀಡಿ ನಾವು ನಿಮಗೆ ಫೋನ್ ಪೇ ಮಾಡುತ್ತೇವೆ ಎಂದು ವಂಚಿಸಿ, 20 ಸಾವಿರ ರೂ. ನಗದು ಪಡೆದು ಅವರಿಗೆ ಫೋನ್ ಪೇ ಮಾಡಿರುವುದಾಗಿ ತೋರಿಸಿ ಬೈಕಿನಲ್ಲಿ ಪರಾರಿಯಾಗಿದ್ದಾರೆ.

ಉದ್ಯಮಿ ಖಾತೆಗೆ ಹಣ ಬಂದಿದೆಯಾ ಎಂದು ಪರಿಶೀಲಿಸಿದಾಗ ಬಂದಿರಲಿಲ್ಲ. ನಂತರ ಮರುದಿನ ಎನ್‌ಆರ್ ಠಾಣೆಯಲ್ಲಿ ಉದ್ಯಮಿ ದೂರು ದಾಖಲಿಸಿದ್ದಾರೆ.

ಮೈಸೂರು ಅತೀ ಪ್ರಮುಖ ವಾಣಿಜ್ಯ ಮಾರ್ಗಕ್ಕೆ ಮೆರಗು

ಡಿ.ದೇವರಾಜ ಅರಸು ರಸ್ತೆ ಮಳಿಗೆಗಳ ಮುಂದೆ ಗಿಡಗಳ ಪಾಟ್ ಜೋಡಣೆ

ಮೈಸೂರು, ಜೂ.15(ಎಂಕೆ)–ಮೈಸೂರಿನ ಪ್ರಮುಖ ವಾಣಿಜ್ಯ ಮಾರ್ಗವಾದ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮಳಿಗೆಗಳ ಎದುರು 'ಗಿಡಗಳ ಪಾಟ್ ಜೋಡಣೆ' ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಡಿ.ದೇವರಾಜ ಅರಸು ರೋಡ್ ಟ್ರೇಡರ್ಸ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿರುವ ಈ ಅಭಿಯಾನಕ್ಕೆ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ನಗರದಲ್ಲಿ ಹಸಿರೀಕರಣ ಹೆಚ್ಚಿಸುವ ನಿಟ್ಟಿನಲ್ಲಿ ವಾಣಿಜ್ಯ ಮಳಿಗೆಗಳ ಮುಂಭಾಗ ಗಿಡಗಳ ಪಾಟ್‌ಗಳ ಜೋಡಣೆ ಮಾಡಬೇಕು ಎಂಬ ಚಿಂತನೆ ಅರಸು ರಸ್ತೆಯ ಟ್ರೇಡರ್ಸ್ ಅಸೋಸಿಯೇಷನ್ ಸಹಯೋಗದೊಂದಿಗೆ ಸಾಕಾರಗೊಳ್ಳಲು ಆರಂಭವಾಗಿದೆ ಎಂದರು.

ವಾಣಿಜ್ಯ ಮಳಿಗೆಗಳ ಮುಂಭಾಗ ಗಿಡಗಳ ಪಾಟ್ ಜೋಡಣೆಯಿಂದ ನಗರದ ಸೌಂದರ್ಯವೂ ಹೆಚ್ಚಲಿದೆ. ಅಲ್ಲದೆ ರಸ್ತೆ ಕೂಡ ಸ್ವಚ್ಛತೆಯಿಂದ ಆಕರ್ಷಕವಾಗಿ ಕಾಣಲಿದೆ. ದೇವರಾಜ ಅರಸು ರಸ್ತೆ ಮಾತ್ರವಲ್ಲದೆ ಮುಂದಿನ ದಿನಗಳಲ್ಲಿ ಈ ಅಭಿಯಾನ ಎಲ್ಲೆಡೆ ವಿಸ್ತರಣೆಯಾಗಲಿದೆ. ಕಾಳಿದಾಸ ರಸ್ತೆ ಸೇರಿದಂತೆ ಇನ್ನಿತರೆ ಪ್ರಮುಖ ರಸ್ತೆಗಳಲ್ಲಿ ಟ್ರೇಡರ್ಸ್‌ಗಳೊಂದಿಗೆ ಚರ್ಚಿಸಿ ವಿಸ್ತರಣೆ ಮಾಡಲಾಗುವುದು ಎಂದರು.

440 ಪಾಟ್‌ಗಳ ಜೋಡಣೆ: ಡಿ.ದೇವರಾಜ ಅರಸು ರೋಡ್ ಟ್ರೇಡರ್ಸ್ ಅಸೋಸಿಯೇಷನ್ ಅಧ್ಯಕ್ಷ ವೀರಭದ್ರಪ್ಪ ಮಾತನಾಡಿ, ಮೊದಲಿನಿಂದಲೂ ದೇವರಾಜ ಅರಸು ರಸ್ತೆಯಲ್ಲಿ ಪಾಟ್‌ಗಳ ಜೋಡಣೆ ಮಾಡಬೇಕು ಎಂದುಕೊಂಡಿದ್ದೆವು. ಈಗ ಪಾಲಿಕೆ ಸಹಕಾರದಿಂದ ಸಾಕಾರಗೊಳ್ಳುತ್ತಿದೆ. ಅರಸು ರಸ್ತೆಯ ಎರಡು ಬದಿಯಲ್ಲಿ 440 ಗಿಡಗಳ ಪಾಟ್‌ಗಳನ್ನು ಜೋಡಣೆ ಮಾಡಲಾಗುವುದು ಎಂದು ತಿಳಿಸಿದರು.

ಪೇ ಅಂಡ್ ಪಾರ್ಕ್‌ಗೆ ಮನವಿ: ದೇವರಾಜ ಅರಸು ರಸ್ತೆಯಲ್ಲಿ ಪೇ ಅಂಡ್ ಪಾರ್ಕಿಂಗ್ ಮಾಡಬೇಕು ಎಂದು ಪಾಲಿಕೆಗೆ ಮೊದಲಿನಿಂದಲೂ ಮನವಿ ಮಾಡಲಾಗುತ್ತಿದೆ. ಆದರೆ, ಕೆಲವೊಂದು ಕಾರಣದಿಂದ ಅದು ಸಾಧ್ಯವಾಗಿಲ್ಲ. ಮುಂದಿನ ದಿನದಲ್ಲಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ. ಹಾಗೆಯೇ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವಂತೆ ಪಾಲಿಕೆ ಆಯುಕ್ತರಿಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು. ಈ ವೇಳೆ ಡಿ.ದೇವರಾಜ ಅರಸು ರೋಡ್ ಟ್ರೇಡರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಮಹೇಂದ್ರ ಜೈನ್, ಉಪಾಧ್ಯಕ್ಷ ಖಾಜಾ, ಖಜಾಂಚಿ ನರ್ತನ್ ಮತ್ತಿತರರಿದ್ದರು.



ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮಳಿಗೆಗಳ ಎದುರು 'ಗಿಡಗಳ ಪಾಟ್ ಜೋಡಣೆ' ಅಭಿಯಾನಕ್ಕೆ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸೋಮವಾರ ಚಾಲನೆ ನೀಡಿದರು.

12 ಶೌಚಾಲಯಗಳ ನಿರ್ಮಾಣ...

"ದೇವರಾಜ ಅರಸು ರಸ್ತೆಯಲ್ಲಿ ವಾಣಿಜ್ಯೋದ್ಯಮಿಗಳಿಗೆ ಅನುಕೂಲವಾಗುವಂತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಕಾಡಾ ಕಚೇರಿ ಆವರಣ ಸೇರಿದಂತೆ ನಗರದಲ್ಲಿ ಹೊಸದಾಗಿ 12 ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ 88 ಶೌಚಾಲಯಗಳಿದ್ದು, ಅವುಗಳ ನಿರ್ವಹಣೆ ಜೊತೆಗೆ ಹೊಸ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ. ಜೊತೆಗೆ ಬಜೆಟ್‌ನಲ್ಲಿಯೂ 15 ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಲಾಗಿದೆ. **–ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಪಾಲಿಕೆ**

ಕಬ್ಬಿನ ಬಾಕಿ ಹಣಕ್ಕಾಗಿ ಒತ್ತಾಯಿಸಿ ಚಾಂಪುಗರ್‌ಗೆ ರೈತರ ಮುತ್ತಿಗೆ



ರೈತ ಸಂಘದ ಕಾರ್ಯಕರ್ತರು ಚಾಂಪುಗರ್‌ಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಭಾರತೀನಗರ, ಜೂ.15– ಪ್ರತೀ ಟನ್ ಕಬ್ಬಿಗೆ ಕೊಡಬೇಕಾಗಿರುವ 50 ರೂ ಬಾಕಿ ಹಣವನ್ನು ಕೂಡಲೇ ಪಾವತಿಸಬೇಕೆಂದು ಆಗ್ರಹಿಸಿ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಗೆ ಮುತ್ತಿಗೆ ಹಾಕಿ ಕರ್ನಾಟಕ ರಾಜ್ಯ ರೈತಸಂಘದ ಕಾರ್ಯಕರ್ತರು ಪ್ರತಿಭಟಿಸಿದರು.

ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಎತ್ತಿನ ಗಾಡಿಗಳ ಜೊತೆ ಮೆರವಣಿಗೆ ನಡೆಸಿ ನಂತರ ಕಾರ್ಖಾನೆಗೆ ಕಚೇರಿಗೆ ಮುತ್ತಿಗೆ ಹಾಕಿ ಆಡಳಿತ ಮಂಡಳಿ ವಿರುದ್ಧ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ವಿಭಾಗೀಯ ಉಪಾಧ್ಯಕ್ಷ ಬೋರಾಪುರ ಶಂಕರೇಗೌಡ ಮಾತನಾಡಿ, ಸರ್ಕಾರ ಆದೇಶ ಹೊರಡಿಸಿರುವಂತೆ ಪ್ರತೀ ಟನ್ ಕಬ್ಬಿಗೆ 50 ರೂ. ಗಳನ್ನು ಬಿಡುಗಡೆ ಮಾಡಿದ್ದು, ಇನ್ನುಳಿದ 50 ರೂ.ಗಳನ್ನು ಕಾರ್ಖಾನೆ ಕೂಡಲೇ ನೀಡಬೇಕು. ಅಲ್ಲಿಯವರೆಗೂ ಕಾರ್ಖಾನೆಯನ್ನು ಪ್ರಾರಂಭಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಈಗಾಗಲೇ ಪೆಟ್ರೋಲ್–ಡೀಸೆಲ್, ರಸಗೊಬ್ಬರಗಳ ಬೆಲೆ ಏರಿಕೆಗೊಂಡಿದೆ. ರೈತರು ವ್ಯವಸಾಯದಲ್ಲಿ ಸಾಕಷ್ಟು ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಮತ್ತೆ ಪ್ರವರ್ತಿಸಿ ಟನ್ ಕಬ್ಬಿಗೆ 5 ಸಾವಿರ ರೂ. ಗಳನ್ನು ನಿಗದಿಪಡಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಘಟಕದ ಉಪಾಧ್ಯಕ್ಷ ಜಿ.ಎ.ಶಂಕರ್ ಮಾತನಾಡಿ, ಕಾರ್ಖಾನೆಯವರು ಇದುವರೆಗೂ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಿದ್ದಾರೆಯೇ ಹೊರತು ರೈತರ ಸಮಸ್ಯೆಗಳಿಗೆ ಸ್ಪಂದಿಸಲು ಎಂದೂ ಮುಂದೆ ಬಂದಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ರೈತರು ವ್ಯವಸಾಯವನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಕಬ್ಬನ್ನಾದರೂ ಬೆಳೆದರೆ ಕಾರ್ಖಾನೆ ನಡೆಸಲು ಸಾಧ್ಯವಿಲ್ಲ. ಇದನ್ನು ಮನಗಂಡು ಕಾರ್ಖಾನೆ ಹಣ ಬಿಡುಗಡೆಗೆ ಗಮನ ವಹಿಸಬೇಕೆಂದು ಆಗ್ರಹಿಸಿದರು.

ರೈತರಿಂದ ಮನವಿ: ರೈತರಿಂದ ಮನವಿ ಸ್ವೀಕರಿಸಿ ಕಾರ್ಖಾನೆ ಉಪಾಧ್ಯಕ್ಷ ಆರ್.ಮಣಿ ಅವರು ಮಾತನಾಡಿ, ಕಾರ್ಖಾನೆ ಉತ್ಪಾದಿಸುವ ಸಕ್ಕರೆಗೆ ಕಳೆದ 10 ವರ್ಷಗಳಿಂದ ಸ್ಥಿರ ಬೆಲೆ ಇದ್ದು, ಕಾರ್ಖಾನೆಯ ಹಲವು ಲೈಸೆನ್ಸ್‌ಗಳಿಗೆ ಸರ್ಕಾರ ಹಣ ಏರಿಕೆಗೊಳಿಸಿದ್ದು, ರೈತರಿಗೆ ಸಮಸ್ಯೆ ಇದಾವಂತೆಯೇ ಕಾರ್ಖಾನೆಗೂ ಸಮಸ್ಯೆ ಇದೆ. ಹಾಗಾಗಿ ನಾವು ನ್ಯಾಯಾಲಯದ ಮೆಟ್ಟಿಲೇರಿರುವುದು ರೈತರ ವಿರುದ್ಧವಲ್ಲ, ಸರ್ಕಾರದ ವಿರುದ್ಧ ಎಂದು ಸ್ಪಷ್ಟಪಡಿಸಿದರು.

ಇದನ್ನು ಮನಗಂಡು ಸರ್ಕಾರ ಕಾರ್ಖಾನೆ ಮತ್ತು ರೈತರ ಬೇಡಿಕೆಗಳನ್ನು ಈಡೇರಿಸಲು ಮುಂದಾಗಲಿ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತಸಂಘದ ಜಿಲ್ಲಾಘಟಕದ ಕಾರ್ಯದರ್ಶಿ ಲಿಂಗಪ್ಪಾಜಿ, ತಾಲ್ಲೂಕು ಅಧ್ಯಕ್ಷ ಉಮೇಶ್, ಕಾರ್ಯದರ್ಶಿ ವಿನೋದ್‌ಬಾಬು, ರಾಮನಗರ ಜಿಲ್ಲಾಧ್ಯಕ್ಷ ಕೃಷ್ಣಪ್ಪ, ಮಹಿಳಾ ಅಧ್ಯಕ್ಷೆ ರತ್ನಮ್ಮ, ತಾಲ್ಲೂಕು ಉಪಾಧ್ಯಕ್ಷ ಮುಟ್ಟನಹಳ್ಳಿ ವೆಂಕಟೇಶ್, ಸಿ.ಎ.ಕೆರೆ ಮಹದೇವು, ಕಬ್ಬೆಹಳ್ಳಿದೊಡ್ಡಿ ಸಿದ್ದರಾಜು, ಡಿ.ಎ.ಕೆರೆ ರಮೇಶ್, ಮಠದದೊಡ್ಡಿ ಕೆಂಪಣ್ಣ, ಯಡಗನಹಳ್ಳಿ ರಾಮಣ್ಣ, ಮಾದರಹಳ್ಳಿ ದೇಶೀಗೌಡ, ಅಣ್ಣೂರು ಕೃಷ್ಣ, ರಾಜೇಶ್, ಬೊಪ್ಪಸಮುದ್ರ ದಯಾನಂದ ಸೇರಿದಂತೆ ಹಲವರು ಭಾಗವಹಿಸಿದ್ದರು.

ಅನರ್ಹರು ಗ್ಯಾರಂಟಿ ಯೋಜನೆ ಫಲಾನುಭವಿಗಳಾಗುತ್ತಿರುವ ಬಗ್ಗೆ ಪರಿಶೀಲಿಸಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ದಿನೇಶ್ ಗೂಳಿಗೌಡ ಮನವಿ



ಮಂಡ್ಯ: ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಯಾದ ಪಂಚಗ್ಯಾರಂಟಿಗಳ ಪೈಕಿ ಗೃಹಲಕ್ಷ್ಮಿ ಸೇರಿದಂತೆ ಕೆಲ ಯೋಜನೆಗಳನ್ನು ಅನರ್ಹರು ಸಹ ಪಡೆಯುತ್ತಿದ್ದು, ಈ ಬಗ್ಗೆ ಸರ್ಕಾರ ಮತ್ತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರಿಶೀಲನೆ ನಡೆಸಬೇಕೆಂದು ವಿಧಾನಪರಿಷತ್ ಸದಸ್ಯ ಹಾಗೂ ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಈ ಸಂಬಂಧ ಸಿಎಂ ಡಿಕೆಶಿ ಅವರಿಗೆ ಪತ್ರ ಬರೆದಿರುವ ಅವರು, 2026ರ ಅಂಕಿ ಅಂಶಗಳಂತೆ ಗೃಹಲಕ್ಷ್ಮಿ ಫಲಾನುಭವಿಗಳಲ್ಲಿ ಐ.ಟಿ./ಜಿ.ಎಸ್.ಟಿ. ಪಾವತಿಸುತ್ತಿರುವ 1,94,560 ಫಲಾನುಭವಿಗಳಿಗೆ ರೂ.2000/–ಗಳಂತೆ ಪ್ರತಿ ತಿಂಗಳು ರೂ.38.91 ಕೋಟಿಗಳು ಹಾಗೂ ವಾರ್ಷಿಕ ರೂ.466.94 ಕೋಟಿಗಳಾಗುತ್ತವೆ. ಐಟಿ/ಜಿಎಸ್‌ಟಿ ಪಾವತಿಸುವವರಿಗೆ ಸಹ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರೆ ಎಂಬುದನ್ನು ಪರಿಶೀಲಿಸಿ ಸರ್ಕಾರ ತೀರ್ಮಾನಿಸಬೇಕೆಂದು ಕೋರಿದ್ದಾರೆ.

ಮರಣ ಹೊಂದಿರುವ ಫಲಾನುಭವಿಗಳ ಸಂಪೂರ್ಣ ಅಂಕಿ ಅಂಶಗಳ ಮಾಹಿತಿಯನ್ನು ಸಂಗ್ರಹಿಸುವಂತೆ ಸಂಬಂಧ ಪಟ್ಟ ಇಲಾಖೆಯವರಿಗೆ ಸೂಚನೆ ನೀಡಬೇಕು. ಪ್ರತಿ ಗ್ರಾಮ ಅಥವಾ ನಗರ ಪ್ರದೇಶಗಳಲ್ಲಿ ವಾರ್ಡ್‌ವಾರು ಮರಣ ದಾಖಲೆಗಳನ್ನು ಕಡ್ಡಾಯವಾಗಿ ದಾಖಲಿಸಿ ಅದರಲ್ಲಿ ಫಲಾನುಭವಿಗಳ ವಿವರಗಳನ್ನು ಇಲಾಖೆಯೊಂದಿಗೆ ಹಂಚಿಕೊಳ್ಳುವಂತೆ ಸೂಚನೆ ನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಈಗಾಗಲೇ ಮರಣ ಹೊಂದಿರುವ ಫಲಾನುಭವಿಗಳಿಗೆ ಪಾವತಿಸಿರುವ ಮೊತ್ತವನ್ನು ಅವರ ಖಾತೆಯಿಂದ ಹಿಂಪಡೆಯುವಂತೆ ಬ್ಯಾಂಕ್‌ಗಳಿಗೆ ನಿರ್ದೇಶಿಸಬೇಕು. ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಯಡಿ ಪಡಿತರ ವಿತರಣೆ ಮಾಡುವಾಗ ಫಲಾನುಭವಿಯ ಬೆರಳಚ್ಚು ಪಡೆಯುವ ಮಾದರಿಯಲ್ಲಿ ಗೃಹಲಕ್ಷ್ಮಿ ಯೋಜನೆಗೂ ಅಳವಡಿಸುವ ಬಗ್ಗೆ ಪರಿಶೀಲಿಸಬಹುದು ಎಂದು ತಿಳಿಸಿದ್ದಾರೆ.

ಒಂದು ಕುಟುಂಬದ ಯಜಮಾನಿಗೆ 30 ಕಂತಿನ ಹಣ ನೇರವಾಗಿ ಡಿಬಿಟಿ ಮುಖಾಂತರ ತಲಾ 2,000/– ದಂತೆ ಒಟ್ಟು ರೂ.60,000/–ಗಳು ಈಗಾಗಲೇ ಸಂದಾಯವಾಗಿರುತ್ತದೆ. ಗೃಹಲಕ್ಷ್ಮಿ ಯೋಜನೆಯಡಿ ಇದುವರೆಗೆ ಒಟ್ಟು 1.24 ಕೋಟಿ ಫಲಾನುಭವಿಗಳಿಗೆ ರೂ.72,253 ಕೋಟಿಗಳನ್ನು ಪಾವತಿ ಮಾಡಲಾಗಿದೆ. ಈ ಯೋಜನೆಯಡಿ ಕೆಲವು ಗೃಹಜ್ಯೋತಿ ಫಲಾನುಭವಿಗಳು ವಾಣಿಜ್ಯ ಸಂಪರ್ಕಗಳಿಗೂ ಯೋಜನೆಯ ಬಳಕೆ ಮಾಡುತ್ತಿರುವ ಬಗ್ಗೆ ದೂರು ಕೇಳಿಬರುತ್ತಿರುವುದರಿಂದ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ ಅಂಶಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ಕಸ್ತೂರಬಾ ಗಾಂಧಿ ವಸತಿ ಶಾಲೆ ಪ್ರವೇಶಕ್ಕೆ ಆಹ್ವಾನ

ಹುಲಗೂರು: ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದಲ್ಲಿರುವ ಕಸ್ತೂರಬಾ ಗಾಂಧಿ ಬಾಲಿಕಾ ವಸತಿ ಶಾಲೆ (KGBV)ಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದೆ.

ಈ ವಸತಿ ಶಾಲೆಯಲ್ಲಿ 6ನೇ ತರಗತಿಯಿಂದ ಎಸ್‌ಎಸ್‌ಎಲ್‌ಸಿ ವರೆಗೆ ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶ ಕಲ್ಪಿಸಲಾಗಿದ್ದು, ಯಾವುದೇ ಪ್ರವೇಶ ಪರೀಕ್ಷೆ ಅಥವಾ ಶುಲ್ಕ ಇರುವುದಿಲ್ಲ. ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯ ಜೊತೆಗೆ ಕಂಪ್ಯೂಟರ್ ಶಿಕ್ಷಣ, ವೈದ್ಯಕೀಯ ಸೌಲಭ್ಯ, ಕರಾಟೆ ಹಾಗೂ ಕ್ರೀಡಾ ತರಬೇತಿ ನೀಡಲಾಗುತ್ತದೆ. ಒಟ್ಟು 200 ವಿದ್ಯಾರ್ಥಿನಿಯರಿಗೆ ಮಾತ್ರ ಪ್ರವೇಶ ಅವಕಾಶವಿದ್ದು, ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರು ವಸತಿ ನಿಲಯದ ಸೌಲಭ್ಯವನ್ನು ಬಳಸಿಕೊಳ್ಳಬಹುದು. ಮಾಹಿತಿಗೆ ಸಂಪರ್ಕಿಸಿ ಮೊ. 8296795939 ಮತ್ತು 9686831323.

ಗೃಹ ಕಾರ್ಮಿಕರಿಗೂ ಕಾರ್ಮಿಕ ಸ್ಥಾನಮಾನ ನೀಡಲು ಒತ್ತಾಯ

ಮಂಡ್ಯ: ಗೃಹಕಾರ್ಮಿಕರಿಗೆ ಕಾರ್ಮಿಕ ಸ್ಥಾನಮಾನ ನೀಡಿ ಸಾಮಾಜಿಕ ಭದ್ರತೆ, ಕನಿಷ್ಠ ವೇತನ ಹಾಗೂ ಕಾನೂನುಗಳನ್ನು ರಚಿಸಿ ರಕ್ಷಣೆ ಒದಗಿಸಬೇಕು ಎಂದು ಕರ್ನಾಟಕ ಗೃಹಕಾರ್ಮಿಕರ ಚಳವಳಿಯ ಜಿಲ್ಲಾಧ್ಯಕ್ಷೆ ಲಲಿತಮ್ಮ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹಕಾರ್ಮಿಕರು ಮನೆಗಳ ನಿರ್ವಹಣೆ, ಮಕ್ಕಳ ಆರೈಕೆ, ವೃದ್ಧರ ಸೇವೆ ಸೇರಿದಂತೆ ಸಮಾಜದ ದೈನಂದಿನ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಆದಾಗ್ಯೂ ಅವರ ಉದ್ಯೋಗ, ವೇತನ ಹಾಗೂ ಸಾಮಾಜಿಕ ಭದ್ರತೆಗೆ ಸೂಕ್ತ ಕಾನೂನು ರಕ್ಷಣೆ ಇಲ್ಲದಿರುವುದು ವಿಷಾದನೀಯ ಎಂದು ಹೇಳಿದರು.

ನಿರಂತರ ಪ್ರಯತ್ನಗಳ ಫಲವಾಗಿ 2012ರಲ್ಲಿ ಅಖಿಲ ಕರ್ನಾಟಕ ಗೃಹಕಾರ್ಮಿಕರ ಟ್ರೇಡ್ ಯೂನಿಯನ್ ರಚಿಸಿ ನೊಂದಾಯಿಸಲಾಗಿದೆ. ರಾಜ್ಯದಲ್ಲಿ 20 ಸಾವಿರ ಸದಸ್ಯರನ್ನು ಹೊಂದಿದ್ದು, ಕಾನ್ಫಡರೇಶನ್ ಆಫ್ ಫ್ರೀ ಟ್ರೇಡ್ ಯೂನಿಯನ್ ಆಫ್ ಇಂಡಿಯಾದ ಜೊತೆಗೂಡಿ ರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ರೂಪಿಸಲಿದೆ. ಈ ನಿಟ್ಟಿನಲ್ಲಿ ಗೃಹ ಕಾರ್ಮಿಕರಿಗೆ ಜಾಗೃತಿ ಮೂಡಿಸಲು ಜೂ.26 ಮತ್ತು 27ರಂದು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ILO) 189ನೇ ಒಪ್ಪಂದವನ್ನು ಭಾರತ ಸರ್ಕಾರ ಅಂಗೀಕರಿಸಬೇಕು. ಕರ್ನಾಟಕ ಗೃಹಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ–2025 ಅನ್ನು ಶೀಘ್ರ ಜಾರಿಗೆ ತರಬೇಕು. ಗೃಹಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ನೆರವು, ಮಹಿಳಾ ಕಾರ್ಮಿಕರಿಗೆ ಕೌಶಲ್ಯಾಭಿವೃದ್ಧಿ ಅವಕಾಶಗಳು, ಆರೋಗ್ಯ ಸೇವೆ ಹಾಗೂ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳ ಸೌಲಭ್ಯಗಳನ್ನು ವಿಸ್ತರಿಸಬೇಕು. ಎಂದು ಒತ್ತಾಯಿಸಿದರು.

ಬೆಸಗರಹಳ್ಳಿ ರಾಮಣ್ಣರ ಕಥೆಗಳಲ್ಲಿ ಸಾಮಾಜಿಕ ನೈತಿಕತೆ, ಬದ್ಧತೆ ಇತ್ತು

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ಅವರು ಮಾನವೀಕರಣ ಹಾಗೂ ಪ್ರಜಾಪ್ರಭುತ್ವೀಕರಣದ ಕೇಂದ್ರ ಪ್ರಜ್ಞೆ ಇಟ್ಟುಕೊಂಡು ಕಥೆಗಳನ್ನು ರಚಿಸುತ್ತಿದ್ದರು. ಇವರ ಕಥೆಗಳಲ್ಲಿ ಸಾಮಾಜಿಕ ನೈತಿಕತೆ, ಬದ್ಧತೆ ಇತ್ತು ಎಂದು ಹಿರಿಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ವತಿಯಿಂದ 'ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ' ಪ್ರಶಸ್ತಿ ಪ್ರದಾನ ಹಾಗೂ 'ಕಕರುಡಿ ಉಗಾದಿ' ತೆಲುಗು ಅನುವಾದ ಕೃತಿ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಡಾ.ಬೆಸಗರಹಳ್ಳಿ ರಾಮಣ್ಣ ಅವರ ಕಥೆಗಳಲ್ಲಿ ಬಿರುಕು, ಬೆಸುಗೆ, ಹಳ್ಳಿ, ನಗರ, ಶೋಷಿತರು, ದಲಿತರು, ಸಂತ್ರಸ್ತರ ಪರವಾಗಿರುತ್ತಿದ್ದವು. ಮಾನವೀಕರಣ ಹಾಗೂ ಪ್ರಜಾಪ್ರಭುತ್ವೀಕರಣ ಕಥೆಗಳನ್ನು ನೀಡುತ್ತಿದ್ದರು. ಲೇಖಕನಿಗಿಂತ ಮನುಷ್ಯತ್ವ ಹೆಚ್ಚಿತ್ತು ಎಂದು ಶ್ಲಾಘಿಸಿದರು.

ಸಮಾರಂಭದಲ್ಲಿ ಸಾಹಿತಿ ರಘುನಾಥ್.ಚ.ಹ ಅವರ 'ಇಲ್ಲಿಂದ ಮುಂದೆಲ್ಲ ಕಥೆ' ಕೃತಿ ಕುರಿತಂತೆ ಪುಸ್ತಕ ಆಯ್ಕೆ ಸಮಿತಿಯ ಕನ್ನಡ ಪ್ರಾಧ್ಯಾಪಕ ಡಾ.ನಿತ್ಯಾನಂದ ಬಿ.ಶೆಟ್ಟಿ ಮಾತನಾಡಿದರು.



ಕಾರ್ಯಕ್ರಮ ಉದ್ಘಾಟಿಸುತ್ತಿರುವ ಹಿರಿಯ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ.

ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿಯನ್ನು ರಘುನಾಥ್.ಚ.ಹ ಅವರಿಗೆ ಪ್ರದಾನ ಮಾಡಲಾಯಿತು. 'ಕಕರುಡಿ ಉಗಾದಿ' ತೆಲುಗು ಅನುವಾದ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಹಿರಿಯ ಸ್ತ್ರೀವಾದಿ, ಲೇಖಕಿ ಡಾ.ಸಬಿಹಾ ಭೂಮಿಗೌಡ, ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್.ಸುಜಾತ, ಪ್ರತಿಷ್ಠಾನದ ಆಜೀವ ಸದಸ್ಯ ರಾಜಮ್ಮ, ಐಪಿಎಸ್ ಅಧಿಕಾರಿ ರವಿಕಾಂತೇಗೌಡ ಸೇರಿದಂತೆ ಮತ್ತಿತರರಿದ್ದರು.

ಕೆ.ಆರ್.ಪೇಟೆಯಲ್ಲಿ ರೈತರ ಪ್ರತಿಭಟನೆ



ಕೆ.ಆರ್.ಪೇಟೆ: ತಾಲೂಕಿನ ಹೇಮಗಿರಿ ಸಕ್ಕರೆ ಕಾರ್ಖಾನೆಯ ಸರ್ಕಾರವು ಘೋಷಣೆ ಮಾಡಿರುವ ಕಾರ್ಖಾನೆಯ ಪಾಲು ಪ್ರತಿ ಟನ್ ಕಬ್ಬಿಗೆ 50 ರೂ.ಗಳನ್ನು ತಕ್ಷಣ ರೈತರ ಖಾತೆಗೆ ಜಮಾ ಮಾಡಬೇಕು. ಈ ಸಂಬಂಧ ಕಾರ್ಖಾನೆಯವರು ನ್ಯಾಯಾಲಯದಲ್ಲಿ ತಂದಿರುವ ತಡೆಯಾಜ್ಞೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ತಾಲೂಕು ರೈತ ಸಂಘದ ಕಾರ್ಯಕರ್ತರು ಪಟ್ಟಣದ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಕಾರಿಗನಹಳ್ಳಿ ಪುಟ್ಟೇಗೌಡ, ಪ್ರಧಾನ ಕಾರ್ಯದರ್ಶಿ ಬೂಕನಕೆರೆ ನಾಗರಾಜು, ರಾಜ್ಯ ರೈತ ಸಂಘದ ಉಪಾಧ್ಯಕ್ಷ ಕೆ.ಆರ್.ಜಯರಾಂ, ಜಿಲ್ಲಾ ರೈತ ಸಂಘದ ಮಾಜಿ ಅಧ್ಯಕ್ಷ ಮುದುಗೆರೆ ರಾಜೇಗೌಡ ಮತ್ತಿತರರ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ರೈತರು ರೈತರಿಗೆ ನೀಡಬೇಕಾದ 50 ರೂ. ರೂಪಾಯಿಗಳ ಪ್ರೋತ್ಸಾಹ ಧನ ನೀಡಲು ಕೂಡಲೇ ಅಗತ್ಯ ಕ್ರಮ ವಹಿಸಬೇಕು. ನಂತರ ಪ್ರಸಕ್ತ ಸಾಲಿನ ಕಬ್ಬು ನುರಿಸಲು ಕಾರ್ಖಾನೆಯನ್ನು ಆರಂಭಿಸಬೇಕು. ಇಲ್ಲದಿದ್ದರೆ ಕಾರ್ಖಾನೆಯನ್ನು ಆರಂಭಿಸಿದರೆ ಕಾರ್ಖಾನೆಗೆ ನುಗ್ಗಿ ಕಬ್ಬು ಅರೆಯುವ ಕೆಲಸಕ್ಕೆ ಅಡ್ಡಿಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೂರನೇ ಪುಟದಿಂದ

ಇಬ್ಬರು ಸಜೀವ ದಹನ

ಸಿನಿಮಾ ನಟನ ಮಾಲೀಕತ್ವದ ಪಬ್...

ಮಾರಾ ರೆಸ್ಟೋಬಾರ್ ಮಾಲೀಕ ಪ್ರೀತಮ್ ಪುನೀತ್ ಅವರು 2016ರಲ್ಲಿ ತೆರೆಕಂಡ 'ಬ್ರಹ್ಮ ವಿಷ್ಣು ಮಹೇಶ್ವರ' ಕನ್ನಡ ಸಿನಿಮಾದಲ್ಲಿ ನಾಯಕ ನಟರಾಗಿ ಅಭಿನಯಿಸಿದ್ದಾರೆ. ಇಂದು ಇವರ ಈ ರೆಸ್ಟೋಬಾರ್‌ನಲ್ಲಿ ಯಾವುದೇ ಫುಡ್ ತೆಗೆದುಕೊಂಡರೂ 175 ರೂ. ಎಂದು ಆಫರ್ ಕೊಟ್ಟಿದ್ದ ಹಿನ್ನೆಲೆಯಲ್ಲಿ ಸೋಮವಾರ ಆದರೂ ಸಹ ಹೆಚ್ಚಿನ ಗ್ರಾಹಕರು ಇದ್ದರು ಎನ್ನಲಾಗಿದೆ.



ಹದಿನೈದು ಜನ ಕಿಟಕಿಯ ಮೂಲಕ ಹೊರಬಂದು ಜಿಗಿಯಲು ಯತ್ನಿಸಿದರು. ಈ ವೇಳೆ ಹತ್ತಿರದಲ್ಲಿ ಇದ್ದ ಶಾಮಿಯಾನ ಮಳಿಗೆಯಿಂದ ಶಾಮಿಯಾನ ತಂದು ಅದರ ಮೇಲೆ ಜಿಗಿಯಲು ಸಾಧ್ಯವೇ ಎಂದು ಪ್ರಯತ್ನಿಸಿದೆವು. ಅದು ಸಾಧ್ಯವಾಗಲಿಲ್ಲ. ನಂತರ ಅಗ್ನಿಶಾಮಕ ಸಿಬ್ಬಂದಿ ಬಂದು ರಕ್ಷಿಸಿದರು ಎಂದು ತಿಳಿಸಿದರು.

ರೆಸ್ಟೋಬಾರ್‌ನ ಫ್ಲೋರ್ ಮ್ಯಾನೇಜರ್ ಪ್ರಸಾದ್ ಮಾತನಾಡಿ, ಮಧ್ಯಾಹ್ನ 3.15ರ ವೇಳೆಗೆ ಸ್ಪಾರ್ಕ್ ಬಂತು. ಮೇಲ್ಛಾವಣಿಯಲ್ಲಿ ಹುಲ್ಲು ಹಾಗೂ ಬಟ್ಟೆಯ ಅಲಂಕಾರ ಇತ್ತು. ಹೀಗಾಗಿ ನೀರು ಹಾಕಿ ನಂದಿಸಲು ಮುಂದಾದರೂ ಬೆಂಕಿ ಹರಡಿತು. ಹಾಲ್‌ನಲ್ಲಿ ಸುಮಾರು 20 ಮಂದಿ ಗ್ರಾಹಕರು ಇದ್ದರು. ಅವರೆಲ್ಲರನ್ನೂ ಸುರಕ್ಷಿತವಾಗಿ ಹೊರ ಕಳುಹಿಸಲಾಯಿತು. ಕೆಲವರು ಹಿಂಭಾಗಕ್ಕೆ ಹೋದರು. ಅವರೇ ಸಿಕ್ಕಿಕೊಂಡಿದ್ದಾರೆ ಎಂದು ಅಗ್ನಿ ನಂದಿಸುವ ಕಾರ್ಯಾಚರಣೆ ವೇಳೆ ಅವರು ಹೇಳಿದರು.

ನಮ್ಮ ಪ್ರಧಾನ ವ್ಯವಸ್ಥಾಪಕ ಅವಿನಾಶ್ ಅವರಿಗೆ ತಲೆ ಹಾಗೂ ದೇಹಕ್ಕೆ ಸುಟ್ಟ ಗಾಯಗಳಾಗಿವೆ. ರೆಸ್ಟೋಬಾರ್ ಮಾಲೀಕ ಪ್ರೀತಿಮ್ ಪುನೀತ್ ಅವರಿಗೆ ಎರಡು ಕೈಗಳು ಹಾಗೂ ಎದೆ ಭಾಗಕ್ಕೆ ಸುಟ್ಟಗಾಯಗಳಾಗಿವೆ. ಇಬ್ಬರನ್ನು ಆಸ್ಪತ್ರೆಗೆ ದಾಖಲಿಸ ಲಾಗಿದೆ ಎಂದು ಅವರು ತಿಳಿಸಿದರು.

ಇಲ್ಲಿನ ಕಿಚನ್ ಸಿಬ್ಬಂದಿ ಅನಿಲ್‌ಕುಮಾರ್ ಮಾತನಾಡಿ, ನಾನು ಕಿಚನ್‌ನಲ್ಲಿದ್ದು, ಈಚೆ ಬಂದು ನೋಡಿದಾಗ ಸಣ್ಣ ದಾಗಿ ಬೆಂಕಿ ಉರಿಯುತ್ತಿತ್ತು. ಹುಲ್ಲು ಇದ್ದ ಹಿನ್ನೆಲೆಯಲ್ಲಿ ಬೆಂಕಿ ವೇಗ ವಾಗಿ ವ್ಯಾಪಿಸಿತು. ಆಗ ಗ್ರಾಹಕರು ಓಡಿ ಹೋಗಲು ಶುರು ಮಾಡಿ ದ್ದರು. ಮೊದಲು ಅವರನ್ನು ಹೊರ ಕಳುಹಿಸಲಾಯಿತು. ಅಗ್ನಿ ಸುರ ಕ್ಷತಾ ಉಪಕರಣ ಬಳಸಲು ಪ್ರಯತ್ನಿಸಿದರೂ ಬೆಂಕಿ ಕೆನ್ನಾಲಿಗೆ ಭಾರೀ ಪ್ರಮಾಣದಲ್ಲಿ ವ್ಯಾಪಿಸಿ ಬೆಂಕಿಯುಂಡೆಗಳು ಮೈ ಮೇಲೆಯೇ ಬೀಳಲು ಶುರುವಾದ ಕಾರಣ ಅದು ಸಾಧ್ಯವಾಗಲಿಲ್ಲ ಎಂದು ನೋವು ವ್ಯಕ್ತಪಡಿಸಿದರು.

ಸಣ್ಣ ಸುಟ್ಟ ಗಾಯವಾಗಿದ್ದ ಗ್ರಾಹಕರೊಬ್ಬರು ಮಾತನಾಡಿ, ಆಫರ್ ಇತ್ತು. ಇಲ್ಲಿ ಫುಡ್ ತುಂಬ ಚೆನ್ನಾಗಿದೆ ಎಂದು ಹೇಳುತ್ತಿದ್ದನ್ನು ಕೇಳಿ ಇಂದು ಇಲ್ಲಿಗೆ ಭೇಟಿ ನೀಡಿದ್ದೆವು. ಈ ದುರ್ಘಟನೆ ನಡೆಯುವವರೆಗೆ ಒಳ್ಳೆಯ ಥೀಮ್ ಇತ್ತು, ಖುಷಿಯಾಗಿತ್ತು. ಆದರೆ, ಕೆಲವೇ ಕ್ಷಣದಲ್ಲಿ ದುರಂತ ನಡೆದು ಹೋಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಬಾರ್ ಅಂಡ್ ರೆಸ್ಟೋರೆಂಟ್‌ಗಳ ಪೈಕಿ ಬಹುತೇಕವುಗಳಲ್ಲಿ ಅಗ್ನಿ ಸುರಕ್ಷತಾ ಉಪಕರಣಗಳನ್ನು ಇಟ್ಟುಕೊಳ್ಳುತ್ತಿಲ್ಲ. ಅದೇ ರೀತಿ ಇಲ್ಲಿಯೂ ಸಮರ್ಪಕವಾದ ಉಪಕರಣಗಳು ಇರಲಿಲ್ಲ. ಇಲ್ಲಿ ಅಂತಹ ಸುರಕ್ಷತೆಗೆ ಕ್ರಮ ವಹಿಸಿದ್ದರೆ ಇಂತಹ ದುರಂತ ಎದುರಾಗುತ್ತಿರಲಿಲ್ಲ. ಮೈಸೂರಿನ ಹಲವು ಕಡೆ ಮೋಜು–ಮಸ್ತಿಗೆ ಇಂತಹ ತಾಣಗಳು ತಲೆ ಎತ್ತಿವೆ. ಅಲಂಕಾರಕ್ಕೊ, ಆಕರ್ಷಣೆಗೋ ಬಿದಿರು ಬಂಬು, ಬೆತ್ತದ ಬಂಬುಗಳನ್ನು ಅಳವಡಿಸಿ ಕುಟೀರ ಇಲ್ಲವೇ ವಿದೇಶಿ ಶೆಡ್ ಮಾದರಿ ನಿರ್ಮಾಣಗಳ ಮಾಡಲಾಗುತ್ತದೆ. ಇವುಗಳ ಉದ್ದೇಶ ನಮ್ಮದು ವಿಶೇಷವೆಂದು ತೋರಿಸಿ ಗ್ರಾಹಕರಿಗೆ ಗಾಳ ಹಾಕುವುದಷ್ಟೇ! ಆದರೆ, ಮೈಸೂರಲ್ಲಿ ಅಗ್ನಿಶಾಮಕ ಇಲಾಖೆ, ಪೊಲೀಸ್ ಇಲಾಖೆ, ನಗರ ಪಾಲಿಕೆ, ಅಬಕಾರಿ ಇಲಾಖೆ ಇನ್ನು ಎಚ್ಚೆತ್ತು ಕೊಂಡಿಲ್ಲ. ಹಾಗಾಗಿ ಅಮಾಯಕರು, ಹೊಟ್ಟೆಪಾಡಿಗೆ ದುಡಿಯಲು ಬಂದವರು ಹೆಣ ವಾಗುತ್ತಿದ್ದಾರೆ. ಘಟನೆ ಸಂಭವಿಸಿದಾಗ, ಅಧಿಕಾರಿಶಾಹಿ ವರ್ಗ ಮನುಷ್ಯತ್ವದ ಪೋಸು ನೀಡುವುದಕ್ಕಿಂತಲೂ ಮುನ್ನಚ್ಚರಿಕೆ ವಹಿಸಿದ್ದರೆ ಅಮೂಲ್ಯ ಜೀವ ಉಳಿಯುತ್ತಿದ್ದವು.




ಘಟನೆ ನಡೆದ ಸ್ಥಳದಲ್ಲಿ ನೆರೆದಿದ್ದ ಜನರ ಆತಂಕ.

ಮೈಸೂರು ವಲಯದ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಸಿ.ಆರ್.ರಂಗನಾಥ್ ನೇತೃತ್ವದಲ್ಲಿ ಬೆಂಕಿ ನಂದಿಸುವ ಹಾಗೂ ರಕ್ಷಣೆ ಕಾರ್ಯಾಚರಣೆ ನಡೆಯಿತು. ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳಾದ ಕೆ.ಸಿ. ರಮೇಶ್, ಕೆ.ಪಿ.ಗುರುರಾಜ್, ಕೆ.ಜಿ.ರಾಜೇಶ್, ಸಂದೀಪ್ ಬರಸಗಿ, ಅಗ್ನಿಶಾಮಕ ಠಾಣಾಧಿಕಾರಿಗಳು ಎಂ.ಎಸ್.ನಿಜ ಗುಣ, ಲಕ್ಷ್ಮಿಕಾಂತ ಯಾದವ್ ಸೇರಿದಂತೆ ಸುಮಾರು 35 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಐದು ಅಗ್ನಿ ನಂದಿಸುವ ವಾಹನ ಗಳು ಸೇರಿದಂತೆ ಅಗತ್ಯ ರಕ್ಷಣಾ ಪರಿಕರಗಳೊಂದಿಗೆ ಕಾರ್ಯಾಚರಣೆ ನಡೆಸಲಾಯಿತು. ಸ್ಥಳಕ್ಕೆ ಶಾಸಕ ಜಿ.ಟಿ.ದೇವೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಡಿಸಿಪಿ ಗಳಾದ ಹರ್ಷಾ ಪ್ರಿಯಂವದ, ಕೆ.ಎಸ್. ಸುಂದರ್ ರಾಜ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಭೇಟಿ ನೀಡಿ ಪರಿಶೀಲಿಸಿದರು. ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳಕ್ಕೆ ಶಾಸಕ ಜಿ.ಟಿ.ದೇವೇಗೌಡರು ಭೇಟಿ ; ಮೃತರ ಕುಟುಂಬಕ್ಕೆ ತಲಾ ಐದು ಲಕ್ಷ ಪರಿಹಾರ ನೀಡುವಂತೆ ಸರ್ಕಾರಕ್ಕೆ ಒತ್ತಾಯ

ಮೈಸೂರು,ಜೂ.15(ಪಿಎಂ)– ಸ್ಥಳಕ್ಕೆ ಭೇಟಿ ನೀಡಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಪರಿಶೀಲಿಸಿದರಲ್ಲದೆ, ಸ್ಥಳದಲ್ಲೇ ಮುಖ್ಯಮಂತ್ರಿಗಳ ಪಿಎಸ್ ಅವರಿಗೆ ದೂರವಾಣಿ ಕರೆ ಮಾಡಿ, ಕೂಡಲೇ ಸರ್ಕಾರದಿಂದ ಮೃತಪಟ್ಟಿರುವ ಇಬ್ಬರ ಕುಟುಂಬದವರಿಗೆ ತಲಾ ಐದು ಲಕ್ಷ ಪರಿಹಾರವನ್ನು ಸರ್ಕಾರದಿಂದ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಕೋರುತ್ತಿರುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದಟ್ಟಗಳ್ಳಿಯ ಈ ಪ್ರದೇಶವು ನನ್ನ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರಲಿದ್ದು, ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಅವಘಡ ಸಂಭವಿಸಿ ಇಬ್ಬರು ಸಾವನ್ನಪಿರುವುದು ದುಃಖದ ಸಂಗತಿ. ಇನ್ನು 6 ಮಂದಿಗೆ ಸಣ್ಣಪುಟ್ಟ ಸುಟ್ಟ ಗಾಯಗಳಾಗಿವೆ. ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರ ತಲಾ ಐದು ಲಕ್ಷ ರೂ. ಪರಿಹಾರ ಘೋಷಣೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮೃತರ ಕುಟುಂಬ ದವರಿಗೆ ವಿಷಯ ತಿಳಿಸಿ ಅಂತ್ಯ ಸಂಸ್ಕಾರಕ್ಕೆ ವ್ಯವಸ್ಥೆ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಮೃತರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಆ ದೇವರು ನೀಡಲೆಂದು ಪ್ರಾರ್ಥಿಸುವುದಾಗಿ ಅವರು ಹೇಳಿದರು.



ಸ್ಥಳಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಭೇಟಿ ನೀಡಿದ್ದರು.

ಪ್ರವಾಸಿಗ ಸಾವು

ಅವರನ್ನು ಪರೀಕ್ಷಿಸಿದ ವೈದ್ಯರು ಅದಾಗಲೇ ಮೃತಪಟ್ಟಿರುವುದನ್ನು ದೃಢಪಡಿಸಿದರು. ವಿರಾಜಪೇಟೆ ಗ್ರಾಮಾಂತರ ಠಾಣಾಧಿಕಾರಿ ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ಬಳಿಕ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತದೇಹವನ್ನು ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದೆ. ನೀರಿಗೆ ಇಳಿಯುತ್ತಿದ್ದಂತೆ ಹೃದಯಾಘಾತ ಆಗಿರುವ ಸಾಧ್ಯತೆಯಿದೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಪ್ರವಾಸಿಯ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ.

ಮತದಾರರಿಗೆ ಮಾತ್ರವೇ ಗ್ಯಾರಂಟಿಗಳು!

ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಿವೆ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಇತರೆ ರಾಜ್ಯಗಳು ಅನುಸರಿಸಿವೆ. ಕೆಲವರು ಗೃಹಲಕ್ಷ್ಮಿ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಬೆಳಗಾವಿಯ ಪ್ರಕರಣ ಸಾಕ್ಷಿಯಾಗಿದೆ. ಗ್ರಾಮ ಪಂಚಾಯತ್‌ನಿಂದ ತಾಲೂಕು ಪಂಚಾಯತ್‌ವರೆಗೆ ಇಂತಹ ಸ್ಕೀಂಗಳಿವೆ ಕಡಿವಾಣ ಹಾಕಲು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಹೆಣ್ಣು ಕುಟುಂಬದ ಕಣ್ಣು, ಅವರಿಗೆ ಆರ್ಥಿಕ ಶಕ್ತಿ ಸಿಗಬೇಕು. ಅವರ ಮನೆಗಳು ಬೆಳಗಬೇಕು ಎಂಬುದು ಉದ್ದೇಶವಾಗಿದೆ, ವಿರೋಧ ಪಕ್ಷಗಳು ಮಾತನಾಡುತ್ತಿರಲಿ.

ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ ಸರ್ಕಾರ ಒಂದು ಸಾವಿರ ಎಕರೆ ಸ್ವಾಧೀನ ಪಡಿಸಿಕೊಂಡಾಗ ಏಕೆ ಸುಮ್ಮನಿದ್ದರು, ನಾನು ಯಾರ್‍ಯಾರೋ ಮಾತಿಗೆ ಉತ್ತರ ನೀಡಲು ಆಗುವುದಿಲ್ಲ. ಮಹಾರಾಷ್ಟ್ರದಲ್ಲಿ 90 ಸಾವಿರ ಎಕರೆ, ತೆಲಂಗಾಣದಲ್ಲಿ 40 ಸಾವಿರ ಎಕರೆಯಲ್ಲಿ ಟೌನ್‌ಶಿಪ್ ಮಾಡುತ್ತಿದ್ದಾರೆ, ಬಿಡದಿಯದು ನನ್ನ ಯೋಜನೆಯಲ್ಲ, ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಯೋಜನೆಗೆ ಅಧಿಸೂಚನೆ ಹೊರಡಿಸಿದ್ದರು. ಹಿಂದಿನ ಬಿಜೆಪಿ ಸರ್ಕಾರ ಈ ಜಾಗದಲ್ಲಿ ಒಂದು ಸಾವಿರ ಎಕರೆಯನ್ನು ಕೆಐಎಡಿಬಿ ಸ್ವಾಧೀನಕ್ಕೆ ಕೊಟ್ಟಾಗ ಏಕೆ ಸುಮ್ಮನಿದ್ದರು. ಹಾರೋಹಳ್ಳಿ ಕೈಗಾರಿಕಾ ಪ್ರದೇಶ ಮಾಡಿದ್ದು ಯಾರು, ಆಗ ರೈತರನ್ನು ಕಳುಹಿಸಲಿಲ್ಲವೇ, ಇಲ್ಲಿ ರೈತರು ಜಮೀನು ನೀಡಲು ಮುಂದಾಗಿದ್ದಾರೆ. ಆದರೆ, ಇವರಿಗೆ ರಾಜಕಾರಣ ಮಾಡಬೇಕು, ಮಾಡುತ್ತಿದ್ದಾರೆ ಎಂದರು.

ಶಾಸಕ ಇಕ್ಬಾಲ್ ಹುಸೇನ್‌ಗೆ ಅಗತ್ಯ ಚಿಕಿತ್ಸೆ: ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಎದೆ ನೋವು ಕಾಣಿಸಿಕೊಂಡು ಆಸ್ಪತ್ರೆ ಸೇರಿದ್ದಾರೆ. ವೈದ್ಯರು ಪರಿಶೀಲನೆ ಮಾಡುತ್ತಿದ್ದಾರೆ. ಅವರು ಆರೋಗ್ಯವಾಗಿದ್ದು, ಗಾಬರಿಯಾಗುವ ಅವಶ್ಯಕತೆ ಇಲ್ಲ. ಸಂಪೂರ್ಣ ಪರೀಕ್ಷೆಗೆ ವೈದ್ಯರೊಂದಿಗೆ ಚರ್ಚಿಸಿದ್ದೇವೆ. ಎಡಗೈ ಸೆಳೆತ ಬಂದಿದ್ದು, ಮುನ್ನೆಚ್ಚರಿಕೆಯಾಗಿ ಆಸ್ಪತ್ರೆ ಸೇರಿದ್ದಾರೆ, ಅವರ ಆರೋಗ್ಯ ಸುಧಾರಣೆಗೆ ಅಗತ್ಯ ಚಿಕಿತ್ಸೆಯನ್ನ ವೈದ್ಯರು ಮಾಡುತ್ತಾರೆ ಎಂದರು.

ಆರ್‌ಎಸ್‌ಎಸ್ ಲೆಕ್ಕ–ಪತ್ರ ಕೊಡಿ...!

ಉಲ್ಲೇಖ ಮಾಡಿದ್ದಾರೆ ನಾಗರಿಕರು, ಕಾರ್ಮಿಕರು, ಎನ್‌ಜಿಒಗಳು, ಟ್ರಸ್ಟ್‌ಗಳು, ದೇವಾಲಯಗಳು ಮತ್ತು ಕಂಪನಿಗಳು ನೋಂದಾಯಿಸಲು, ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ಕಾನೂನನ್ನು ಅನುಸರಿಸಲು ಬಯಸುತ್ತಿವೆ ಆದರೆ, ಆರ್‌ಎಸ್‌ಎಸ್‌ಗೆ ಏಕೆ ವಿನಾಯಿತಿ ನೀಡಬೇಕು ಎಂದು ಪ್ರಶ್ನಿಸಿದ್ದಾರೆ.

ಆರ್‌ಎಸ್‌ಎಸ್‌ನ ಸಾರ್ವಜನಿಕ ಒಗ್ಗೂಡುವಿಕೆ ಕೂಡ ಅಷ್ಟೇ ವಿಸ್ತಾರವಾಗಿದೆ. ನಿಮ್ಮ ವರದಿಯ ಪ್ರಕಾರ, ಸಂಘಟನೆಯು 2,194 ಸಮಾಜೋತ್ಸವಗಳನ್ನು ನಡೆಸಿದ್ದು, ಇದರಲ್ಲಿ 19,61,158 ಮಂದಿ ಭಾಗವಹಿಸಿದ್ದಾರೆ. ರಾಜ್ಯಾದ್ಯಂತ ನೀವು 562 ಪಥಸಂಚಲನಗಳನ್ನು ಆಯೋಜಿಸಿದ್ದೀರಿ, ಇವು ಸಾಮಾನ್ಯವಾಗಿ 2.5ರಿಂದ 3 ಕಿ.ಮೀ.ವರೆಗೆ ನಡೆದಿದ್ದು, 2,21,963 ಸಮವಸ್ತ್ರಧಾರಿ ಸ್ವಯಂಸೇವಕರು ಪಾಲ್ಗೊಂಡಿದ್ದರು ಎಂದು ಹೇಳಿಕೊಂಡಿದ್ದೀರಿ.

ಇವೆಲ್ಲವನ್ನೂ ಒಟ್ಟಾಗಿ ನೋಡಿದಾಗ, ಕರ್ನಾಟಕದಾದ್ಯಂತ ದೈನಂದಿನ, ಸಾಪ್ತಾಹಿಕ ಮತ್ತು ಮಾಸಿಕ ಸಂಪರ್ಕಗಳು, ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳು ಹಾಗೂ ಸಮವಸ್ತ್ರಧಾರಿ ಪಥಸಂಚಲನಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ, ಶಿಸ್ತುಬದ್ಧ ಹಾಗೂ ಆಳವಾಗಿ ಬೇರೂರಿರುವ ಬೃಹತ್ ನೆಟ್‌ವರ್ಕ್ ಇದಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇಷ್ಟೊಂದು ವಿಸ್ತಾರವಾದ ಸಾಂಸ್ಥಿಕ ಅಸ್ತಿತ್ವವನ್ನು ಹೊಂದಿರುವಾಗ, ವಿಶೇಷವಾಗಿ ನಿಯಮಿತವಾದ ಸಾರ್ವಜನಿಕ ಒಗ್ಗೂಡುವಿಕೆ, ಸಮವಸ್ತ್ರಧಾರಿ ಪಥಸಂಚಲನಗಳು ಮತ್ತು ದೊಡ್ಡ–ಮಟ್ಟದ ಸಾಮಾಜಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವಾಗ, ಇದನ್ನು ಕೇವಲ ಒಂದು ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ಸಂಘಟನೆಯ ಕಾನೂನುಬದ್ಧ ಸ್ಥಾನಮಾನ, ಹೊಣೆಗಾರಿಕೆ, ಆರ್ಥಿಕ ಪಾರದರ್ಶಕತೆ, ಸಾರ್ವಜನಿಕ ಸುವ್ಯವಸ್ಥೆ, ಅನುಮತಿಗಳು, ಹಣಕಾಸಿನ ಮೂಲಗಳು ಮತ್ತು ಭಾರತದ ಸಂವಿಧಾನ ಹಾಗೂ ಕಾನೂನುಗಳ ಪಾಲನೆಯ ಕುರಿತು ನ್ಯಾಯಸಮ್ಮತವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದಿದ್ದಾರೆ.

ಆದ್ದರಿಂದ, ಇಷ್ಟೊಂದು ಬೃಹತ್ ಗಾತ್ರದ ಸಂಘಟನೆಯು ಅನ್ವಯವಾಗುವ ಕಾನೂನುಗಳ ಅಡಿಯಲ್ಲಿ ಅಧಿಕೃತವಾಗಿ ಕಾನೂನುಬದ್ಧ ಘಟಕವಾಗಿ ಅಥವಾ ವ್ಯಕ್ತಿಗಳ ಸಂಸ್ಥೆಯಾಗಿ ನೋಂದಾಯಿಸಿಕೊಳ್ಳದೆ, ಅನಾಮಧೇಯವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತಿರುವ ಹಿಂದಿನ 'ಕಾನೂನು ಆಧಾರಗಳನ್ನು' ವಿವರಿಸಲು ನಿಮ್ಮ ಅಧಿಕೃತ ಪದಾಧಿಕಾರಿಗಳನ್ನು ನಿಯೋಜಿಸುವಂತೆ ನಾವು ಆರ್‌ಎಸ್‌ಎಸ್ ಅನ್ನು ಕೋರುತ್ತೇವೆ ಎಂದು ಬರೆದಿದ್ದಾರೆ.

ನಂತರವೂ ಮುಂದುವರೆಯುತ್ತವೆ

ಗ್ಯಾರಂಟಿ ಯೋಜನೆಗಳನ್ನು ಮೊದಲ ದಿನದಿಂದಲೂ ವಿರೋಧಿಸುತ್ತಾ ಬಂದಿದೆ, ಗ್ಯಾರಂಟಿ ಯೋಜನೆಗಳ ಜಾರಿಯೇ ಅಸಾಧ್ಯ ಎಂದಿದ್ದರು. ನಂತರ ಹಣಕಾಸಿನ ಕೊರತೆಯಿಂದ ಸರ್ಕಾರ ದಿವಾಳಿಯಾಗಲಿದೆ, ಯೋಜನೆಗಳನ್ನು ನಿಲ್ಲಿಸಲಾಗುತ್ತದೆ ಎಂಬ ಪುಕಾರು ಹಬ್ಬಿಸುತ್ತಿದ್ದಾರೆ. ಇದು ಅವರ ರಾಜಕೀಯ ಹತಾಶೆಯ ಪ್ರತೀಕ. ಮುಖ್ಯಮಂತ್ರಿಯಾಗಿ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದಲ್ಲದೆ, ರಾಜ್ಯದ ಆರ್ಥಿಕತೆ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಲಾಗಿದೆ, ಕರ್ನಾಟಕ ತಲಾವಾರು ಆದಾಯದಲ್ಲಿ ದೇಶಕ್ಕೇ ಮೊದಲನೇ ಸ್ಥಾನದಲ್ಲಿದೆ, ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ನಂತರದ ಎರಡನೇ ರಾಜ್ಯ ಕರ್ನಾಟಕ, ಖಜಾನೆ ಖಾಲಿಯಾಗಿದ್ದರೆ, ಸರ್ಕಾರ ದಿವಾಳಿ ಸ್ಥಿತಿಯಲ್ಲಿದ್ದರೆ ಈ ಸಾಧನೆ ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುತ್ತಿರುವ ಬಿಜೆಪಿ, ಮಧ್ಯಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ನಮ್ಮ ನಕಲು ಮಾಡಿ ಅಧಿಕಾರಕ್ಕೆ ಬಂದಿದೆ. ಇವರಿಗೆ ವಿರೋಧಿಸುವ ನೈತಿಕತೆ ಇಲ್ಲ. ಕೆಲವು ರಾಜ್ಯಗಳ ವಿಧಾನಸಭಾ ಚುನಾವಣಾ ಪೂರ್ವದಲ್ಲಿ ಬಿಜೆಪಿ ಗ್ಯಾರಂಟಿ ಯೋಜನೆಗಳ ಆಶ್ವಾಸನೆ ನೀಡಿದರೂ, ಸಂಪೂರ್ಣ ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ. ಯೋಜನೆಗಳು ಅರ್ಹರಿಗೆ ಸಿಗಬೇಕು. ಅನರ್ಹರ ಪಾಲಾಗುವುದನ್ನು ತಡೆಗಟ್ಟುವುದು ಚುನಾಯಿತ ಸರ್ಕಾರದ ಕರ್ತವ್ಯ. ಜನರು ದುರಾಸೆಗೆ ಬಲಿ ಬಿದ್ದು ಸರ್ಕಾರಕ್ಕೆ ಮೋಸ ಮಾಡಿ ಗ್ಯಾರಂಟಿ ಯೋಜನೆಗಳ ಲಾಭ ಪಡೆಯುವುದು ಕಾನೂನು ಉಲ್ಲಂಘನೆ ಅಲ್ಲದೆ, ರಾಜ್ಯದ ಜನತೆಗೆ ಬಗೆಯುವ ದ್ರೋಹವಾಗಿದೆ. ವಿರೋಧ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಅಪಪ್ರಚಾರ ಮಾಡದೆ, ಅರ್ಹರಿಗೆ ಯೋಜನೆಗಳನ್ನು ತಲುಪಿಸಲು ಸರ್ಕಾರಕ್ಕೆ ನೆರವಾಗಬೇಕು ಎಂದು ಟ್ವೀಟ್ ಮಾಡಿದ್ದಾರೆ.

ಅಭಿನಂದನೆ..



ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ಮಾಜಿ ಸಚಿವ ದಿವಂಗತ ಟಿ.ಎನ್. ನರಸಿಂಹಮೂರ್ತಿ ಅವರ ಮೊಮ್ಮಗ ಎಂ. ಪ್ರಫುಲ್‌ಕುಮಾರ್ ಅವರು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಇವರು ಮಾಜಿ ಎಂಎಲ್‌ಸಿ ದಿವಂಗತ ಎನ್. ಮಂಜುನಾಥ್ ಅವರ ಪುತ್ರ.

ಮೈಸೂರು ಮಿತ್ರ

ಮಂಗಳವಾರ 16 ಜೂನ್ 2026

ಸೈಕ್ಲೋಥಾನ್, ಚಿತ್ರಕಲಾ ಸ್ಪರ್ಧೆ



ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಬಿಎಐ ಮೈಸೂರು ಕೇಂದ್ರ, ಸ್ಫೂರ್ತಿ ಸಂಸ್ಥೆ ವತಿಯಿಂದ 'ಸೈಕ್ಲೋಥಾನ್–2026' ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು.

ಮೈಸೂರು, ಜೂ.15(ಎಂಕೆ)– ವಿಶ್ವ ಪರಿಸರ ಮಾಸಾಚರಣೆ ಅಂಗವಾಗಿ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ(ಬಿಎಐ) ಮೈಸೂರು ಕೇಂದ್ರ ಮತ್ತು ಸ್ಫೂರ್ತಿ ಸಂಸ್ಥೆ ವತಿಯಿಂದ ರಾಯಲ್ ರೈಡರ್ಸ್ ಮೈಸೂರು, ಮೈಸೂರು ಅಥ್ಲೆಟಿಕ್ ಕ್ಲಬ್, ಮೈಸೂರು ಸೈಕ್ಲಿಂಗ್ ಟೀಂ, ಸೈಕ್ಲೋಪೀಡಿಯಾ, ವೈಐ ಮೈಸೂರು ಸಹಯೋಗದೊಂದಿಗೆ ಭಾನುವಾರ 'ಸೈಕ್ಲೋಥಾನ್–2026' ಹಾಗೂ 'ಚಿತ್ರಕಲಾ ಸ್ಪರ್ಧೆ' ಏರ್ಪಡಿಸಲಾಗಿತ್ತು.

'ನಿಮ್ಮ ಗೃಹಕ್ಕಾಗಿ ಸವಾರಿ ಮಾಡಿ–ನಿಮ್ಮ ಆರೋಗ್ಯಕ್ಕಾಗಿ ಸವಾರಿ ಮಾಡಿ–ನಿಮ್ಮ ಭವಿಷ್ಯಕ್ಕಾಗಿ ಸವಾರಿ ಮಾಡಿ ಶೀರ್ಷಿಕೆಯಡಿ ನಡೆದ 25, 50 ಮತ್ತು 100 ಕಿ.ಮೀ. ದೂರದ ಸೈಕ್ಲೋಥಾನ್ ನಲ್ಲಿ 141ಕ್ಕೂ ಹೆಚ್ಚು ಮಂದಿ ಸೈಕ್ಲಿಸ್ಟ್‌ಗಳು ಭಾಗವಹಿಸಿ ಆರೋಗ್ಯ ಸಂದೇಶ ರವಾನಿಸಿದರು.

ಮೈಸೂರಿನ ಗೋಕುಲಂನ ಸೈಕ್ಲೋಪೀಡಿಯಾದಿಂದ ಸೈಕ್ಲೋಥಾನ್, 25 ಕಿ.ಮೀ ವಿಭಾಗದಲ್ಲಿ ಕೆಆರ್‌ಎಸ್‌ವರೆಗೆ, 50 ಕಿ.ಮೀ ವಿಭಾಗದಲ್ಲಿ ಮಂಡ್ಯ ಜಿಲ್ಲೆಯ ಬನವಾಡಿ ಹಾಗೂ 100 ಕಿ.ಮೀ ವಿಭಾಗದಲ್ಲಿ ಮಂಡ್ಯದ ಸೋಮನಹಳ್ಳಿಯವರೆಗೆ ಸಾಗಿ ಅಲ್ಲಿಂದ ವಾಪಸ್ ಸೈಕ್ಲೋಪೀಡಿಯಾಗೆ ಬಂದು ತಲುಪಿತು. ಇದಕ್ಕೂ ಮುನ್ನ ಬಿಎಐ ಅಧ್ಯಕ್ಷ ಕೆ.ಆರ್.ಪ್ರಭಾಕರರಾವ್ ಸೈಕ್ಲೋಥಾನ್‌ಗೆ ಚಾಲನೆ ನೀಡಿದರು. ಪರಿಸರ ಮಾಸಾಚರಣೆ ಅಧ್ಯಕ್ಷ ಸಿ.ಡಿ. ಕೃಷ್ಣ, ಕಾರ್ಯದರ್ಶಿ ಎಸ್.ವಾಸುದೇವ್, ಬಿಎಐ ಮೈಸೂರು ಕೇಂದ್ರದ ಕಾರ್ಯದರ್ಶಿ ಪ್ರವೀಣ್‌ಪಾದ್, ಜಂಟಿ ಕಾರ್ಯದರ್ಶಿ ಜಿ.ಅಶೋಕ್, ಸ್ಫೂರ್ತಿ ಸಂಸ್ಥೆ ಕಾರ್ಯದರ್ಶಿ ವೀಣಾ ಅಶೋಕ್ ಮತ್ತಿತರರಿದ್ದರು.

ಚಿತ್ರಕಲಾ ಸ್ಪರ್ಧೆ...

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ(ಬಿಎಐ) ಮೈಸೂರು ಕೇಂದ್ರದ ಎಂಬಿಸಿಟಿ ಸಭಾಂಗಣದಲ್ಲಿ ಪರಿಸರ ಸಂರಕ್ಷಣೆ ಕುರಿತು ಚಿತ್ರಕಲಾ ಸ್ಪರ್ಧೆ ನಡೆಸಲಾಯಿತು. 3 ಮತ್ತು 4ನೇ ತರಗತಿ, 5, 6 ಮತ್ತು 7ನೇ ತರಗತಿ ಹಾಗೂ 8, 9 ಮತ್ತು 10ನೇ ತರಗತಿ ವಿಭಾಗದಲ್ಲಿ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ವಿವಿಧ ಶಾಲೆಯ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ಪರಿಸರ ಸಂರಕ್ಷಣೆ ಕುರಿತು ಚಿತ್ರಸಹಿತ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಬಳಿಕ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ವಿಜೇತ ಪ್ರಮಾಣ ಪತ್ರ, ಪದಕ ನೀಡಿ ಅಭಿನಂದಿಸಲಾಯಿತು.

ಉಚಿತ ಕಣ್ಣಿನ ತಪಾಸಣೆ; ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಜೂ. 15– ಆರೋಗ್ಯ ಭಾರತಿ, ಮೈಸೂರು ಮತ್ತು ಮಣಿಪಾಲ್ ಆಸ್ಪತ್ರೆ ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಮತ್ತು ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್. ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರವನ್ನು ಜೂ. 18ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ 136, ಎರಡನೇ ಮುಖ್ಯ ರಸ್ತೆ, 11ನೇ ಅಡ್ಡ ರಸ್ತೆ, ಜಯನಗರ ಇಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೂಕೋಮಾ, ವಾರೆಗಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ರಾತ್ರಿ ಕುರುಡುತನ ಸಮಸ್ಯೆಗಳನ್ನು ಪರೀಕ್ಷಿಸಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9945270646, 9742634110 ಸಂಪರ್ಕಿಸಬಹುದು.

ಪ್ರಾತಃಸ್ಮರಣೀಯರಾದ ಮೈಸೂರು ಒಡೆಯರ ಅಂಚೆ ಕಾರ್ಡ್ ಮೂಲಕ ದೇಶಕ್ಕೆ ಪರಿಚಯಿಸುವ ಭಾರತೀಯ ಅಂಚೆ ಇಲಾಖೆ ಸ್ತುತ್ಯಾರ್ಹ ಕಾರ್ಯ



ಮೈಸೂರು,ಜೂ.15(ಬಿಸಿಟಿ, ಎಂಕೆ)– ಆಧುನಿಕ ಮೈಸೂರು ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡಿರುವ ಮೈಸೂರು ಒಡೆಯರ್ ಮನೆತನವನ್ನು ಸ್ಮರಿಸಿ, ಗೌರವಿಸುವ ನಿಟ್ಟಿನಲ್ಲಿ ಭಾರತೀಯ ಅಂಚೆ ಹಾಗೂ ಕರ್ನಾಟಕ ಅಂಚೆ ಚೀಟಿ ಸಂಗ್ರಹಣಾ ಸಂಘದ ವತಿಯಿಂದ 'ಒಡೆಯರ್ ಪೋಸ್ಟ್ ಕಾರ್ಡ್' ಬಿಡುಗಡೆ ಮಾಡಲಾಗಿದೆ.

ನಾಡ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಸಹಿತ ಮೈಸೂರು ಅರಮನೆ ಸೇರಿದಂತೆ ಮೈಸೂರು ಒಡೆಯರ್ ಸಂಸ್ಥಾನದ ಐವರು ಮಹಾನ್ ವ್ಯಕ್ತಿಗಳ ಭಾವಚಿತ್ರವನ್ನು ಅತ್ಯಾಕರ್ಷಕವಾಗಿ ವಿನ್ಯಾಸಗೊಳಿಸಲಾಗಿದೆ. ಕಲಾವಿದ ಪೃಥ್ವಿ ಪ್ರಭು, ಸಾಂಸ್ಕೃತಿಕ ನಗರಿ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ನಿಟ್ಟಿನಲ್ಲಿ ಪೋಸ್ಟ್ ವಿನ್ಯಾಸಗೊಳಿಸಿದ್ದು ಇದೇ ಮೊದಲ ಬಾರಿಗೆ ಅಂಚೆ ಇಲಾಖೆ ಒಡೆಯರ್ ಸಂಸ್ಥಾನ ಕೊಡುಗೆಯನ್ನು ಸ್ಮರಿಸಿ ಪೋಸ್ಟ್ ಕಾರ್ಡ್ ಬಿಡುಗಡೆ ಮಾಡಿದೆ.

ಪೋಸ್ಟ್‌ಕಾರ್ಡ್ ಬಿಡುಗಡೆ ಮಾಡುವ ಮೂಲಕ ಮೈಸೂರಿನ ಕಲೆ, ಸಂಗೀತ ಮತ್ತು ಸಾಹಿತ್ಯ ಹಾಗೂ ಶೈಕ್ಷಣಿಕ ಪರಂಪರೆ ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಆಧುನಿಕ ಮೈಸೂರಿನ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಭದ್ರವಾದ ಅಡಿಪಾಯ ಹಾಕಿದ ಮುಮ್ಮಡಿ ಕೃಷ್ಣರಾಜ ಒಡೆಯರ್(ಕೃಷ್ಣರಾಜ ಒಡೆಯರ್ III) ಅವರನ್ನು ಸ್ಮರಿಸಲಾಗಿದೆ.

ನಂತರದಲ್ಲಿ ಸ್ವಾಮಿ ವಿವೇಕಾನಂದರು ಚಿಕಾಗೋ ಐತಿಹಾಸಿಕ ಪ್ರಯಾಣವನ್ನು ಬೆಂಬಲಿಸಿ, ಹಲವಾರು ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಪ್ರಗತಿಪರ ಆಡಳಿತ ನೀಡಿದ ಹತ್ತನೇ ಚಾಮರಾಜ ಒಡೆಯರ್, ರಾಜಪ್ರತಿನಿಧಿಯಾಗಿ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ವಾಣಿ ವಿಲಾಸ ಸಾಗರ ಅಣೆಕಟ್ಟು (ಮಾರಿಕಣಿವೆ ಎಂದೂ ಕರೆಯಲ್ಪಡುತ್ತದೆ) ನಿರ್ಮಾಣದ ಮೇಲ್ವಿಚಾರಣೆ ನಿರ್ವಹಿಸುವ ಮೂಲಕ ಸೇವೆ ಸಲ್ಲಿಸಿದ ಮಹಾರಾಣಿ ಕೆಂಪ ನಂಜಮ್ಮಣಿ ಅವರ ಕೊಡುಗೆಯನ್ನು ನೆನೆಯಲಾಗಿದೆ.

ಕೆ.ಆರ್.ಎಸ್. ಜಲಾಶಯ ಸೇರಿದಂತೆ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು, ಸಾರ್ವಜನಿಕ ಆಸ್ಪತ್ರೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಸ್ಥಾಪನೆಗೆ ಬೆಂಬಲ ನೀಡಿ, ಆಧುನಿಕ ಮೈಸೂರು ನಿರ್ಮಾತೃ, ರಾಜರ್ಷಿ ಎಂದೇ ನಾಡಿನೆಲ್ಲೆಡೆ ಕರೆಯಲ್ಪಡುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಗೌರವಿಸಲಾಗಿದೆ.

ಹಾಗೆಯೇ ಸ್ವತಂತ್ರ ಭಾರತದ ನಂತರವೂ ರಾಜ್ಯದ ಏಕೀಕರಣಕ್ಕೆ ಮಾರ್ಗದರ್ಶನ ನೀಡಿದ ವಿದ್ವಾಂಸರು, ತತ್ವಜ್ಞಾನಿ ಮತ್ತು ಸಂಗೀತಶಾಸ್ತ್ರಜ್ಞರಾಗಿ ಖ್ಯಾತಿ ಪಡೆದಿದ್ದ ಮಹಾರಾಜ ಜಯಚಾಮರಾಜ ಒಡೆಯರ್ ಅವರನ್ನು ಪೋಸ್ಟ್ ಕಾರ್ಡ್ ಒಳಗೊಂಡಿದ್ದು, ಮೈಸೂರಿನ ಹಿರಿಮೆ–ಗರಿಮೆಯನ್ನು ಗೌರವಿಸುವ ಮಹತ್ಕಾರ್ಯ ಭಾರತೀಯ ಅಂಚೆ ಇಲಾಖೆಯಿಂದ ಆಗಿದೆ.

ಮುಂದಿನ ತಲೆಮಾರಿಗೆ ಮೈಸೂರಿನ ಇತಿಹಾಸ, ಪರಂಪರೆಯನ್ನು ತಿಳಿಸುವ ನಿಟ್ಟಿನಲ್ಲಿ ಭಾರತೀಯ ಅಂಚೆ ಹಾಗೂ ಕರ್ನಾಟಕ ಅಂಚೆ ಚೀಟಿ ಸಂಗ್ರಹಣಾ ಸಂಘವು 'ಒಡೆಯರ್ ಪೋಸ್ಟ್ ಕಾರ್ಡ್' ಹೊರತಂದಿದ್ದು, ಜೂ.4ರಂದು ಬೆಂಗಳೂರಿನ ಪ್ಯಾಲೆಸ್ ರಸ್ತೆಯಲ್ಲಿರುವ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರಿ ರಾಜಕುಮಾರಿ ಜಯಲಕ್ಷ್ಮಮ್ಮಣ್ಣಿ ಅವರ ನಿವಾಸವೂ ಆದ ಹಾಲಿ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿಯಲ್ಲಿ ಬಿಡುಗಡೆ ಮಾಡಲಾಗಿದೆ. ಪ್ರತಿ ಪೋಸ್ಟ್‌ಕಾರ್ಡ್ ಬೆಲೆ 100 ರೂ. ಇದ್ದು, ಬೇಡಿಕೆಗೆ ಅನುಗುಣವಾಗಿ ಮುದ್ರಣ ಮಾಡಲಾಗುತ್ತದೆ ಎಂದು ಭಾರತೀಯ ಅಂಚೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ಶಬರಿಮಲೆ ಸ್ವಾಮಿ ಅಯ್ಯಪ್ಪನಿಗೆ ಇರುಮುಡಿ ಅರ್ಪಣೆ



ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ಸೋಮವಾರ ಶಬರಿಮಲೆ ಸನ್ನಿಧಾನಕ್ಕೆ ತೆರಳಿ ಶ್ರೀ ಸ್ವಾಮಿ ಅಯ್ಯಪ್ಪನಿಗೆ ಇರುಮುಡಿ ಸಮರ್ಪಿಸಿ, ದರ್ಶನ ಪಡೆದರು. ನಂತರ ಪಡಿಪೂಜೆಯಲ್ಲಿ ಪಾಲ್ಗೊಂಡರು.

ಯೋಗ ದಿನಾಚರಣೆ: ವಿಚಾರ ಸಂಕಿರಣ

ಮೈಸೂರು: 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆರೋಗ್ಯಕರ ವಯೋವೃದ್ಧಿಗಾಗಿ ಯೋಗ ಎಂಬ ಧ್ಯೇಯ ವಾಕ್ಯದೊಂದಿಗೆ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಜೂ. 17ರಂದು ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಹರೀಶ್‌ಗೌಡ, ಆಯುಷ್ ಇಲಾಖೆ ಆಯುಕ್ತ ಡಾ. ಸುನಿಲ್ ಪವಾರ್ ಆಗಮಿಸಲಿದ್ದಾರೆ. ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ಜಿಂದಾಲ್ ವೈದ್ಯಕೀಯ ನಿರ್ದೇಶಕ ಡಾ. ಆರ್.ನಾಗರತ್ನ, ಡಾ.ವನಿತಾ ಎಸ್. ಶೆಟ್ಟಿ, ಉಜಿರೆ ಡಾ.ವಾದಿರಾಜ ಹೆಚ್.ಎಸ್., ನಾಗಮಂಗಲ ಡಾ.ನಿಖಿಲಾ ಹಿರೇಮಠ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಭೂಮಿ ಕಬಳಿಸಿದ್ದ ಪ್ರಕರಣ

ಜಮೀನು ತನ್ನದೆಂದು ಕೋರ್ಟ್ ಮೆಟ್ಟಿಲೇರಿದ್ದವನ ಅರ್ಜಿ ತಿರಸ್ಕಾರ

ಮೈಸೂರು, ಜೂ.15(ಎಂಕೆ)– ನಕಲಿ ದಾಖಲೆ ಸೃಷ್ಟಿಸಿ ಕಾನೂನು ಬಾಹಿರವಾಗಿ ಸಾರ್ವಜನಿಕ(ಸರ್ಕಾರಿ) ಜಮೀನನ್ನು ತನ್ನದೆಂದು ಕೋರ್ಟ್ ಮೆಟ್ಟಿಲೇರಿದ ವ್ಯಕ್ತಿಯೊಬ್ಬನ ಅರ್ಜಿಯನ್ನು ತಿರಸ್ಕರಿಸಿರುವ ಹೈಕೋರ್ಟ್, ಸಾರ್ವಜನಿಕ ಜಮೀನನ್ನು ಖಾಸಗಿಗೆ ಪರಭಾರೆ (ಮಾರಾಟ ಅಥವಾ ವರ್ಗಾವಣೆ) ಮಾಡಲಾಗದು ಎಂದು ಆದೇಶಿಸಿದೆ.

ಮೈಸೂರಿನ ದಟ್ಟಗಳ್ಳಿಯ ಸರ್ವೆ ನಂ.82, 52 ಮತ್ತು 61ರಲ್ಲಿನ 13 ಎಕರೆ ಭೂಮಿಯ ಮೇಲೆ ಹಕ್ಕು ಸಾಧಿಸಿದ್ದ ಜೆ.ಪಿ.ನಗರ ನಾಚನಹಳ್ಳಿ ಪಾಳ್ಯದ ಎಲ್.ಎನ್.ಗೋವಿಂದಸ್ವಾಮಿ ಎಂಬುವರ ಅರ್ಜಿಯನ್ನು ತಿರಸ್ಕರಿಸಿದ್ದ ಏಕ ಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ವಿರುದ್ಧ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿಗಳಾದ ಡಿ.ಕೆ.ಸಿಂಗ್ ಮತ್ತು ಟಿ.ಎಂ. ನದಾಫ್ ಅವರಿದ್ದ ವಿಭಾಗೀಯ ನ್ಯಾಯ ಪೀಠವು, ಸಾರ್ವಜನಿಕ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಲು ಸಾಧ್ಯವಿಲ್ಲ ಎಂದು ಆದೇಶಿಸಿದೆ.

ಸಾರ್ವಜನಿಕ ಜಮೀನು ಖಾಸಗಿಗೆ ಪರಭಾರೆ ಮಾಡದಂತೆ ಆದೇಶ



1970–71ರ ಆರ್‌ಟಿಸಿ ಪ್ರಕಾರ ದಟ್ಟಗಳ್ಳಿಯ ಸರ್ವೆ ನಂ.52ರಲ್ಲಿನ 1 ಎಕರೆ 34 ಗುಂಟೆ, ಸರ್ವೆ ನಂ.61ರಲ್ಲಿನ 1 ಎಕರೆ 35 ಗುಂಟೆ ಭೂಮಿಯು ಬಿ–ಖರಾಬು ಹಾಗೂ ಸರ್ವೆ ನಂ.82ರಲ್ಲಿನ 161 ಎಕರೆ 10 ಗುಂಟೆ ಸರ್ಕಾರಿ ಕರೆ ಭೂಮಿ ಎಂದಿದ್ದರೂ 1980ರಲ್ಲಿ ಅಕ್ರಮವಾಗಿ ಶೇರ್ಗರ್ ಲಕ್ಷ್ಮ ಭೋವಿ (ಎಲ್.ಎನ್.ಗೋವಿಂದಸ್ವಾಮಿ ಅವರ ತಾತ ಎನ್ನಲಾಗಿದೆ) ಎಂಬುವರ ಹೆಸರಿನಲ್ಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದು ಆದೇಶದಲ್ಲಿ ಉಲ್ಲೇಖಿಸಿದೆ.

ನಂತರ 1989ರ ಆಗಸ್ಟ್ 5ರಂದು ಶೇರ್ಗರ್ ಲಕ್ಷ್ಮ ಭೋವಿ ಹೆಸರಿನ ಅಕ್ರಮ ಪ್ರವೇಶವನ್ನು ಅಂದಿನ ಸಹಾಯಕ ಆಯುಕ್ತರು ರದ್ದು ಮಾಡಿದ್ದಾರೆ. ಇದೆಲ್ಲದರ ನಡುವೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಈ 13 ಎಕರೆ ಭೂಮಿಯಲ್ಲಿ ಸುಮಾರು 4 ಎಕರೆ ಭೂಮಿಯನ್ನು ಅಭಿವೃದ್ಧಿ ಕಾರ್ಯಕ್ಕೆ ಬಳಸಿದ್ದು, ಪರಿಹಾರ ನೀಡಲೆಂದು ಸುಮಾರು 52 ಲಕ್ಷ ರೂ.ಗಳನ್ನು ಕೋರ್ಟ್ ಹೆಸರಿಗೆ ಡೆಪಾಸಿಟ್ ಮಾಡಿದೆ.

ಈ ಸಂಬಂಧ ತನ್ನ ಜಮೀನಿಗೆ ಸೂಕ್ತ ಪರಿಹಾರ ನೀಡುವಂತೆ ಎಲ್.ಎನ್. ಗೋವಿಂದಸ್ವಾಮಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನೂ ವಿಚಾರಣೆ ನಡೆಸಿ, ಎಲ್ಲಾ ದಾಖಲೆಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿರುವ ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್ ಮತ್ತು ಟಿ.ಎಂ.ನದಾಫ್ ಅವರ ವಿಭಾಗೀಯ ನ್ಯಾಯಪೀಠವು ಜೂ.4ರಂದು ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿರುವುದಲ್ಲದೆ ಸಾರ್ವಜನಿಕ ಜಮೀನನ್ನು ಖಾಸಗಿಗೆ ಪರಭಾರೆ ಮಾಡಲಾಗದು ಎಂದು ಆದೇಶ ಹೊರಡಿಸಿದೆ.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು.

ಮೈಸೂರು, ಜೂ.15(ಎಸ್‌ಪಿಎನ್)–ಮೈಸೂರು ಟಿ.ಕೆ.ಬಡಾವಣೆಯಲ್ಲಿರುವ ಶ್ರೀಕೃಷ್ಣಧಾಮದಲ್ಲಿ ರಾಜ್ಯ ಮತ್ತು ಕೇಂದ್ರ ಪಠ್ಯಕ್ರಮದ ಪರೀಕ್ಷೆಯಲ್ಲಿ ಅತೀ ಹೆಚ್ಚು ಗಳಿಸಿದ 170ಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಶ್ರೀ ಕೃಷ್ಣಮಿತ್ರಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ನೆರವೇರಿಸಲಾಯಿತು.

ರಾಜ್ಯ ಪಠ್ಯಕ್ರಮದಲ್ಲಿ ನಡೆದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಮನಸ್ವಿನಿ ಪ್ರದೀಪ್ (624), ಶಮಿತ್ ಜಿ.ರಾವ್(622), ಸನ್ನಿಧಿ(621), ಜಿ.ತೇಜಸ್ (620), ವೈಭವ್ ವಿ.ಐಯ್ಯಂಗಾರ್(619), ಟಿ.ಎಸ್.ಶ್ರೀವಿಭ (617), ಶರಧಿ ಜಿ.ಶಾಸ್ತ್ರಿ(617), ಎಂ.ಕೆ.ಅಭಿಜ್ವಲ್ (616), ಆಹನ(615), ಎಂ.ಯಶಸ್ವಿನಿ(614), ನಿಧಿ(613), ಡಿ.ಎಸ್.ಅಭಿಜ್ಞಾ(613), ಕೆ.ಎಸ್.ಅಭಯ್(612), ಬಿ.ಎಸ್. ಶ್ರೀಚೈತ್ರ (611), ಅನಿರುದ್ಧ ಕೆ.ಭಟ್(610), ಎನ್.ಎಲ್. ವಿಷ್ಣುದತ್ತ(609), ಸಿರಿ ಎಸ್.ರಾವ್(608), ಬಿ.ಆರ್. ಶ್ರಾವ್ಯ(608), ಕೆ.ಎನ್.ಸಮೃದ್ಧಿ ಉಪಾಧ್ಯ(608), ಜಿ.ಎಂ.ಮೇಧಿನಿ(606), ಪ್ರೇರಣ ದೀಪಕ್(606), ಎನ್.ಅನಘ(604), ಎಂ.ವಿ.ಶ್ರೇಯಾ(601), ಎಂ.ಆದಿತ್ಯ ಕಶ್ಯಪ್(601), ಎ.ಎಂ.ಮನೋಜ್ (600), ಸುಬ್ರಹ್ಮಣ್ಯ ಶಾಸ್ತ್ರಿ(598), ಬಿ.ಎಸ್.ಸ್ವಾತಿ(594), ಪಿ.ಪ್ರೇರಣ(589), ಎಂ.ಗಣೇಶ್ ರಾವ್ (577), ವಿಶ್ರುತ್ ಎ.ಧನ್ಯ(567), ಎಸ್.ಯನಿಕಾ(567) ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕೇಂದ್ರ ಪಠ್ಯಕ್ರಮದ ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಧೃತಿ ಶ್ರೀಕಾಂತ್(491), ಎಂ.ಎಲ್.ಶ್ರಾವಣಿ (483), ವಿಕುನಿತ್ ಎಸ್.ರಾವ್(ಶೇ.96), ಜಿ.ತ್ರಿಷಾ (574), ವಿ.ಸುಕೃತಿ (574), ಕೆ.ದೀಕ್ಷಾ(560), ಪ್ರಣವ್ ಶ್ರೀನಿಧಿ ಅತ್ತೂರ್ (570), ಆರ್ಯನ್ ಬಿ.ಐಯ್ಯಂಗಾರ್(466), ಮನಸ್ವಿ ಶ್ರೀನಾಥ್ (465), ಎಸ್.ಸಿರಿ (457), ಅವನಿ ಸುಬ್ಬಯ್ಯ(482) ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.


ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಡಿ.ಎಸ್.ಧನ್ವಿ (597), ಸಾರಿಕಾ ಕೆ.ಭಾರದ್ವಜ್ (595), ಬಿ.ಸುದೀಪ್ತ (593), ಎ.ಅಮೂಲ್ಯ(593), ಕೆ.ವಿ.ಅದ್ವೈತ್(591), ಎಂ.ಡಿ.ಸುದೀಕ್ಷಾ(591), ಕೆ.ವಿಸ್ಮಯ(591), ಬಿ.ಎ. ಗಾಯತ್ರಿ(590), ಸುರಭಿ ಎಸ್.ಭಟ್(588), ಆರ್.ಮಾನ್ಯ(588), ಅನ್ವಿತಾ ಆರ್.ಭಟ್(588), ಧಾತ್ರಿ ಕೆ.ಗೌತಮ್(588), ಎಸ್.ವಿಧಾತ್ರಿ (586), ಅನ್ವಿತಾ ಪಿ.ರಾವ್(585), ಬಿ.ವಿಶಾಖ್ ಭಾರದ್ವಜ್(584), ಅಂಜಲಿ ವಿ.ಶಾಸ್ತ್ರಿ(584), ವಿಶ್ರುತ ಎಸ್.ಪ್ರಸಾದ್(584), ಸಂಜನ ಎಸ್.ಬಾಬು(583), ಎನ್.ಶರಧಿ(582), ಶಿವಾನಿ ಆದರ್ಶ (581), ಅದಿತಿ ವಿ.ಶಾಸ್ತ್ರಿ(580), ಆರ್.ಸುದರ್ಶನ್(579), ಪ್ರಜ್ವಲ್ ಕಲ್ಲೂರು(579), ಪಿ.ವಿ.ಅಕ್ಷತ (579), ಎಂ.ಎಸ್. ನಿಶಿತ(579), ಎಚ್.ಎ.ಅದಿತಿ(578), ಸಿ.ಎಸ್.ಸುಪ್ರಿಯಾ (577), ಎನ್.ಅನನ್ಯ(576), ಕ್ಷಿತಿಜ ಆರ್.ಕುಸ್ನೂರು(576), ಎಚ್.ಸುರಭಿ (575), ಆರ್.ಜಿ.ವೈಷ್ಣವಿ (575), ಸಿ.ಎನ್. ಬಿಂದುಶ್ರೀ ಕೌಂಡಿನ್ಯ(575), ನಿರುಪಮಾ ಮೋಹನ್(574), ಎಸ್.ಅನಘ(574), ಎಂ.ಆರ್.ಪ್ರಿಯಾಂಕ(573), ಎಸ್.ಅಭಯ್ (573), ಎಂ.ಜಿ.ಶ್ರೀವಿದ್ಯಾ(571), ಕೆ.ಸಾನ್ವಿ (568), ಚೈತನ್ಯ ಅಶ್ವಥ್(567), ವೈ.ಕೆ.ಮಧು ಶಾಲಿನಿ (562), ಎಂ.ಪ್ರಣತಿ(556), ಸುಪ್ರಿಯಾ ಎಸ್.ಕೆಲ್ಕರ್ (546), ಎಂ.ನಾಗೇಶ್ವರ್ ರಾವ್(543), ಆರ್.ಪಿ.ಕೇಶವ್ (543), ಧನ್ವಿ ಎಸ್.ಆಚಾರ್ಯ(510) ಹಾಗೂ ಎಚ್.ಆರ್. ಸಾತ್ವಿಕ್ ಹೆಬ್ಬಾರ್(516) ಅಂಕಗಳಿಸಿದ ವಿದ್ಯಾರ್ಥಿಗಳನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಪ್ರಾಂಶುಪಾಲ ಎಸ್.ಬಾಲಾಜಿ ಹಾಗೂ ಇತರೆ ಗಣ್ಯರು ಸನ್ಮಾನಿಸಿದರು.

ಈ ವೇಳೆ ಶ್ರೀ ಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ಶ್ರೀವತ್ಸ ರಾವ್, ಗೌರವ ಕಾರ್ಯದರ್ಶಿ ರಾಘವೇಂದ್ರರಾವ್, ಶ್ರೀ ಕೃಷ್ಣ ಟ್ರಸ್ಟ್ ಗೌರವ ಕಾರ್ಯದರ್ಶಿ ಕೆ.ವಿ.ಶ್ರೀಧರ್, ಉಪಾಧ್ಯಕ್ಷ ರವಿಶಾಸ್ತ್ರಿ, ಪಿ.ಎಸ್.ಶೇಖರ್, ವಾಸುದೇವ್ ರಾವ್, ಖಜಾಂಚಿ ಸುರೇಶ್‌ರಾವ್, ವಿಕ್ರಂ ಅಯ್ಯಂಗಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಕೇರಳ ಸಚಿವೆ ಬಿಂದು ಕೃಷ್ಣ ತಲೆ ಮೇಲೆ ಬಿದ್ದ ಬಿಸಿ ಬಿಸಿ ಪಾಯಸ


ತಿರುವನಂತಪುರಂ: ಕೇರಳದ ಕೊಲ್ಲಂನಲ್ಲಿ ಪ್ರಿಯದರ್ಶಿನಿ ಉಚಿತ ಬಸ್ ಪ್ರಯಾಣ ಯೋಜನೆ ಉದ್ಘಾಟನೆ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಬಿಂದು ಕೃಷ್ಣ ಅವರ ತಲೆಯ ಮೇಲೆ ಬಿಸಿ ಪಾಯಸ ಬಿದ್ದ ಆಘಾತಕಾರಿ ಘಟನೆ ನಡೆದಿದೆ.



ಕೊಲ್ಲಂ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ 'ಪ್ರಿಯದರ್ಶಿನಿ' ಉಚಿತ ಬಸ್ ಪ್ರಯಾಣ ಯೋಜನೆಯ ಜಿಲ್ಲಾ ಮಟ್ಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿದ್ದರು. ಈ ವೇಳೆ, ಸಾರ್ವಜನಿಕರು ಮತ್ತು ಗಣ್ಯರಿಗೆ ಪಾಯಸ ವಿತರಿಸಲು ಯೂತ್ ಕಾಂಗ್ರೆಸ್‌ನಿಂದ ವ್ಯವಸ್ಥೆ ಮಾಡಲಾಗಿತ್ತು. ಭಾರೀ ಜನದಟ್ಟಣೆಯಿಂದ ತುಂಬಿದ್ದ ಬಸ್ಸಿನೊಳಗೆ ಪಾಯಸ ವಿತರಿಸುತ್ತಿದ್ದಾಗ ಬಿಸಿ ಪಾಯಸ ಆಕಸ್ಮಿಕವಾಗಿ ಚೆಲ್ಲಿ, ಸಚಿವೆ ತಲೆಯ ಮೇಲೆ ಬಿದ್ದಿದೆ. ತಕ್ಷಣ ಅಲ್ಲಿದ್ದ ಜನ ಟವೆಲ್ ಹಾಗೂ ಶಾಲು ಬಳಸಿ ಸಚಿವೆಯ ತಲೆ ಹಾಗೂ ಮುಖ ಒರೆಸಿದ್ದಾರೆ. ಬಿಸಿಯ ನೋವಿನ ನಡುವೆಯೂ ಸಚಿವೆ ಶಾಂತಿಯಿಂದ ಇದ್ದರು. ಅಲ್ಲದೇ ಕಾರ್ಯಕ್ರಮ ಸ್ಥಗಿತಗೊಳಿಸಲು ನಿರಾಕರಿಸಿದರು. ಬಸ್‌ನಲ್ಲೇ ಇದ್ದು, ಚಿನ್ನಕ್ಕಡ ತಲುಪುವವರೆಗೆ ಪ್ರಯಾಣಿಸಿ, ನಂತರ ಹಿಂತಿರುಗಿದರು. ಈ ಘಟನೆಯಿಂದ ಬಸ್‌ನಲ್ಲಿದ್ದವರು ಕ್ಷಣಕಾಲ ಆಘಾತಕ್ಕೊಳಗಾಗಿದ್ದರು. ಸ್ಥಳೀಯ ಅಧಿಕಾರಿಗಳು ಮತ್ತು ಡಿಪೋ ಅಧಿಕಾರಿಗಳು ಈ ಘಟನೆಯ ವಿಡಿಯೋ ದೃಶ್ಯಗಳನ್ನು ಪರಿಶೀಲಿಸುತ್ತಿದ್ದಾರೆ.

ಅಮೆರಿಕದಲ್ಲಿ ವಿಮಾನ ಪತನ: ಓರ್ವ ಪೈಲಟ್, 11 ಸ್ಕೈಡೈವರ್‌ಗಳು ಸಾವು

ವಾಷಿಂಗ್ಟನ್: ಅಮೆರಿಕದ ಮಿಸೌರಿ ರಾಜ್ಯದಲ್ಲಿ ಸಂಭವಿಸಿದ ವಿಮಾನ ಅಪಘಾತದಲ್ಲಿ 11 ಸ್ಕೈಡೈವರ್‌ಗಳು ಮತ್ತು ಓರ್ವ ಪೈಲಟ್ ಸಾವನ್ನಪ್ಪಿದ್ದಾರೆ.




ಸ್ಕೈಡೈವಿಂಗ್ ಕಂಪನಿಯೊಂದು ಗುತ್ತಿಗೆ ಪಡೆದಿದ್ದ ಈ ವಿಮಾನವು ಭಾನುವಾರ ಸ್ಥಳೀಯ ಸಮಯ 11:20ರ ಸುಮಾರಿಗೆ ಹಾರಿತು. ಹಾರಾಟ ವಿಫಲವಾಗಿ ತೀಕ್ಷ್ಣವಾದ ಎಡ ತಿರುವು ಪಡೆದು ಬಟ್ಲರ್ ಸ್ಮಾರಕ ವಿಮಾನ ನಿಲ್ದಾಣದಿಂದ ಸುಮಾರು 200 ಗಜಗಳಷ್ಟು ದೂರದಲ್ಲಿ ಅಪ್ಪಳಿಸಿತು. ವಿಮಾನದಲ್ಲಿದ್ದ ಎಲ್ಲಾ 12 ಜನರು ಸಾವನ್ನಪ್ಪಿದ್ದಾರೆ ಎಂದು ಬೇಟ್ಸ್ ಕೌಂಟಿ ತುರ್ತು ನಿರ್ವಹಣಾ ವಕ್ತಾರರು ತಿಳಿಸಿದ್ದಾರೆ.

ಇದು ವಾಣಿಜ್ಯ ವಿಮಾನವಲ್ಲ, ಸ್ಥಳೀಯ ವಿಮಾನ. ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ವಿಮಾನವು ಪೆಸಿಫಿಕ್ ಏರೋಸ್ಪೇಸ್ ಪಿ 750 ಆಗಿದ್ದು, ವಿಮಾನ ನಿಲ್ದಾಣದಿಂದ ಹೊರಡುವಾಗ ಅಪಘಾತಕ್ಕೀಡಾಗಿದೆ ಎಂದು ಮಾಹಿತಿ ನೀಡಿದ್ದಾರೆ.


ತೆರೆದ ಬಾವಿಗೆ ಪಿಕ್ ಅಪ್ ವಾಹನ ಬಿದ್ದು 8 ಮಂದಿ ಸಾವು

ಮುಂಬೈ: ಪಿಕ್ ಅಪ್ ವಾಹನವೊಂದು ರಸ್ತೆ ಬದಿಯ ತೆರೆದ ಬಾವಿಗೆ ಬಿದ್ದ ಪರಿಣಾಮ ನಾಲ್ವರು ಮಹಿಳೆಯರು ಮತ್ತು ನಾಲ್ವರು ಮಕ್ಕಳು ಸೇರಿ ಎಂಟು ಮಂದಿ ಸಾವನ್ನಪ್ಪಿದ ಘಟನೆ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ಮಲ್ಶಿರಾಸ್ ತಹಸಿಲ್‌ನಲ್ಲಿ ನಡೆದಿದೆ. ಈ ಅಪಘಾತದಲ್ಲಿ ಏಳು ಜನರು ಗಾಯಗೊಂಡಿದ್ದಾರೆ. ಪಂಢರಪುರ ಮೂಲದ 15 ಜನರು ಮಾಸ್ವಾಡ್‌ನ ದೇವಸ್ಥಾನಕ್ಕೆ ಭೇಟಿ ನೀಡಿ ಹಿಂತಿರುಗುತ್ತಿದ್ದರು. ಈ ವೇಳೆ ತಂಡುಲ್ವಾಡಿ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಪಿಕಪ್‌ನಲ್ಲಿ ಇದ್ದವರು ಹೆಚ್ಚಿನವರು ಸಂಬಂಧಿಕರು ಮತ್ತು ನೆರೆಹೊರೆಯವರು ಎಂದು ತಿಳಿದುಬಂದಿದೆ. ಪ್ರಾಥಮಿಕ ಮಾಹಿತಿ ಪ್ರಕಾರ, 15 ಜನರನ್ನು ಹೊತ್ತೊಯ್ಯುತ್ತಿದ್ದ ಪಿಕ್–ಅಪ್ ವಾಹನವು ಚಾಲಕನ ನಿಯಂತ್ರಣ ತಪ್ಪಿ, ರಸ್ತೆಬದಿಯ ಜಮೀನಿಗೆ ನುಗ್ಗಿ ಬಾವಿಗೆ ಬಿದ್ದಿದೆ. ಇದರಿಂದಾಗಿ 8 ಮಂದಿ ಸಾವನ್ನಪ್ಪಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸೋಲಾಪುರದ ಪೊಲೀಸ್ ವರಿಷ್ಠಾಧಿಕಾರಿ ಅತುಲ್ ಕುಲಕರ್ಣಿ ತಿಳಿಸಿದ್ದಾರೆ. ಅಪಘಾತದಲ್ಲಿ ಸಾವನ್ನಪ್ಪಿದವರಿಗೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸಂತಾಪ ಸೂಚಿಸಿದ್ದಾರೆ. ಮೃತರ ಕುಟುಂಬಸ್ಥರಿಗೆ 5 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.



ವಾಯುಸೇನೆ ತರಬೇತಿ ವಿಮಾನ ಪತನ: ಇಬ್ಬರು ಪೈಲಟ್‌ಗಳ ದುರ್ಮರಣ


ಇಸ್ಲಾಮಾಬಾದ್: ಪಾಕಿಸ್ತಾನದ ಖೈಬರ್ ಪಖ್ತೂನ್ಖ್ವಾ ಪ್ರಾಂತ್ಯದ ಮರ್ದಾನ್ ಜಿಲ್ಲೆಯ ಕಟ್ಲಂಗ್ ಪ್ರದೇಶದಲ್ಲಿ ಭೀಕರ ಅಪಘಾತವೊಂದು ಸಂಭವಿಸಿದೆ. ಪಾಕಿಸ್ತಾನ ವಾಯುಸೇನೆಗೆ ಸೇರಿದ ತರಬೇತಿ ವಿಮಾನವೊಂದು ಹಾರಾಟದ ವೇಳೆ ಇದ್ದಕ್ಕಿದ್ದಂತೆ ತಾಂತ್ರಿಕ ದೋಷದಿಂದಾಗಿ ಅಪಘಾತಕ್ಕೀಡಾಗಿದೆ.



ಈ ದುರದೃಷ್ಟಕರ ಘಟನೆಯಲ್ಲಿ ವಿಮಾನದಲ್ಲಿದ್ದ ಇಬ್ಬರು ಪೈಲಟ್‌ಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ. ವಿಮಾನ ನೇರವಾಗಿ ರಸ್ತೆಯ ಮಧ್ಯದಲ್ಲಿ ಇಳಿಯುವಾಗ ಇಬ್ಬರು ಮೋಟಾರ್ ಸೈಕಲ್ ಸವಾರರು ಹಾದುಹೋಗುತ್ತಿದ್ದರು. ವಿಮಾನದಲ್ಲಿದ್ದ ಇಬ್ಬರೂ ಪೈಲಟ್‌ಗಳು ಸಾವನ್ನಪ್ಪಿದ್ದಾರೆ. ರಕ್ಷಣಾ ತಂಡಗಳು ಮತ್ತು ಭದ್ರತಾ ಸಂಸ್ಥೆಗಳು ತಕ್ಷಣ ಸ್ಥಳಕ್ಕೆ ಆಗಮಿಸಿವೆ. ಅಪಘಾತದ ಕಾರಣದ ಬಗ್ಗೆ ಪಾಕಿಸ್ತಾನಿ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಅಪಘಾತದ ನಂತರ ಸ್ಥಳದಲ್ಲಿ ಜನರು ಜಮಾಯಿಸಿದರು. ಮೋಟಾರ್ ಸೈಕಲ್ ಸವಾರರ ಸ್ಥಿತಿ ತಿಳಿದಿಲ್ಲ, ಆದರೆ ನಂತರ ಎರಡೂ ವಾಹನಗಳು ರಸ್ತೆಯಲ್ಲಿ ಬಿದ್ದಿರುವುದು ಕಂಡುಬಂದಿದೆ. ಕಳೆದ ಒಂದು ತಿಂಗಳೊಳಗೆ ಇದು ಐದನೇ ಪ್ರಮುಖ ಅಪಘಾತ ಎಂದು ಹೇಳಲಾಗುತ್ತಿದೆ. ಪ್ರಸ್ತುತ ಅಪಘಾತಕ್ಕೆ ನಿಖರವಾದ ಕಾರಣ ತಿಳಿಯಲು ರಕ್ಷಣಾ ಇಲಾಖೆ ತನಿಖೆಗೆ ಆದೇಶಿಸಿದೆ.

5 ತಿಂಗಳಲ್ಲಿ 3 ಮದುವೆಯಾಗಿ ವಂಚಿಸಿದ ಕಿಲಾಡಿ ಮಹಿಳೆ!

ಹಮೀರ್‌ಪುರ: ಐದು ತಿಂಗಳಲ್ಲಿ ಮೂರು ಮದುವೆಯಾಗಿ ಮಹಿಳೆಯೊಬ್ಬಳು ಪರಾರಿಯಾಗಿರುವ ಘಟನೆ ಹಿಮಾಚಲ ಪ್ರದೇಶದ ಹಮೀರ್‌ಪುರದಲ್ಲಿ ನಡೆದಿದೆ.



ಶೀತಲ್ ಎಂಬ ಮಹಿಳೆ ಕೇವಲ ಐದು ತಿಂಗಳೊಳಗೆ ಮೂವರು ವ್ಯಕ್ತಿಗಳನ್ನು ಮದುವೆಯಾಗಿ, ಸುಳ್ಳು ನೆಪಗಳನ್ನು ಹೇಳಿ ಪರಾರಿಯಾಗಿದ್ದಾಳೆ ಎಂಬ ಆರೋಪ ಕೇಳಿಬಂದ ಬೆನ್ನಲ್ಲೇ, ಸಾರ್ವಜನಿಕರ ಹಿತದೃಷ್ಟಿಯಿಂದ ಪೊಲೀಸರು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ಸಂತ್ರಸ್ತ ಕುಟುಂಬಗಳು ನೀಡಿದ ಅಧಿಕೃತ ದೂರಿನ ಮೇರೆಗೆ ಸಂಬಂಧಿತ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ಪ್ರಕರಣ ದಾಖಲಾಗಿದ್ದು, ಇಡೀ ಜಾಲವನ್ನು ಪತ್ತೆಹಚ್ಚಲು ಪೊಲೀಸರು ವಿಶೇಷ ತಂಡವನ್ನು ರಚಿಸಿದ್ದಾರೆ. ಮಹಿಳೆಯು ಜನವರಿಯಲ್ಲಿ ಬಿಲಾಸ್‌ಪುರದ ಜೆಜ್ವಿನ್, ಫೆಬ್ರವರಿಯಲ್ಲಿ ಹಮೀರ್‌ಪುರದ ಗಲೋಡ್ ಮತ್ತು ಮೇ ತಿಂಗಳಲ್ಲಿ ಬಲ್ಧಸಿನಾ ಪ್ರದೇಶದಲ್ಲಿ ಮದುವೆಯಾಗಿದ್ದಳು. ಮದುವೆಯಾದ ಕೆಲವೇ ದಿನಗಳಲ್ಲಿ ದೇವಸ್ಥಾನಕ್ಕೆ ಹೋಗುವ ನೆಪ ಅಥವಾ ಸಂಬಂಧಿಕರ ಮರಣದ ಸುಳ್ಳು ಕಾರಣ ನೀಡಿ ಈಕೆ ನಾಪತ್ತೆಯಾಗುತ್ತಿದ್ದಳು. ಎಲ್ಲಾ ಮೂರು ಘಟನೆಗಳಲ್ಲೂ ಒಂದೇ ರೀತಿಯ ಮಾದರಿ ಇರುವುದರಿಂದ ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಈ ಪ್ರಕರಣದ ಬೆನ್ನಲ್ಲೇ, ಸಾರ್ವಜನಿಕರನ್ನು ವಂಚಕರಿಂದ ರಕ್ಷಿಸಲು ಪೊಲೀಸ್ ಇಲಾಖೆಯು ವಿಶೇಷ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ.

ಮೈಸೂರು ಮಿತ್ರ ಮಂಗಳವಾರ 16 ಜೂನ್ 2026

ಮಕ್ಕಳ ಕರೆದೊಯ್ಯುವ ಶಾಲಾ ವಾಹನ ತಪಾಸಣೆ

ಕುಶಾಲನಗರ, ಜೂ.15–ಶಾಲಾ ಮಕ್ಕಳನ್ನು ಸಾಗಿಸುವ ಖಾಸಗಿ ವಾಹನಗಳನ್ನು ತಪಾಸಣೆ ನಡೆಸಿದ ಕುಶಾಲನಗರ ಸಂಚಾರಿ ಪೊಲೀಸರು ಇಬ್ಬರ ವಿರುದ್ಧ ಡ್ರಿಂಕ್ ಅಂಡ್ ಡ್ರೈವ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿದ್ಯಾರ್ಥಿಗಳನ್ನು ಕರೆದೊಯ್ಯುವ ವಾಹನಗಳ ಚಾಲಕರು ಮದ್ಯಪಾನ ಮಾಡಿ ವಾಹನ ಚಲಾಯಿಸುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸ್ ಠಾಣಾಧಿಕಾರಿ ಗಣೇಶ್ ನೇತೃತ್ವದಲ್ಲಿ ವಾಹನಗಳ ತಪಾಸಣೆ ನಡೆಸಲಾಯಿತು.

ಫಾತಿಮಾ ಕಾನ್ವೆಂಟ್ ಮುಂಭಾಗ ಶಾಲೆ ಬಿಡುವ ಸಮಯದಲ್ಲಿ ಆಟೋ, ಟಿಟಿ, ಮಿನಿ ವ್ಯಾನ್‌ಗಳ ಪರಿಶೀಲನೆ ನಡೆಸಲಾಯಿತು. ಮದ್ಯ ಸೇವಿಸಿ ವಾಹನ ಚಲಾಯಿಸುತ್ತಿದ್ದ ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.



ವಾಹನ ಚಾಲಕರು ಮದ್ಯಪಾನ ಮಾಡಿರುವ ಬಗ್ಗೆ ತಪಾಸಣೆ

ಬೆಲೆ ಏರಿಕೆ ವಿರೋಧಿಸಿ ಮಹಿಳಾ ಸಂಘಟನೆ ಪ್ರತಿಭಟನೆ



ಅಗತ್ಯ ವಸ್ತುಗಳ ಬೆಲೆಯೇರಿಕೆ ವಿರೋಧಿಸಿ ಡಿವೈಎಫ್ಐ ಸಂಘಟನೆ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.

ವಿರಾಜಪೇಟೆ: ಅಡುಗೆ ಅನಿಲ, ಪೆಟ್ರೋಲ್ ಡೀಸೆಲ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಖಂಡಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕೊಡಗು ಜಿಲ್ಲಾ ಸಮಿತಿ ಇಲ್ಲಿನ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿ ಕೇಂದ್ರಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ಸಂಘಟನೆಯ ಮುಖಂಡ ಹೆಚ್.ಪಿ.ಭರತ್ ಮಾತನಾಡಿ ಕೇಂದ್ರ ಸರಕಾರ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ನಿರಂತರವಾಗಿ ಹೆಚ್ಚಿಸುತ್ತಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು ಜನ ಸಾಮಾನ್ಯರು ಕಷ್ಟ ಅನುಭವಿಸುವಂತಾಗಿದೆ. ವಾಣಿಜ್ಯ ಮತ್ತು ಅಡುಗೆ ಅನಿಲಗಳ ಬೆಲೆ ಏರಿಕೆಯಿಂದ ಅನೇಕರು ಹೋಟೆಲ್‌ಗಳನ್ನು ಮುಚ್ಚಿದ್ದಾರೆ. ಇತರೆ ಹೋಟೆಲ್‌ಗಳಲ್ಲಿ ತಿಂಡಿ ತಿನಿಸುಗಳ ಬೆಲೆಯನ್ನು ಶೇ.2ರಷ್ಟು ಹೆಚ್ಚಿಸಲಾಗಿದೆ ಇದೇ ರೀತಿ ಮುಂದುವರಿದರೆ ಸಾಮಾನ್ಯ ಜನರು ಜೀವನ ನಡೆಸುವುದೇ ಸಮಸ್ಯೆಯಾಗುತ್ತದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಡಿವೈಎಫ್ಐ ಸಂಘಟನೆಯ ಎ.ಹೆಚ್.ಸಾಧಿಕ್, ಜನವಾದಿ ಮಹಿಳಾ ಸಂಘಟನೆಯ ಪದ್ಮಿನಿ ಶ್ರೀಧರ್, ಆದಿವಾಸಿ ಸಮನ್ವಯ ಸಮಿತಿಯ ಪ್ರೇಮ, ಕಾರ್ಯದರ್ಶಿ ಪಿ.ಕೆ.ರಮೇಶ್ ಸೇರಿದಂತೆ ನೂರಕ್ಕೂ ಹೆಚ್ಚು ಸಂಘಟನೆ ಸದಸ್ಯರುಗಳು ಭಾಗವಹಿಸಿದ್ದರು.

ಎಸ್‌ಐಆರ್‌ನಿಂದ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಆತಂಕ

ಕೊಡಗಿಗೆ ಆಗಮಿಸಿದ ಎದ್ದೇಳು ಕರ್ನಾಟಕ ಆಂದೋಲನದ ಜಾಗೃತಿ ಅಭಿಯಾನ

ಮಡಿಕೇರಿ, ಜೂ.15–ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಆದಿವಾಸಿಗಳು, ಅಲ್ಪಸಂಖ್ಯಾತರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಆತಂಕವನ್ನು ಮೂಡಿ ಸಿದೆ. ಈ ಕುರಿತು ಜನಸಾಮಾನ್ಯರು ಜಾಗೃತರಾಗಬೇಕೆಂದು ಪ್ರಗತಿಪರ ಸಂಘಟನೆಗಳ ಪ್ರಮುಖರು ತಿಳಿಸಿದ್ದಾರೆ.

ಪ್ರಗತಿಪರ ಸಂಘಟನೆಗಳ ಒಕ್ಕೂಟ ಹಾಗೂ ಜಾತ್ಯತೀತ ಪಕ್ಷಗಳ ಒಕ್ಕೂಟದ ವತಿಯಿಂದ ಜೂ.20ರಂದು ಎಸ್‌ಐಆರ್ ವಿರೋಧಿ ಸಮಾವೇಶ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿದೆ. ಇದಕ್ಕೆ ಪೂರಕವಾಗಿ ಎದ್ದೇಳು ಕರ್ನಾಟಕ ಆಂದೋಲನದ ಭಾಗವಾಗಿ ರಾಜ್ಯದ 5 ಕಡೆಗಳಿಂದ ಬೆಂಗಳೂರನ್ನು ತಲುಪುವಂತೆ ಜನಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ. ಅದರಂತೆ ಉಡುಪಿಯಿಂದ ಆರಂಭಗೊಂಡ ಅಭಿಯಾನ ಇಂದು ನಗರಕ್ಕೆ ಆಗಮಿಸಿ ಹಳೇ ಖಾಸಗಿ ಬಸ್ ನಿಲ್ದಾಣದಲ್ಲಿ ಜನ ಜಾಗೃತಿ ಕಾರ್ಯಕ್ರಮ ನಡೆಸಿತು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಪ್ರಮುಖರು ಹಾಗೂ ಸಿಪಿಐ(ಎಂಎಲ್) ರಾಜ್ಯ ಪ್ರತಿನಿಧಿ ಡಿ.ಎಸ್. ನಿರ್ವಾಣಪ್ಪ ಮಾತನಾಡಿ, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣಾ ಕಾರ್ಯ 9 ರಾಜ್ಯಗಳಲ್ಲಿ ನಡೆದಿದ್ದು, ಆ ಮೂಲಕ ಸುಮಾರು 6 ಕೋಟಿ ಜನ ತಮ್ಮ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಡಿ.ಸಿಗೆ ಹೊಣೆಗಾರಿಕೆ ವಹಿಸಿ: ರಾಜ್ಯದಲ್ಲಿ ಎಸ್‌ಐಆರ್ ಇದೇ ಜೂ.20ರಿಂದ ಆರಂಭಗೊಳ್ಳಲಿದೆ. ಈ ಹಂತದಲ್ಲಿ ಜನಸಾಮಾನ್ಯರಿಂದ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಪಾಸ್‌ಪೋರ್ಟ್, ರೇಷನ್ ಕಾರ್ಡ್ ಮೊದಲಾದ ವಿವಿಧ ದಾಖಲೆಗಳನ್ನು ಕೇಳಲಾಗುತ್ತದೆ. ಆದರೆ ಇವೆಲ್ಲವುಗಳಿಂದ ವಂಚಿತರಾಗಿರುವ ಆದಿವಾಸಿ ಸಮೂಹ ಮತದಾನದಿಂದ ವಂಚಿತಗೊಳ್ಳುವ ಅಪಾಯವಿರುವುದಾಗಿ ತಿಳಿಸಿದರು. ಈ ನೆಲದ ಯಾರೇ ಒಬ್ಬರ ಮತದಾನದ ಹಕ್ಕನ್ನು ತೆಗೆದು ಹಾಕಿದಲ್ಲಿ ಅದರ ಹೊಣೆಗಾರಿಕೆಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಬೇಕೆಂದು ಅಮಿನ್ ಮೊಹಿಸಿನ್ ಆಗ್ರಹಿಸಿದರು.

ಕೇಂದ್ರ ಸರಕಾರದ ವೈಫಲ್ಯ: ಒಕ್ಕೂಟದ ಪ್ರಮುಖ ಜೆ.ಸೋಮಣ್ಣ ಮಾತನಾಡಿ, ದೇಶದೊಳಗೆ ನುಸುಳಿರುವ ವಿದೇಶಿ ನುಸುಳುಕೋರರ ಪತ್ತೆಗಾಗಿ ಎಸ್‌ಐಆರ್ ಎನ್ನಲಾಗುತ್ತಿದೆ. ಕೇಂದ್ರದಲ್ಲಿ 14 ವರ್ಷಗಳಿಂದ ಅಧಿಕಾರ ನಡೆಸಿರುವ ಬಿಜೆಪಿ ನುಸುಳುಕೋರರನ್ನು ತಡೆಯುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ಎಸ್‌ಐಆರ್ ಜಾಗೃತಿ ಅಭಿಯಾನ: ಸಂವಿಧಾನ ಸಂರಕ್ಷಣಾ ಪಡೆಯ ಪ್ರಮುಖ ಸುಮೇಶ್ ಮಾತನಾಡಿ, ಜೂ.20ರಂದು ಬೆಂಗಳೂರು ತಲುಪುವಂತೆ ಬೀದರ್, ವಿಜಯ ಪುರ, ಉತ್ತರ ಕನ್ನಡ, ತುಮಕೂರು ಮತ್ತು ಉಡುಪಿ ಜಿಲ್ಲೆಯಿಂದ ಜಾಗೃತಿ ಅಭಿಯಾನ ಆರಂಭಗೊಂಡಿದೆ. ಉಡುಪಿಯಿಂದ ಆರಂಭಗೊಂಡ ಅಭಿಯಾನ ದಕ್ಷಿಣ ಕನ್ನಡವನ್ನು ಹಾದು ಇಂದು ಕೊಡಗಿಗೆ ಆಗಮಿಸಿದೆ. ಮುಂದೆ ಈ ಅಭಿಯಾನ ಹುಣಸೂರು, ಮೈಸೂರು, ಚಾಮರಾಜನಗರ, ಮಂಡ್ಯ ಮೂಲಕ ಬೆಂಗಳೂರಿಗೆ ತೆರಳಲಿದೆ ಎಂದು ಮಾಹಿತಿ ನೀಡಿದರು. ಜಾಗೃತಿ ಅಭಿಯಾನದಲ್ಲಿ ಪ್ರಗತಿಪರ ಒಕ್ಕೂಟದ ಖಲೀಲ್ ಬಾಷ, ಮನ್ಸೂರ್, ಮೇರಿ ವೇಗಾಸ್, ಅಲ್ಲಾರಂಡ ವಿಠಲ, ಹೇಮಂತ್, ಹೆಚ್.ಜೆ. ಪ್ರಕಾಶ್, ವೈ.ಎಂ. ಸುರೇಶ್ ಮೊದಲಾದವರಿದ್ದರು.



ಕೊಡಗಿಗೆ ಆಗಮಿಸಿದ ಎದ್ದೇಳು ಕರ್ನಾಟಕ ಆಂದೋಲನದ ಜಾಗೃತಿ ಅಭಿಯಾನದ ಸದಸ್ಯರು ಎಸ್‌ಐಆರ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ವಿಶ್ವಕಪ್ ಫಿಫಾ ಕಾಲ್ಚೆಂಡು ಪಂದ್ಯಾವಳಿಗೆ ಕೊಡಗಿನಲ್ಲಿ ವ್ಯಾಪಕ ಅಭಿಮಾನ



ಅಮ್ಮತ್ತಿಯಲ್ಲಿ ವಿದ್ಯಾರ್ಥಿಗಳು ವಿಶ್ವ ಫುಟ್ಬಾಲ್ ಆಟಗಾರರ ಬೃಹತ್ ಫ್ಲೆಕ್ಸ್‌ಗಳನ್ನು ನಿಲ್ಲಿಸಿ ಅಭಿಮಾನ ಮೆರೆದಿರುವುದು

ಮಡಿಕೇರಿ, ಜೂ.15–ವಿಶ್ವಕಪ್ ಫಿಫಾ ಕಾಲ್ಚೆಂಡು ಪಂದ್ಯಾವಳಿ ಜರುಗುತ್ತಿರುವ ನಡುವೆಯೇ ಕೊಡಗಿನಲ್ಲಿಯೂ ವಿವಿಧ ತಂಡಗಳು ಹಾಗೂ ತಮ್ಮ ನೆಚ್ಚಿನ ಆಟಗಾರರ ಪರವಾಗಿ ವ್ಯಾಪಕ ಅಭಿಮಾನ ವ್ಯಕ್ತವಾಗುತ್ತಿದೆ. ಬಹುತೇಕ ಎಲ್ಲಾ ತಂಡಗಳಿಗೆ ಅಭಿಮಾನಿಗಳು ಹುಟ್ಟಿಕೊಂಡಿದ್ದು ತಮ್ಮ ತಮ್ಮ ತಂಡಗಳಿಗೆ ಶುಭ ಹಾರೈಸುವ ಬ್ಯಾನರ್‌ಗಳು ವಿಶ್ವಕಪ್ ಫಿಫಾ ಪಂದ್ಯಾವಳಿಗೆ ಮತ್ತಷ್ಟು ರಂಗು ತುಂಬಿದೆ.

ಕೊಡಗಿನಲ್ಲಿ ತಿಂಗಳ ಕಾಲ ನಡೆಯುವ ಹಾಕಿ ನಮ್ಮೆ ಗಿನ್ನಿಸ್ ದಾಖಲೆ ಬರೆದಿದೆ. ವಿವಿಧ ಕಡೆಗಳಲ್ಲಿ ಫುಟ್ಬಾಲ್ ಪಂದ್ಯಾವಳಿ ಆಯೋಜನವ ಮೂಲಕ ಹೊಸ ಕ್ರೀಡಾ ಕ್ರಾಂತಿ ಕೊಡಗಿನಲ್ಲಿ ಆರಂಭವಾಗಿದೆ.

ಬ್ಯಾನರ್ ಅಳವಡಿಸಿ ಸಂಭ್ರಮ: ಸುಂಟಿಕೊಪ್ಪದ ಚೆಸ್ಕಾಂ ಕಚೇರಿ ಮುಂದೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 275 ಬದಿಯಲ್ಲಿ ಸುಮಾರು 150 ಅಡಿ ಉದ್ದ ಮತ್ತು 10 ಅಡಿ ಎತ್ತರದ ವಿವಿಧ ದೇಶಗಳ ಪುಟ್ಬಾಲ್ ಆಟಗಾರರ ಭಾವಚಿತ್ರಗಳನ್ನು ಅಳವಡಿಸಿ ಬೃಹತ್ ಫ್ಲೆಕ್ಸ್ ನಿರ್ಮಿಸಿ ಅಳವಡಿಸಲಾಗಿದೆ ಇದಕ್ಕಾಗಿ ಇಲ್ಲಿನ ಫುಟ್ಬಾಲ್ ಆಟದ ಅಭಿಮಾನಿಗಳು ಅಂದಾಜು ರೂ. 50 ಸಾವಿರಕ್ಕೂ ಅಧಿಕ ಹಣ ವ್ಯಯಿಸಿದ್ದು, ಸುಂಟಿಕೊಪ್ಪ ಹಿರಿಯ ಫುಟ್ಬಾಲ್ ಆಟಗಾರರಾದ ಮೊಯ್ದೀನ್‌ಜಾನ್ ಮತ್ತು ಅಬ್ದುಲ್ ರಹಿಮಾನ್ ಉದ್ಘಾಟಿಸಿದ್ದಾರೆ. ಈ ವೇಳೆ ತಮ್ಮ ನೆಚ್ಚಿನ ತಂಡಗಳು, ಆಟಗಾರರ ಪರವಾಗಿ ಜೈಕಾರ ಮೊಳಗಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ.

ಅಭಿಮಾನಿ ವಿದ್ಯಾರ್ಥಿಗಳು: ನಾವು ಯಾರಿಗೂ ಕಡಿಮೆ ಇಲ್ಲ ಎಂಬಂತೆ ಅಮ್ಮತ್ತಿಯ ಗುಡ್ ಶೆಫರ್ಡ್ ಪಿಯು ಕಾಲೇಜಿನಲ್ಲೂ ಫುಟ್ಬಾಲ್ ಕ್ರೀಡೆಯ ಅಭಿಮಾನಿ ವಿದ್ಯಾರ್ಥಿಗಳು ತಮ್ಮ ಅಭಿಮಾನದ ತಂಡಗಳ ಪರವಾಗಿ ಕಟ್ಟಡದ ಎತ್ತರದ ಬ್ಯಾನರ್‌ಗಳನ್ನು ವಿಶೇಷ ರೀತಿಯಲ್ಲಿ ತಯಾರಿಸಿದ್ದು, ಗುಡ್ ಶೆಫರ್ಡ್ ಸಂಸ್ಥೆ ಪ್ರಾಂಶುಪಾಲೆ ಸಿಸ್ಟರ್ ಪುಷ್ಪಲತಾ ಉದ್ಘಾಟಿಸಿದ್ದಾರೆ. ಸಂಸ್ಥೆ ಮುಖ್ಯಸ್ಥೆ ಸಿಸ್ಟರ್ ಮರಿಯಾ ತೇರೆಸಾ, ಸಿಸ್ಟರ್ ಲಿಸ್ಸಿ, ಪ್ರಾಧ್ಯಾಪಕಿ ಲಿಸ್ಸಿ, ಪ್ರಿಯಾಂಕ ಪೀಟರ್, ನೀತಿ ಹಾಗೂ ದೈಹಿಕ ತರಬೇತುದಾರ ನಿತಿನ್ ಹಾಗೂ ಕಾಲೇಜು ಸಿಬ್ಬಂದಿಗಳು ಪ್ರೇಕ್ಷಕರಾಗಿ ಹಾಜರಿದ್ದು, ವಿದ್ಯಾರ್ಥಿಗಳ ಜೊತೆಯಲ್ಲಿ ಸಂಭ್ರಮಿಸಿದ್ದಾರೆ.

'ಕೊಡಗಿನ ಕೋಲ್ಕತ್ತಾ' ಸುಂಟಿಕೊಪ್ಪ



ಸುಂಟಿಕೊಪ್ಪವನ್ನು ಫುಟ್ಬಾಲ್ ಆಟದ ಭೂಪಟದಲ್ಲಿ ಕೊಡಗಿನ ಕೋಲ್ಕತ್ತಾ ಎಂದೇ ಕರೆಯಲಾಗುತ್ತದೆ. ಈ ಪುಟ್ಟ ಪಟ್ಟಣದಲ್ಲಿ ಅದೆಷ್ಟೋ ಫುಟ್ಬಾಲ್ ಆಟಗಾರರನ್ನು ರಾಜ್ಯ ಮತ್ತು ರಾಷ್ಟ್ರ ತಂಡಗಳಿಗೆ ಕೊಡುಗೆಯಾಗಿ ನೀಡಿದೆ. ಪಟ್ಟಣದಲ್ಲಿ ಬಹಳಷ್ಟು ಮಂದಿ ಫುಟ್ಬಾಲ್ ಆಟಗಾರರಿದ್ದು, ಇತರ ಕ್ರೀಡೆಗಿಂತ ಫುಟ್ಬಾಲ್ ಆಟವನ್ನು ಅತಿಯಾಗಿ ಪ್ರೀತಿಸುವವರಿದ್ದಾರೆ. ಶಾಲಾ ಕಾಲೇಜು ವಿದ್ಯಾರ್ಥಿಗಳು, ಮಧ್ಯ ವಯಸ್ಸಿನ ಯುವಕರು, ಕೆಲಸಕ್ಕೆ ತೆರಳುವ ಕಾರ್ಮಿಕ ವರ್ಗ ಕೂಡ ಸಂಜೆ ವೇಳೆ ಅಥವಾ ರಜೆ ದಿನಗಳಲ್ಲಿ ಮಳೆ ಬಿಸಿಲಿನ ಲೆಕ್ಕವೇ ಇಲ್ಲದಂತೆ ಆಟದ ಮೈದಾನಗಳಲ್ಲಿ ಜೆರ್ಸಿ ತೊಟ್ಟು ಫುಟ್ಬಾಲ್ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಪಟ್ಟಣದ ವಿಶೇಷತೆಯಾಗಿದೆ. ಅಷ್ಟು ಮಾತ್ರವಲ್ಲದೇ ಇಂದಿಗೂ ವಿವಿಧ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಸುಂಟಿಕೊಪ್ಪದ ಆಟಗಾರರು ಸ್ಥಾನ ಪಡೆದಿದ್ದಾರೆ.

ಜೂ.18 ರಿಂದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ

ಚಾಮರಾಜನಗರ, ಜೂ.15– ನಗರದ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಕೆಂಪನಂಜಾಂಬಾ ಅಮ್ಮನವರ ಸಮೇತ ಶ್ರೀ ಚಾಮರಾಜೇಶ್ವರ ಸ್ವಾಮಿಯವರಿಗೆ ಬೆಳೆಯುತ್ತಾ ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ ಕಾರ್ಯಕ್ರಮವು ಜೂ.18 ರಿಂದ 23ರವರೆಗೆ ನಡೆಯಲಿದ್ದು, ಇದರ ಅಂಗವಾಗಿ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ.

ಜೂ.18ರಂದು ಸಂಜೆ 6 ಗಂಟೆಗೆ ಅನುಜ್ಞಾಪೂರ್ವಕ ಎಣ್ಣೆ ಅರಿಶಿನ ಪ್ರಧಾನ ನಂತರ ರಾತ್ರಿ 8 ಗಂಟೆಗೆ ಮಧುವಣ ಮಹೋತ್ಸವ, 19ರಂದು ಪಂಚಮಿ ಪ್ರಾತಃಕಾಲ 10 ಗಂಟೆಗೆ ಅಂಕುರಾರ್ಪಣ ಪೂರ್ವಕ ಕನ್ನಡಿ ಕಲಶ ತರುವುದು. ನಂತರ ಮಂಗಳಸ್ನಾನ ಬೆಳೆದು ನಾಂದಿ ನಡೆದು ಗ್ರಹಯಜ್ಞ ಪ್ರಾರಂಭವಾಗಿ ಸಂಜೆ 5 ಗಂಟೆಗೆ ಕಾಶಿಯಾತ್ರೆ ಮಹೋತ್ಸವವು ಬೆಳೆಯುತ್ತದೆ. ಅನಂತರ ರಾತ್ರಿ 8 ರಿಂದ 8.36 ಗಂಟೆಯವರೆಗೆ ಸಲ್ಲುವ ಶುಭ ಧನುರ್ ಲಗ್ನದಲ್ಲಿ ಅಕ್ಷತಾರೋಪಣೆ, ಧಾರಾಮಹೋತ್ಸವ, ಪ್ರಧಾನ ಹೋಮ, ಮಹಾಮಂಗಳಾರತಿ ನಡೆಯಲಿದೆ.

ಜೂ.20ರಂದು ಷಷ್ಠಿ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಉಯ್ಯಾಲೋತ್ಸವ, 21 ರಂದು ಸಪ್ತಮಿ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಪಾಕಿನಿ ಮಹೋತ್ಸವವೂ ಇತ್ಯಾದಿ ಕಾರ್ಯಕ್ರಮಗಳು ನಡೆಯಲಿದೆ. 22 ರಂದು ಅಷ್ಟಮಿ ಪ್ರಾತಃಕಾಲ ಔಪಾಸನೆ ಉರುಟಣೆ ಉಯ್ಯಾಲೋತ್ಸವವು ರಾತ್ರಿ ಔಪಾಸನೆ ಶೇಷಹೋಮ, ನಾಕಬಲಿ, ಹೋಳಲು ಸುತ್ತುವುದು ಗಜಾರೋಹಣ ಪೂಜೆ, ಗೃಹಪ್ರವೇಶ ಮಹೋತ್ಸವ ಹಾಗೂ 23ರಂದು ನವಮಿ ಪ್ರಾತಃಕಾಲ ದೇವತಾ ಉದ್ವಾಸನೆ, ವಿವಾಹ ದೀಕ್ಷಾ ವಿಸರ್ಜನೆ ಅನಂತರ ಸ್ಥಂಭ ಪೂಜಾ ರಾತ್ರಿ ಪುಷ್ಪಾಂದೋಳಿಕೋತ್ಸವ, ಶಯನೋತ್ಸವವೂ ನಡೆಯುತ್ತದೆ.

ಪ್ರತಿದಿನ ಸಂಜೆ ಸಂಗೀತ, ಹರಿಕಥೆ, ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಇಂದು ಕೆಲಸೂರು ಗ್ರಾಮದಲ್ಲಿ ಉಚಿತ ಆರೋಗ್ಯ ಮೇಳ

ಚಾಮರಾಜನಗರ, ಜೂ.15 – ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಚಾಮರಾಜನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೆಲಸೂರು ಗ್ರಾಮ ಪಂಚಾಯಿತಿ, ಹೆಲ್ಪ್ ಏಜ್ ಇಂಡಿಯಾ, ಜನಮಿತ್ರ ಸೇವಾ ಟ್ರಸ್ಟ್ ಮತ್ತು ಚೈತನ್ಯ ನೆಟ್ ವರ್ಕ್ ಹಾಗೂ ಮೈಸೂರಿನ ಕ್ಲೆಯರಮಡಿ ರೇಡಿಯಂಟ್ ಹಾಸ್ಪಿಟಲ್ ಮತ್ತು ಸ್ಪಂದನಾ ಹಾಸ್ಪಿಟಲ್ ಇವರ ಸಹಯೋಗದಲ್ಲಿ ಉಚಿತ ಬೃಹತ್ ಆರೋಗ್ಯ ಮೇಳವನ್ನು ಜೂನ್ 16ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಗುಂಡ್ಲುಪೇಟೆ ತಾಲೂಕಿನ ಕೆಲಸೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ಏರ್ಪಡಿಸಲಾಗಿದೆ.

ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಆರೋಗ್ಯ ಮೇಳಕ್ಕೆ ಚಾಲನೆ ನೀಡುವರು. ಕೆಲಸೂರು ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿ ಮಾದೇವ ಪ್ರಸಾದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಎ.ಆರ್.ಕೃಷ್ಣಮೂರ್ತಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಅಭಿಮಾನಿಗಳಿಂದ ಪ್ರತಿಭಟನೆ

ಕೊಳ್ಳೇಗಾಲ, ಜೂ.15– ಕೊಳ್ಳೇಗಾಲ ಕ್ಷೇತ್ರದ ಶಾಸಕರೂ, ಸಜ್ಜನ ರಾಜಕಾರಣಿಗಳೂ ಆದ ಎ.ಆರ್.ಕೃಷ್ಣಮೂರ್ತಿ ಅವರಿಗೆ ಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಎ.ಆರ್.ಕೆ ಅಭಿಮಾನಿ ಬಳಗದ ವತಿಯಿಂದ ಸೋಮವಾರ ಬೈಕ್ ರ್ಯಾಲಿ ನಡೆಸಿ, ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಲಾಯಿತು.

ತಾಲೂಕಿನ ಉತ್ತಂಬಳ್ಳಿ ಗ್ರಾಮದಿಂದ ಮುಡಿಗುಂಡ, ಪಾಪನಗರದ ಮೂಲಕ ಕೊಳ್ಳೇಗಾಲದ ಅಂಬೇಡ್ಕರ್ ವೃತ್ತದವರೆಗೂ ಬೈಕ್ ರ್ಯಾಲಿಯನ್ನು ರಾಜ್ಯ ಯುವ ಕಾಂಗ್ರೆಸ್ ಕಾರ್ಯದರ್ಶಿ ಚೇತನ್ ದೊರೆರಾಜು ನೇತೃತ್ವದಲ್ಲಿ ನಡೆಯಿತು.

ಮೊದಲಿಗೆ ಉತ್ತಂಬಳ್ಳಿ ಬಳಿ ನಡೆದ ಬೈಕ್ ರ್ಯಾಲಿಗೆ ಚೇತನ್ ದೊರೆರಾಜು ಚಾಲನೆ ನೀಡಿ ಮಾತನಾಡಿ, ಎಆರ್ ಕೃಷ್ಣಮೂರ್ತಿ ಅವರು ಜನಪರ ರಾಜಕಾರಣಿ, ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ, ಅಭಿವೃದ್ಧಿಗಾಗಿ 580 ಕೋಟಿ ಅನುದಾನ ತರುವ ಮೂಲಕ ಹಗಲಿರುಳು ಶ್ರಮಿಸುತ್ತಿದ್ದಾರೆ. ಇದನ್ನ ಮನಗಂಡು ಹೈಕಮಾಂಡ್ ಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ಹಿರಿಯ ಮುಖಂಡ ದುಗ್ಗಟ್ಟಿ ಮಾದೇಶ್, ಅಭಿಮಾನಿ ಸಂಘದ ಅಧ್ಯಕ್ಷ ಕಂದಳ್ಳಿ ನಂಜುಂಡಸ್ವಾಮಿ ಮಾತನಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಪ್ರಧಾನ ಕಾರ್ಯದರ್ಶಿ ಬಸ್ತೀಪುರ ರವಿ, ಯಳಂದೂರು ಆರೋಗ್ಯ ರಕ್ಷಾ ಸಮಿತಿ ಸದಸ್ಯ ದುಗ್ಗಟ್ಟಿ ಮಾದೇಶ್, ನಗರಸಭೆ ನಾಮ ನಿರ್ದೇಶಿತ ಸದಸ್ಯ ಅನ್ಸರ್ ಬೇಗ್, ದೇವಾನಂದ, ಸ್ವಾಮಿ ನಂಜಪ್ಪ ಮುಖಂಡರಾದ ಚೆನ್ನಸ್ವಾಮಿ ಮಾಳಿಗೆ, ಹರಳೆ ನಾಗರಾಜು, ಗೊಬ್ಬಳಿಪುರ ರಾಚಯ್ಯ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಜೇಂದ್ರ, ಹನೂರು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಮಾದೇಶ್, ಯುತ್ ಕಾಂಗ್ರೆಸ್ ಉಪಾಧ್ಯಕ್ಷ ಶಿವರಾಜು, ಮದ್ದೂರು ಶಿವಮೂರ್ತಿ, ಮದ್ದೂರು ಇನ್ನಿತರಿದ್ದರು.



ಅಂಬೇಡ್ಕರ್ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸುತ್ತಿರುವುದು.

ಬಾಗಳಿ ಗ್ರಾಮದ ಜಮೀನಿನಲ್ಲಿ ಹುಲಿ ಪ್ರತ್ಯಕ್ಷ

ರೈತನ ಎದುರು ನಿಂತು ನೋಡಿ ಏನೂ ಮಾಡದೆ ಜಾಗ ಖಾಲಿ ಮಾಡಿದ ಹುಲಿ



ಚಾಮರಾಜನಗರ, ಜೂ.15– ತಾಲೂಕಿನ ಬಾಗಳಿ ಗ್ರಾಮದ ಜಮೀನಿನೊಂದರಲ್ಲಿ ಹುಲಿ ಕಾಣಿಸಿಕೊಂಡಿದ್ದು ರೈತರಲ್ಲಿ ಆತಂಕ ಮೂಡಿಸಿದೆ.

ಬಾಗಳಿ ಗ್ರಾಮದ ನಿವಾಸಿ ಪುಟ್ಟಯ್ಯ ಅವರು ಬೆಳಗ್ಗೆ ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ವೇಳೆ ಹುಲಿಯೊಂದು ಅವರ ಬಳಿ ಬಂದಿದೆ ಎನ್ನಲಾಗಿದ್ದು ಹುಲಿಯನ್ನು ಕಂಡ ಪುಟ್ಟಯ್ಯ ಗಾಬರಿಗೊಂಡು ಸ್ಥಳದಲ್ಲೇ ನಿಂತಿದ್ದಾರೆ. ಕೆಲ ಕ್ಷಣ ರೈತನನ್ನು ನೋಡಿದ ಹುಲಿ ಬಳಿಕ ಯಾವುದೇ ಹಾನಿ ಮಾಡದೆ ಸಮೀಪದ ಕಬ್ಬಿನ ಗದ್ದೆಯೊಳಗೆ ತೆರಳಿದೆ. ಬಳಿಕ ರೈತ ಪುಟ್ಟಯ್ಯ ಪಕ್ಕದಲ್ಲಿಯೇ ಇದ್ದ ಮರದ ಮೇಲೆ ಹತ್ತಿ ನಂತರ ತನ್ನ ಮೊಬೈಲ್‌ನಲ್ಲಿ ಹುಲಿ ಓಡುವ ವಿಡಿಯೋ ಮಾಡಿದ್ದಾನೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಗ್ರಾಮಸ್ಥರು ಎಚ್ಚರಿಕೆಯಿಂದ ಇರಬೇಕು ಎಂದು ಸೂಚಿಸಿದ್ದಾರೆ.

ಹುಲಿ ಕಾಣಿಸಿಕೊಂಡಿರುವುದು ಗ್ರಾಮಸ್ಥರು ಹಾಗೂ ರೈತರಲ್ಲಿ ಆತಂಕ ಮೂಡಿಸಿದೆ. ಕೂಡಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಹುಲಿಯನ್ನು ಸೆರೆ ಹಿಡಿಯಬೇಕು ಎಂದು ಮುಖಂಡ ಬಾಗಳಿ ರೇವಣ್ಣ ಆಗ್ರಹಿಸಿದ್ದಾರೆ.

11ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ: ಜಿಲ್ಲೆಯ ಹೊಂಡರಬಾಳುವಿನಲ್ಲಿರುವ ಜವಾಹರ ನವೋದಯ ವಿದ್ಯಾಲಯದಲ್ಲಿ 2026–27ನೇ ಸಾಲಿನ 11ನೇ ತರಗತಿ ದಾಖಲಾತಿಗೆ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ನೇರ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಮೀಸಲಾತಿಯು ಕೇಂದ್ರ ಸರ್ಕಾರದ ನಿಯಮದಂತೆ ಅನ್ವಯವಾಗಲಿದೆ. ಅಭ್ಯರ್ಥಿಗಳು ಆಫ್‌ಲೈನ್ ಮೂಲಕ ಉಚಿತವಾಗಿ ಜೂ.25ರೊಳಗೆ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಅರ್ಜಿ ಸಲ್ಲಿಸಲು ಅರ್ಜಿ ಪ್ರತಿಗಳನ್ನು ಅಭ್ಯರ್ಥಿಗಳು https://drive.google.com/file/d/1LgeM3unZ5rhQEcC-Ob03DgdyVwKKFwh/view?usp=sharing ವೆಬ್‌ಸೈಟ್ ಮೂಲಕ ಹಾಗೂ ಶಾಲಾ ಕಚೇರಿಯಲ್ಲೂ ಅರ್ಜಿ ಪ್ರತಿಯನ್ನು ಉಚಿತವಾಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ದೂ.ಸಂ. 9008259934, 9495246505 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ಗ್ರಾಮಸ್ಥರಿಂದ ಮನವಿ

ಚಾಮರಾಜನಗರ: ತಾಲೂಕಿನ ಬಡಗಲಪುರ, ಲಕ್ಷ್ಮೀಪುರ, ಸಾಣೇಗಾಲ, ಬೊಕ್ಕೇಪುರ, ಮಹದೇಶ್ವರ ಕಾಲೋನಿಯ ಭಾಗಕ್ಕೆ ಲೈನ್ ಮ್ಯಾನ್ ನೇಮಕ ಮಾಡಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿ ಗ್ರಾಮದ ರೈತರು ಹರದನಹಳ್ಳಿಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಉಪ ವಿಭಾಗಕ್ಕೆ ತೆರಳಿ ಜೆಇ ಪ್ರದೀಪ್ ಅವರಿಗೆ ಮನವಿ ಸಲ್ಲಿಸಿದರು.

ನಮ್ಮ ಗ್ರಾಮಗಳಿಗೆ ವಿದ್ಯುತ್ ಅಸಮರ್ಪಕ ಸರಬರಾಜಿನಿಂದ ರೈತರ ಬದುಕು ದುಸ್ತರವಾಗಿದ್ದು, ಅಲ್ಲದೇ ವಿದ್ಯಾರ್ಥಿಗಳು, ಸಾರ್ವಜನಿಕರು ಪರದಾಡುವಂತಾಗಿದೆ. ಕೂಡಲೇ ಲೈನ್ ಮ್ಯಾನ್ ನೇಮಕ ಮಾಡಿ ನಮ್ಮ ಗ್ರಾಮಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡಬೇಕು ಇಲ್ಲದಿದ್ದರೆ ಗ್ರಾಮಸ್ಥರೊಂದಿಗೆ ನಿಮ್ಮ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಜೆಇಗೆ ಗ್ರಾಮಸ್ಥರು ಸಲ್ಲಿಸಿರುವ ಮನವಿಯಲ್ಲಿ ರೈತ ಮುಖಂಡರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಾಘು,ರವಿ, ಕುಮಾರ್, ದೊಡ್ಡಮಾದೇಗೌಡ,ಸುದಿ, ಸಿದ್ದರಾಜು, ರಾಜೇಶ್, ನಾಗರಾಜು, ಗುರುಸ್ವಾಮಿ, ಬಿಂದುದಾಸ್, ನಾಗೇಶ್, ಕಿರಣ್, ಸಿದ್ದೇಗೌಡ, ನೀಲಕಂಠ, ಮುತ್ತುರಾಜು, ಮಹೇಶ್, ಮಂಜುನಾಥ್, ಮಹೇಶ್ ಇತರರು ಹಾಜರಿದ್ದರು.

ನಾಳೆ ಚಾ.ನಗರಕ್ಕೆ ಎಸ್‌ಐಆರ್ ವಿರೋಧಿ ಜಾಥಾ

ವಿವಿಧೆಡೆ ಸಭೆ ಆಯೋಜನೆ; ರಾಜ್ಯಸರ್ಕಾರಕ್ಕೆ ಹಕ್ಕೊತ್ತಾಯ ಮಂಡನೆ

ಚಾಮರಾಜನಗರ: ಇದೇ ಜೂ.30 ರಿಂದ ಆರಂಭವಾಗಲಿರುವ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ವಿರೋಧಿಸಿ ಜೂ.17ರಂದು ನಂಜನಗೂಡು ಮಾರ್ಗ ಚಾಮರಾಜನಗರಕ್ಕೆ ಎಸ್‌ಐಆರ್ ವಿರೋಧಿ ಜಾಗೃತಿ ಜಾಥಾ ಆಗಮಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಎಸ್‌ಐಆರ್ ವಿರೋಧಿ, ಜಾತ್ಯಾತೀತ ಪಕ್ಷ ಜನಪರ ಸಂಘಟನೆಗಳ ಒಕ್ಕೂಟ ಜಿಲ್ಲಾ ಸಂಚಾಲಕ ಕೆ.ವೆಂಕಟರಾಜು ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶಕ್ಕೆ ಅಕ್ರಮವಾಗಿ ನುಸುಳುಕೋರರನ್ನು ತಡೆಗಟ್ಟುವ ಸಲುವಾಗಿ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಭಾರತದ ಚುನಾವಣಾ ಆಯೋಗ ಹೇಳಿದೆ. ಈವರೆಗೆ ಸುಮಾರು 6.5 ಕೋಟಿ ಮತದಾರರನ್ನು ಕೈಬಿಡಲಾಗಿದೆ ಎಂದರು. ಮತದಾನದ ಪಟ್ಟಿಯಲ್ಲಿ ಕೈಬಿಟ್ಟಿರುವವರು ನುಸುಳುಕೋರರೇ ಎಂಬ ಪ್ರಶ್ನೆಗೆ ಚುನಾವಣಾ ಆಯೋಗದಿಂದ ಉತ್ತರವಿಲ್ಲ.

ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಸಂಬಂಧ ವಿಶೇಷ ಅಧಿವೇಶನ ಕರೆದು, ದಿಟ್ಟ ನಿರ್ಧಾರ ಕೈಗೊಳ್ಳಬೇಕು, ಎಲ್ಲ ಗ್ರಾಮ ಪಂಚಾಯಿತಿ ಹಾಗೂ ವಾರ್ಡ್‌ಗಳಲ್ಲಿ ಮತದಾನದ ನೆರವು ಕೇಂದ್ರಗಳನ್ನು ತೆರೆಯಬೇಕು, ಅರ್ಹ ಮತದಾರರಿಗೆ ಗ್ಯಾರಂಟಿಯಾಗಿ ಸ್ಮಾರ್ಟ್ ಕಾರ್ಡ್ ವಿತರಿಸಬೇಕು, ಎಸ್‌ಐಆರ್ ಕೇಳುವ ದಾಖಲೆಗಳಿಲ್ಲದ ಅರ್ಹ ಮತದಾರರಿಗೆ ಸ್ಥಳದಲ್ಲೇ ಅಗತ್ಯ ದಾಖಲೆಗಳನ್ನು ಒದಗಿಸಬೇಕು, ಯಾರೊಬ್ಬರು ಮತದಾನದಿಂದ ವಂಚಿತರಾಗಬಾರದು ಎಂಬುದೇ ಜನಪರ ಸಂಘಟನೆಗಳ ಒಕ್ಕೂಟದ ಉದ್ದೇಶವಾಗಿದೆ. ಜೂ.17ರಂದು ನಗರಕ್ಕೆ ಆಗಮಿಸುವ ಎಸ್‌ಐಆರ್ ವಿರೋಧಿ ಜಾಥಾ ಕೊಳ್ಳೇಗಾಲ, ಮಳವಳ್ಳಿ, ಮಂಡ್ಯ ತಲುಪಲಿದೆ ಎಂದರು.

ಈಗಾಗಲೇ ರಾಜ್ಯದಲ್ಲಿ ಎಲ್ಲ ಪ್ರಗತಿಪರ ಸಂಘಟನೆಗಳು, ಜಾತ್ಯಾತೀತ ಪಕ್ಷಗಳು ಸೇರಿ' ಎಸ್‌ಐಆರ್ ವಿರೋಧಿ ಕರ್ನಾಟಕ' ವಿಶಾಲವೇದಿಕೆ ರೂಪುಗೊಂಡಿದ್ದು, ಅದರ ಭಾಗವಾಗಿ ಜೂ.13ರಿಂದ 18ರವರೆಗೆ 5 ಮಾರ್ಗಗಳಲ್ಲಿ ರಾಜ್ಯವ್ಯಾಪಿ ಜನಜಾಗೃತಿ ಅಭಿಯಾನ ಆರಂಭಗೊಂಡಿದೆ ಇದರ ಸಮಾರೋಪದ ಅಂಗವಾಗಿ ಜೂ.20ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ ಎಂದರು.

ಇಂದು ಕಾರ್ಯಾಗಾರ; ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮಾತನಾಡಿ, ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಸಂಬಂಧ ಚಾಮರಾಜನಗರ ವಿಧಾನಸಭೆ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ 239 ಬೂತ್‌ಗಳಿಗೆ ಏಜೆಂಟರನ್ನು ನೇಮಕ ಮಾಡಿದ್ದು, ಇದರ ಅಂಗವಾಗಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜೂ.16ರಂದು ಬೆಳಗ್ಗೆ 11ಕ್ಕೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

ಗೋಷ್ಠಿಯಲ್ಲಿ ಎಸ್‌ಡಿಪಿಐ ರಾಜ್ಯಸಮಿತಿ ಕಾರ್ಯದರ್ಶಿ ಅಬ್ರಾರ್ ಅಹಮದ್, ಅಂಬೇಡ್ಕರ್ ಸಂಘದ ಅಧ್ಯಕ್ಷ ಪಿ.ಸಂಘಸೇನಾ, ಕುಮಾರ್, ಮಾದಾಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರೂಪೇಶ್, ಭೈರಲಿಂಗಸ್ವಾಮಿ ಹಾಜರಿದ್ದರು.



ಕ್ಯಾಂಟೀನ್ ತೆರವು

ಗುಂಡ್ಲುಪೇಟೆ ಪಟ್ಟಣದ ಸಾರ್ವಜನಿಕ ಗ್ರಂಥಾಲಯದ ಮುಂಭಾಗದಲ್ಲಿ ಇದ್ದ ಕ್ಯಾಂಟೀನ್‌ಗಳು ಹಾಗೂ ತಳ್ಳುವ ಗಾಡಿ ಅಂಗಡಿಗಳನ್ನು ಪುರಸಭೆ ಮುಖ್ಯಾಧಿಕಾರಿ ಶರವಣ ಅವರ ನೇತೃತ್ವದಲ್ಲಿ ತೆರವುಗೊಳಿಸಲಾಯಿತು. ಗ್ರಂಥಾಲಯಕ್ಕೆ ಬರುವ ಓದುಗರಿಗೆ ಈ ಮಾಂಸಹಾರಿ ಕ್ಯಾಂಟೀನ್‌ಗಳು ಮತ್ತು ತಳ್ಳುವ ಗಾಡಿಯಿಂದ ಬರುವ ದುರ್ನಾತ ಹಾಗೂ ತ್ಯಾಜ್ಯಗಳಿಂದ ಕಿರಿಕಿರಿಯಾಗುತ್ತಿತ್ತು. ಇದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಮಿತ್ರ

ಎಲ್ಲಾ ಜಿಲ್ಲೆಗಳಲ್ಲೂ ಬಿತ್ತನೆ ಬೀಜ, ರಸಗೊಬ್ಬರ ಪೂರೈಸಿ

- ಕೃಷಿ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ
- ಕೃಷಿ ಹೊಂಡಗಳಲ್ಲಿ ದುರಂತ ತಡೆಗೆ ಬೇಲಿ ನಿರ್ಮಿಸಲು ಕ್ರಮ ಕೈಗೊಳ್ಳಿ



ಬೆಂಗಳೂರು, ಜೂ.15(ಕೆಎಂಶಿ)– ಮುಂಗಾರು ಹಂಗಾಮಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಬಿತ್ತನೆ ಬೀಜ, ರಸಗೊಬ್ಬರ ಸಮರ್ಪಕ ಪೂರೈಕೆ ಖಾತರಿಗೆ ಗಮನಹರಿಸುವಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದ್ದಾರೆ.

ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ರಾಜ್ಯದಲ್ಲಿ ಎದುರಾಗ ಬಹುದಾದ ಅತಿವೃಷ್ಟಿ ಮತ್ತು ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವ ಸಿದ್ಧತೆಗೆ ಗಮನಹರಿಸುವಂತೆ ಸಲಹೆ ನೀಡಿದರು.

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸದ್ಯ ರಸಗೊಬ್ಬರಕ್ಕೆ ಅಭಾವ ಉಂಟಾಗಿದೆ ಎಂಬ ವರದಿಗಳಿವೆ ಅದೇ ರೀತಿ ಬಿತ್ತನೆ ಬೀಜದ ಕೊರತೆ ಇದೆ ಎಂಬ ಮಾಹಿತಿಗಳು ಬರುತ್ತಿವೆ. ಇದನ್ನು ಪರಿಶೀಲಿಸಿ ರೈತರಿಗೆ ಯಾವುದೇ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಕ್ರಿಮಿನಾಶಕ ಮತ್ತಿತರ ಔಷಧ ಸಿಂಪಡಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಿ ಎಂದು ನಿರ್ದೇಶನ ನೀಡಿದರು.

ಇತ್ತೀಚೆಗೆ ರಾಜ್ಯದ ಹಲವೆಡೆ ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಇದಕ್ಕೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಿ ಎಂದು ಹೇಳಿದರು.

ಈ ವಿಚಾರದಲ್ಲಿ ಇತರೆ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತನ್ನಿ. ಡ್ರೋನ್, ಕೃತಕ ಬುದ್ಧಿಮತ್ತೆ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ.

ಪ್ರಕೃತಿ ವೈಪರೀತ್ಯಗಳಿಂದ ರೈತರ ಕೃಷಿ ಚಟುವಟಿಕೆಗಳಿಗೆ ತೊಂದರೆ ಆಗದಂತೆ ಕ್ರಮ ವಹಿಸಿ ಎಂದು ತಾಕೀತು ಮಾಡಿದರು. ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಿ.ಪ್ರಾಥಮಿಕ ಕೃಷಿ ಜತೆ ಸೆಕೆಂಡರಿ ಕೃಷಿ ಸೇರಿದಂತೆ ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಿ ಎಂದು ತಿಳಿಸಿದರು.

ವರದಿ ನೀಡಿ: ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ನೀಡಿ ಎಂದು ಅಧಿಕಾರಿಗಳಿಗೆ ಸೂಚಿಸಿದ ಅವರು ಇದರಲ್ಲಿ ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ಉಲ್ಲೇಖಿಸುವಂತೆ ಸಲಹೆ ನೀಡಿದರು. ರಾಜ್ಯದಲ್ಲಿರುವ ಕೋಲ್ಡ್ ಸ್ಟೋರೇಜ್ ಮತ್ತು ಗೋದಾಮುಗಳ ಬಗ್ಗೆ ಪಟ್ಟಿ ಕೊಡಿ. ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ವರದಿ ನೀಡಿ. ಕೆಪೆಕ್ ಮೂಲಕ ರಫ್ತು ಎಷ್ಟು ಹೆಚ್ಚಾಗಿದೆ. ರಫ್ತು ಉತ್ತೇಜಿಸಲು ಏನೇನು ಕ್ರಮ ತೆಗೆದುಕೊಂಡಿದ್ದೀರಿ?

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೇರಿದ ಜಾಗಗಳು ಸುರಕ್ಷಿತವಾಗಿರಬೇಕು. ಕಾಂಪೌಂಡ್ ಹಾಕಿಸಿ ಈ ಬಗ್ಗೆ ಕ್ರಮ ಕೈಗೊಳ್ಳಿ.ಸಹಕಾರ ಇಲಾಖೆ ಅಡಿಯಲ್ಲಿ ಯಾವ್ಯಾವ ಸಂಸ್ಥೆಗಳಿಗೆ ಚುನಾವಣೆ ಆಗಬೇಕಿದೆಯೋ ಎಲ್ಲದಕ್ಕೂ ಚುನಾವಣೆ ಮಾಡಿ ಎಂದು ಸೂಚಿಸಿದರು.

ಕಾಸ್ಕಾರ್ಡ್ ಬ್ಯಾಂಕ್‌ಗಳು ಕೊಡುವ ಬಡ್ಡಿ ರಹಿತ ಸಾಲದ ಸೌಲಭ್ಯ, ಅಗತ್ಯವಿರುವವರಿಗೆ ತಲುಪುತ್ತಿಲ್ಲ. ಬ್ಯಾಂಕ್‌ನವರೇ ತಮಗೆ ಬೇಕಾದವರ ಹೆಸರಲ್ಲಿ ಸಾಲ ಪಡೆಯುತ್ತಿದ್ದಾರೆ. ರೈತರಿಗೆ ವಂಚನೆ ಆಗಲು ಬಿಡಬಾರದು. 5 ಲಕ್ಷದವರೆಗೂ ಬಡ್ಡಿ ರಹಿತ ಸಾಲ ಸೌಲಭ್ಯ ದುರುಪಯೋಗ ಆಗುತ್ತಿರುವ ಬಗ್ಗೆ ರೈತರು ನನ್ನ ಬಳಿ ಬಂದು ದೂರುತ್ತಿದ್ದಾರೆ. ಇದಕ್ಕೆ ಕಟ್ಟುನಿಟ್ಟಿನ ಬ್ರೇಕ್ ಹಾಕಬೇಕು. ಅಗತ್ಯ ಇರುವ ಫಲಾನುಭವಿಗಳಿಗೆ ಸಾಲ ಸವಲತ್ತು ತಲುಪುವಂತೆ ನೋಡಿಕೊಳ್ಳಿ ಎಂದು ಹೇಳಿದರು.

ಕೇಂದ್ರದಿಂದಾಗಿ ರಸಗೊಬ್ಬರ ಕೊರತೆ

ಮಾಜಿ ಕೃಷಿ ಸಚಿವ ಚಲುವರಾಯಸ್ವಾಮಿ ಆರೋಪ

ಬೆಂಗಳೂರು, ಜೂ.15(ಕೆಎಂಶಿ)– ಕೇಂದ್ರ ಸರ್ಕಾರದ ನೀತಿಯಿಂದಾಗಿ ರಾಜ್ಯದಲ್ಲಿ ರಸಗೊಬ್ಬರ ಅಭಾವ ಉಂಟಾಗಿದೆ. ಆದರೆ ಈ ವಿಚಾರದಲ್ಲಿ ವಿಪಕ್ಷಗಳು ದ್ವಂದ್ವ ರಾಜಕಾರಣ ಮಾಡುತ್ತಿವೆ ಎಂದು ಮಾಜಿ ಸಚಿವ ಚಲುವರಾಯಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕಳೆದ ಎರಡು ವರ್ಷಗಳಿಂದಲೇ ಸಾವಯವ ಗೊಬ್ಬರ ಬಳಕೆಗೆ ರಾಜ್ಯ ಸರ್ಕಾರ ಒತ್ತು ನೀಡಿತ್ತು. ಆಗ ಇದೇ ವಿಪಕ್ಷಗಳು 'ಬರೀ ಸಾವಯವದಿಂದ ರೈತ ಬದುಕಲ್ಲ' ಅಂತ ಟೀಕೆ ಮಾಡಿದವು. ಈಗ ಪ್ರಧಾನಿ ಮೋದಿಯವರೇ ಸಾವಯವ ಗೊಬ್ಬರ ಬಳಸಿ ಎಂದು ಹೇಳುತ್ತಿದ್ದಾರೆ. ಈಗ ಅಶೋಕ್, ವಿಜಯೇಂದ್ರ ಏನು ಹೇಳುತ್ತಾರೆ. ಕೇಂದ್ರವನ್ನು ಟೀಕೆ ಮಾಡುತ್ತಾರಾ ಅಥವಾ ಹೊಗಳುತ್ತಾರಾ ನೋಡಬೇಕು ಎಂದು ಪ್ರಶ್ನಿಸಿದರು.

ನಾನು ಕೃಷಿ ಸಚಿವನಾಗಿದ್ದಾಗಲೇ ಡಿಸಿ, ಸಿಇಒಗಳಿಗೆ ರೈತರಿಗೆ ಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಿ ಎಂದು ಸೂಚನೆ ನೀಡಿದ್ದೆ. ಆ ಸೂಚನೆಗಳನ್ನು ಅಧಿಕಾರಿಗಳು ಈಗಲೂ ಪಾಲಿಸುತ್ತಿದ್ದಾರೆ. ಈಗ ಸಿಎಂ ಡಿ.ಕೆ. ಶಿವಕುಮಾರ್ ಅವರು ಕೂಡ ಅದೇ ಸೂಚನೆ ನೀಡಿದ್ದಾರೆ. ವಿಪಕ್ಷಗಳು ಇದನ್ನು ದೊಡ್ಡದಾಗಿ ಬಿಂಬಿಸಿ ರೈತರಲ್ಲಿ ಆತಂಕ ಸೃಷ್ಟಿಸಬಾರದು ಎಂದು ಮನವಿ ಮಾಡಿದರು.

ಪ್ರತಿ ಪಕ್ಷದ ನಾಯಕ ಅಶೋಕ್ ಅವರು ತಮ್ಮ ಸ್ಥಾನ ಉಳಿಸಿಕೊಳ್ಳಲು ದಿನಾ ಒಂದೊಂದು ಪ್ರದರ್ಶನ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಪದಗ್ರಹಣ ಮಾಡಿದಾಗಿನಿಂದಲೇ ಅಶೋಕ್ ನಾಲಿಗೆ ಹರಿಬಿಡುತ್ತಿದ್ದಾರೆ. ಅಶೋಕ್ ತಮ್ಮ ಭಾಷೆ ಹಿಡಿತದಲ್ಲಿಟ್ಟು ಮಾತಾಡಿದರೆ ಒಳ್ಳೆಯದು. ನಿಮಗೆ ಮುಂದೆ ಅವಕಾಶ ಸಿಗುತ್ತೋ ಇಲ್ವೋ ಅದು ನಿಮ್ಮ ಪಕ್ಷದ ವಿಚಾರ ಎಂದು ಟಾಂಗ್ ನೀಡಿದರು.

ಅಮೆರಿಕ–ಇರಾನ್ ಶಾಂತಿ ಒಪ್ಪಂದ

ಜಿನೀವಾದಲ್ಲಿ ಸಮಾರಂಭ ಆಯೋಜಿಸಿದ ಪಾಕಿಸ್ತಾನ



ಇಸ್ಲಾಮಾಬಾದ್, ಜೂ.15– ಪಾಕಿಸ್ತಾನವು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಸಮಾರಂಭವನ್ನು ಆಯೋಜಿಸಲಿದೆ ಎಂದು ಸೋಮವಾರ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ಇಂದು ರಾಷ್ಟ್ರೀಯ ಅಸೆಂಬ್ಲಿಗೆ ಜಾಗತಿಕ ಇಂಧನ ಬಿಕ್ಕಟ್ಟಿಗೆ ಕಾರಣವಾದ ಸಂಘರ್ಷವನ್ನು ಕೊನೆಗೊಳಿಸಲು ಪಾಕಿಸ್ತಾನದ ಪ್ರಯತ್ನಗಳನ್ನು ವಿವರಿಸಿದ ಷರೀಫ್ ಅವರು, ಇದು ಎರಡು ದೇಶಗಳ ನಡುವಿನ ಒಪ್ಪಂದವಲ್ಲ. ಇದು ಶಾಂತಿ ಮತ್ತು ಮಾತುಕತೆಯ ಯಶಸ್ಸು – ರಾಜತಾಂತ್ರಿಕ ಯಶಸ್ಸು ಎಂದು ಬಣ್ಣಿಸಿದರು.

ಅಮೆರಿಕ–ಇರಾನ್ ಶಾಂತಿ ಒಪ್ಪಂದ ಐತಿಹಾಸಿಕ ಮೈಲಿಗಲ್ಲು ಎಂದು ಕರೆದ ಶೆಹಬಾಜ್ ಷರೀಫ್ ಅವರು, ಮೂರು ತಿಂಗಳು ಮತ್ತು 16 ದಿನಗಳ ನಿರಂತರ ಪ್ರಯತ್ನಗಳ ನಂತರ ಇದು ಹೊಸ ಉದಯಕ್ಕೆ ನಾಂದಿ ಹಾಡಿತು. ಇದು ಲೆಬನಾನ್ ಸೇರಿದಂತೆ ಮಿಲಿಟರಿ ಕ್ರಮಕ್ಕೆ ತಕ್ಷಣದ ಮತ್ತು ಶಾಶ್ವತ ಅಂತ್ಯದಲ್ಲಿ ಕೊನೆಗೊಂಡಿತು ಎಂದು ಹೇಳಿದರು.

ಎರಡೂ ದೇಶಗಳ ನಾಯಕತ್ವವು ಕಷ್ಟಕರವಾದ ಮಾತುಕತೆಗಳ ಉದ್ದಕ್ಕೂ ತಾಳ್ಮೆ ಮತ್ತು ವಿವೇಕವನ್ನು ಪ್ರದರ್ಶಿಸಿದವು. ಇದರ ಪರಿಣಾಮವಾಗಿ ಇಡೀ ಜಗತ್ತು ಸಂಭ್ರಮಿಸಬಹುದಾದ ಪ್ರಗತಿ ಕಂಡುಬಂದಿತು ಎಂದು ಅವರು ಹೇಳಿದರು.

ಜಾಗತಿಕ ಇಂಧನ ಬಿಕ್ಕಟ್ಟಿಗೆ ಕಾರಣವಾಗಿದ್ದ 107 ದಿನಗಳ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ಒಪ್ಪಂದವನ್ನು ಅಂತಿಮಗೊಳಿಸಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.

ಪಾಕಿಸ್ತಾನ ಪ್ರಧಾನಿಯವರ ಪ್ರಕಾರ, ಜೂನ್ 19ರಂದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗುವುದು. ಜೂನ್ 19ರಂದು ಜಿನೀವಾದಲ್ಲಿ ಪಾಕಿಸ್ತಾನವು ಈ ಐತಿಹಾಸಿಕ ಒಪ್ಪಂದದ 'ಸಹಿ ಸಮಾರಂಭವನ್ನು' ಆಯೋಜಿಸಲಿದೆ ಎಂದು ಅವರು ಹೇಳಿದರು.

ಇಂದು ಪಾಕಿಸ್ತಾನದಲ್ಲಿ ವಾಸಿಸುವವರಿಗೆ ಮಾತ್ರವಲ್ಲದೆ ಪ್ರಪಂಚದಾದ್ಯಂತ ವಾಸಿಸುವ ಪಾಕಿಸ್ತಾನಿಗಳಿಗೂ ಹೆಮ್ಮೆಯ ದಿನ ಎಂದು ಪಾಕ್ ಪ್ರಧಾನಿ ಹೇಳಿದರು.

ಗೃಹಲಕ್ಷ್ಮಿ, ಗೃಹ ಜ್ಯೋತಿಗೆ ಮರು ಅರ್ಜಿ ಆಹ್ವಾನವೇ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿ

ಬೆಂಗಳೂರು, ಜೂ.15(ಕೆಎಂಶಿ)–ಗೃಹ ಲಕ್ಷ್ಮಿ ಮತ್ತು ಗೃಹಜ್ಯೋತಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳು ಮರು ಅರ್ಜಿ ಸಲ್ಲಿಸುವಂತೆ ಹೊರಡಿಸಿರುವ ಆದೇಶ ರಾಜ್ಯ ಕಾಂಗ್ರೆಸ್ ಸರ್ಕಾರದ 3 ವರ್ಷಗಳ ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದ್ದಾರೆ.



ಗ್ಯಾರಂಟಿ ಯೋಜನೆಯ ಅರ್ಹ ಫಲಾನುಭವಿಗಳ ಪುನರ್ ಪರಿಶೀಲನೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿರುವ ಆದೇಶ, ಮಾಜಿ ಸಿಎಂ ಸಿದ್ದರಾಮಯ್ಯ ಕಳೆದ 3 ವರ್ಷಗಳು ನಡೆಸಿದ ಆಡಳಿತದ ಮಹಾವೈಫಲ್ಯಕ್ಕೆ ಸರ್ಕಾರ ನೀಡಿರುವ ಅಧಿಕೃತ ಸಾಕ್ಷಿಯಾಗಿದೆ ಎಂದಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ರಾಜ್ಯ ಸರ್ಕಾರದ ಆಡಳಿತದ ಸತ್ಯ ಕೊನೆಗೂ ಹೊರಬಿದ್ದಿದೆ, ಯೋಜನೆಗಳ ಉಸ್ತುವಾರಿ ಹೆಸರಿನಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಯಲ್ಲಿದ್ದ 4,580 ಕಾಂಗ್ರೆಸ್ ಕಾರ್ಯಕರ್ತರು ಸಾರ್ವಜನಿಕರ 23.32 ಕೋಟಿ ತೆರಿಗೆ ಹಣವನ್ನು ಸಂಬಳದ ರೂಪದಲ್ಲಿ ಲೂಟಿ ಮಾಡಿದ್ದು ಬಿಟ್ಟರೆ ಸಾಧಿಸಿದ್ದಾದರೂ ಏನು ಎಂದು ಪ್ರಶ್ನಿಸಿದ್ದಾರೆ. ಪಕ್ಷದ ಕಾರ್ಯಕರ್ತರ ಜೇಬು ತುಂಬಿಸಲು ಜನರ ಹಣ ಪೋಲು ಮಾಡಿ, ಈಗ ಹಗಲಿರುಳು ದುಡಿಯುವ ಜನಸಾಮಾನ್ಯರನ್ನು ಗ್ಯಾರಂಟಿ ಹೆಸರಲ್ಲಿ ಮತ್ತೆ ಸರದಿ ಸಾಲಿನಲ್ಲಿ ನಿಲ್ಲಿಸುತ್ತಿರುವುದು ಸರ್ಕಾರದ ದುರಂತ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ. ಇದು ಹಿಂದಿನ ಸಿಎಂ ಅವರ ಆಡಳಿತ ವೈಫಲ್ಯಕ್ಕೆ ನೀಡಿದ 'ಪ್ರಗತಿ ಪತ್ರ' ಇದಾಗಿದೆ ಎಂದಿದ್ದಾರೆ.

ದೇಶ ವಿಭಜನೆ ಆಗದಿದ್ದರೆ ಪೈಪ್‌ಲೈನ್ ಮೂಲಕ ಇಂಧನ ಸರಬರಾಜಾಗುತ್ತಿತ್ತು

ಕಾಂಗ್ರೆಸ್ ಟೀಕೆಗಳಿಗೆ ಮಾಜಿ ಉಪ ಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ ವಾಗ್ದಾಳಿ

ಮೈಸೂರು, ಜೂ.15(ಎಂಕೆ)– ಸ್ವಾತಂತ್ರ್ಯ ನಂತರ ಅಖಂಡ ಭಾರತ(ಪಾಕಿಸ್ತಾನ ಸೇರಿ) ವನ್ನು ಇಬ್ಭಾಗ ಮಾಡಿದ ಕಾಂಗ್ರೆಸ್‌ನಿಂದಾಗಿಯೇ ದೇಶದಲ್ಲಿಂದು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯಾಗಿರುವುದು. ಇಲ್ಲವಾಗಿದ್ದರೆ ನೀರಿನಂತೆ ಪೈಪ್‌ಲೈನ್ ಮೂಲಕ ಭಾರತಕ್ಕೆ ಇಂಧನ ಸರಬರಾಜು ಆಗುತ್ತಿತ್ತು ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್ ನಾರಾಯಣ ಹೇಳಿದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಡಾ.ಸಿ.ಎನ್.ಅಶ್ವಥ್ ನಾರಾಯಣ ಮಾತನಾಡಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿನ ಇಷ್ಟೆಲ್ಲಾ ಸಮಸ್ಯೆಗೂ ಕಾಂಗ್ರೆಸ್ ಕಾರಣ. ದೇಶವನ್ನು ವಿಭಜನೆ ಮಾಡದಿದ್ದರೆ ಇಂತಹ ಪರಿಸ್ಥಿತಿ ಎದುರಾಗುತ್ತಿರಲಿಲ್ಲ. ಇಂಧನ ಸರಬರಾಜಿನಲ್ಲಿ ಯಾವುದೇ ತೊಂದರೆಯೂ ಉಂಟಾಗುತ್ತಿರಲಿಲ್ಲ ಎಂದರು.

ನಮ್ಮ ಏರಿಕೆ ಕಡಿಮೆ: ದೇಶದಲ್ಲಿಂದು ಯುದ್ಧದ ಪರಿಣಾಮ ಅಗತ್ಯ ವಸ್ತುಗಳ ಬೆಲೆಗಳು ಏರಿಕೆಯಾಗಿವೆ. ಸಂಕಷ್ಟದ ಸಮಯದಲ್ಲಿ ಸಣ್ಣ ಮಟ್ಟದಲ್ಲಿ ಬೆಲೆ ಏರಿಕೆ ಮಾಡಲಾಗಿದ್ದು, ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ನಾವು ಮಾಡಿರುವುದು ಕಡಿಮೆ. ಆದರೆ, ಕಾಂಗ್ರೆಸ್ ಸರ್ಕಾರದಿಂದಾಗಿ ಬೆಲೆ ಏರಿಕೆಯಾಗುತ್ತಿದೆ. ಕೇಂದ್ರಕ್ಕಿಂತ ಹೆಚ್ಚಿನ ತೆರಿಗೆ ವಿಧಿಸಲಾಗುತ್ತಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ ರಾಜ್ಯವನ್ನು ದಿವಾಳಿ ಮಾಡಲು ಹೊರಟಿದೆ. ರಾಜ್ಯದ ಸಾಲ 8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಬಳಿ ಹಣವಿಲ್ಲ. ಕೇಂದ್ರ ಸರ್ಕಾರದಿಂದ ನೀಡುವ ಅನುದಾನವನ್ನು ಯಾವುದಕ್ಕೆ ಬಳಸಿಕೊಳ್ಳುತ್ತಿದ್ದಾರೆಂಬುದು ಕೂಡ ರಾಜ್ಯದ ಜನತೆಗೆ ತಿಳಿದಿದೆ. ಇದೇ ಕಾರಣದಿಂದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ದೂರಿದರು.

ಕಾಂಗ್ರೆಸ್‌ನಿಂದ ನೀಟ್ ಪರೀಕ್ಷೆ ನಡೆಸಲು ಸಾಧ್ಯವಾಗಿಲ್ಲ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕುರಿತು ಪ್ರತಿಕ್ರಿಯಿಸಿ, ಜವಾಬ್ದಾರಿ ನೀಡಿದ್ದ ವ್ಯಕ್ತಿಗಳಿಂದ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಸರಿಪಡಿಸುವ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಕೆಲಸಗಳು ನಡೆಯುತ್ತಿವೆ. ಮೆರಿಟ್ ಆಧಾರದ ಮೇಲೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅವಕಾಶ ದೊರೆಯಬೇಕು ಎಂಬ ಕಾರಣಕ್ಕೆ ನೀಟ್ ಪರೀಕ್ಷೆ ನಡೆಸಲಾಗುತ್ತಿದೆ. ಅದರಂತೆ ಮರು ಪರೀಕ್ಷೆ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ. ಆದರೆ, ಇದುವರೆಗೂ ಕಾಂಗ್ರೆಸ್‌ನಿಂದ ನೀಟ್ ಪರೀಕ್ಷೆ ಮಾಡಲು ಸಾಧ್ಯವಾಗಿರಲಿಲ್ಲ. ರಾಜ್ಯದಲ್ಲಿ ಕೆಪಿಎಸ್‌ಸಿ ಕನ್ನಡ ಪರೀಕ್ಷೆ ಹಾಗೂ ದ್ವಿತೀಯ ಪಿಯುಸಿ ಪ್ರಶ್ನೆ ಪತ್ರಿಕೆ ಹಲವು ಬಾರಿ ಸೋರಿಕೆಯಾಗಿದ್ದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ. ರಾಜ್ಯ ಸರ್ಕಾರ ಎನ್‌ಇಪಿ ಹೋಗಲಿ ಎಸ್‌ಇಪಿ ಯನ್ನಾದರೂ ಸರಿಯಾಗಿ ಜಾರಿಗೊಳಿಸದೆ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಕಿಡಿಕಾರಿದರು.

ಕಾನೂನು ಚೌಕಟ್ಟಿನಲ್ಲಿ ಎಸ್ಐಆರ್: ದೇಶದಲ್ಲಿ 7ನೇ ಬಾರಿ ಎಸ್ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ನಡೆಯುತ್ತಿದೆ. ಕಾನೂನು ಚೌಕಟ್ಟಿನಲ್ಲಿ ಅರ್ಹ ಮತದಾರರನ್ನು ಉಳಿಸುವ ಕಾರ್ಯ ಇದಾಗಿದ್ದು, ಸೂಕ್ತ ದಾಖಲೆಗಳನ್ನು ನೀಡಿದರೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಮತದಾರರ ಪಟ್ಟಿಯ ಸ್ವಚ್ಛೀಕರಣ ಇದಾಗಿದೆ ಎಂದು ತಿಳಿಸಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್, ಮಾಜಿ ಉಪ ಮೇಯರ್ ಶೈಲೇಂದ್ರ, ಅಲ್ಪಸಂಖ್ಯಾತ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ರಾಜ್ಯ ವಕ್ತಾರ ಎಂ.ಜಿ. ಮಹೇಶ್, ಮುಖಂಡರಾದ ಸ್ವಾಮಿ ಮರಳಪುರ, ಈ.ಸಿ.ನಿಂಗರಾಜ್ ಗೌಡ, ಎಂ. ಮೋಹನ್, ಬಿ.ಎಂ.ರಘು, ಸೋಮಸುಂದರ್, ಎಂ.ಜೆ. ಕಿರಣ್ ಗೌಡ, ಕೆ.ಸಿ.ರುದ್ರ ಮೂರ್ತಿ, ಜಯ ಶಂಕರ್, ಹೇಮಾ ನಂದೀಶ್, ರಾಕೇಶ್, ಮಹೇಶ್ ರಾಜೇ ಅರಸ್, ಬಿ.ಎಂ. ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಶ್ರಮಿಸುತ್ತಿದ್ದಾರೆ...

ದೇಶದ ರಾಜಕಾರಣ ಇತಿಹಾಸದಲ್ಲೇ ಪ್ರಧಾನ ಮಂತ್ರಿಗಳಾಗಿ ಅತ್ಯಂತ ಸುದೀರ್ಘ ಆಡಳಿತ ನಡೆಸಿದ ಹೆಗ್ಗಳಿಕೆಗೆ ಪಾತ್ರರಾಗಿರುವ ಪ್ರಧಾನಿ ನರೇಂದ್ರ ಮೋದಿ, ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವಥ್ ನಾರಾಯಣ ಮೆಚ್ಚುಗೆ ವ್ಯಕ್ತಪಡಿಸಿದರು.

ದೇಶದ ಜನರ ನಂಬಿಕೆ ಮತ್ತು ವಿಶ್ವಾಸಗಳಿಸಿರುವ ಪ್ರಧಾನಿ ಮೋದಿ ಅವರು, ಹೇಳಿದ್ದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ದೇಶದ ಕಟ್ಟಕಡೆಯ ವ್ಯಕ್ತಿಗೂ ಅಭಿವೃದ್ಧಿ ಕಾರ್ಯಗಳು ತಲುಪುವಂತೆ ಮಾಡಿದ್ದಾರೆ. ಎರಡು ಕೋಟಿ ಜನರಿಗೆ ಆಯುಷ್ಮಾನ್ ಭಾರತ್ ಕಾರ್ಡ್, 1600ಕ್ಕೂ ಜನೌಷಧಿ ಕೇಂದ್ರ, ರೈಲ್ವೆ ಮಾರ್ಗಗಳ ವಿದ್ಯುದೀಕರಣ, ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಿ ಬಳಕೆಗೆ ಯೋಗ್ಯವಾಗಿರುವಂತೆ ಮಾಡಲಾಗಿದೆ. ಕಿಸಾನ್ ಸಮ್ಮಾನ್ ಯೋಜನೆ ಮೂಲಕ ರೈತರಿಗೆ ಅನುಕೂಲ ಕಲ್ಪಿಸಲಾಗಿದೆ. ಮುದ್ರಾ ಯೋಜನೆಯಡಿ 40 ಲಕ್ಷ ಕೋಟಿ ಹಣವನ್ನು 57 ಲಕ್ಷ ಜನರಿಗೆ ಸಾಲ ನೀಡಲಾಗಿದೆ. ಜೊತೆಗೆ ಶಿಕ್ಷಣ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ವಿವರಿಸಿದರು.

ಶಿವನೇ ಕಾಪಾಡಬೇಕು...!

"ಬಿಡದಿ ಟೌನ್ ಶಿಪ್ ವಿಚಾರದಲ್ಲಿ ಸಮಯ ಬಂದಾಗ ಮಾತನಾಡುತ್ತೇನೆ. ರಾಜ್ಯದಲ್ಲಿ ಸದ್ಯಕ್ಕೆ ಖಾತೆ ಕ್ಯಾತೆ ನಡೆಯುತ್ತಿದೆ. 14 ಸಚಿವರು 14 ದಿಕ್ಕುಗಳಲ್ಲಿ ಮಾತನಾಡುತ್ತಿದ್ದಾರೆ. ಸಚಿವ ಸಂಪುಟ ವಿಸ್ತರಣೆಯಾದರೆ ಈ ಶಿವನ ಸರ್ಕಾರವನ್ನು ಆ ನಿಜವಾದ ಶಿವನೇ ಕಾಪಾಡಬೇಕು.

– ಡಾ.ಸಿ.ಎನ್.ಅಶ್ವಥ್ ನಾರಾಯಣ, ಮಾಜಿ ಉಪ ಮುಖ್ಯಮಂತ್ರಿ

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಕಾರು ಪಲ್ಟಿ: ದಂಪತಿಗೆ ಗಾಯ

ಮಂಡ್ಯ, ಜೂ.15–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಕಾರು ಪಲ್ಟಿಯಾಗಿ ದಂಪತಿ ಗಾಯಗೊಂಡಿರುವ ಘಟನೆ ಸಂಭವಿಸಿದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ ಬಳಿ ಲಾರಿಯನ್ನು ಓವರ್ ಟೇಕ್ ಮಾಡುವಾಗ ಈ ಘಟನೆ ಸಂಭವಿಸಿದ್ದು, ಕಾರಿನಲ್ಲಿದ್ದ ದಂಪತಿ ಗಂಭೀರ ಗಾಯಗೊಂಡಿದ್ದಾರೆ. ಮೈಸೂರಿನಿಂದ ಬೆಂಗಳೂರಿಗೆ ಕಾರಿನಲ್ಲಿ ತೆರಳುತ್ತಿದ್ದ ದಂಪತಿಗಳ ಬಗ್ಗೆ ವಿವರಗಳು ಲಭ್ಯವಿಲ್ಲ.

ಪಲ್ಟಿ ರಭಸಕ್ಕೆ ಕಾರು ಡಿವೈಡರ್ ದಾಟಿ ಕಾರು ಮತ್ತೊಂದು ರಸ್ತೆಗೆ ಬಿದ್ದಿದೆ. ಕಾರು ಸಂಪೂರ್ಣ ನಜ್ಜು–ಗುಜ್ಜಾಗಿದೆ. ಗಾಯಾಳು ದಂಪತಿಯನ್ನು ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಘಟನೆಯಿಂದ ಕೆಲ ಕಾಲ ಟ್ರಾಫಿಕ್ ಜಾಮ್ ಆಗಿತ್ತು. ಮದ್ದೂರು ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜೂ. 15– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಜೂ. 18 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಓದು...ಓದು ಒತ್ತಡ! ನಾನಿನ್ನ ಬಿಡಲಾರೆ... ಪ್ರೀತಿ–ಪ್ರೇಮ!!

ಉಂಡು ಮಲಗಿದರೂ ನಿಲ್ಲದ ಜಗಳದಿಂದ 'ನಾಪತ್ತೆ' ಹೆಚ್ಚಳ

- ಕ್ಷುಲ್ಲಕ ಕಾರಣಕ್ಕೆ ಕಾಣೆಯಾಗುವವರ ಸಂಖ್ಯೆ ದಿನೇ ದಿನೆ ಹೆಚ್ಚಳ
- ಪತ್ತೆಯಲ್ಲಿ ಪೊಲೀಸರ ಗಣನೀಯ ಸಾಧನೆ
- ಮೈಸೂರು ನಗರದಲ್ಲಿ ಆರು ತಿಂಗಳಲ್ಲಿ 225 ಮಂದಿ ನಾಪತ್ತೆ; 165 ಪತ್ತೆ!

ಮೈಸೂರು, ಜೂ.15(ಜಿಎ)–ಕ್ಷುಲ್ಲಕ ಕಾರಣಕ್ಕೆ ಮನೆಬಿಟ್ಟು ಹೋಗುವವರ ಸಂಖ್ಯೆ ದಿನೇ ದಿನೆ ಏರಿಕೆಯಾಗುತ್ತಿದ್ದು, ಈ ಸಂಬಂಧ ಮೈಸೂರು ನಗರದಲ್ಲಿ 225 ಪ್ರಕರಣಗಳು ದಾಖಲಾಗಿವೆ.

ಪರಿಸ್ಥಿತಿಗೆ ತಕ್ಕಂತೆ ಮನಸ್ಥಿತಿ ಇರುತ್ತದೆ. ಆದರೆ, ಇತ್ತೀಚೆಗೆ ಅಂತಹ ಹೇಳಿಕೊಳ್ಳುವಂತಹ ಕಾರಣ ಇಲ್ಲದಿದ್ದರೂ ಮಹಿಳೆಯರು, ಪುರುಷರು ಹಾಗೂ ಅಪ್ರಾಪ್ತ ಮಕ್ಕಳು ಮನೆ ಬಿಟ್ಟು ಹೋಗುತ್ತಿದ್ದು, ಪೊಲೀಸರು ಇಂತಹ ಪ್ರಕರಣಗಳಲ್ಲಿ ವಿಶೇಷ ಕಾಳಜಿ ವಹಿಸಿದ್ದಾರೆ. ಕಾಣೆಯಾದ 225 ಮಂದಿಯಲ್ಲಿ 165ಮಂದಿಯನ್ನು ಈಗಾಗಲೇ ಪತ್ತೆಹಚ್ಚಿ ಶೇ.90ರಷ್ಟು ಪ್ರಗತಿ ಸಾಧಿಸಿದ್ದಾರೆ.

ಇತ್ತೀಚೆಗೆ ಮೈಸೂರು ನಗರದ ಪೊಲೀಸ್ ಠಾಣೆಗಳಲ್ಲಿ 'ಮಗಳು ಕಾಲೇಜಿಗೆ ಹೋಗುತ್ತೇನೆ ಎಂದು ಹೋದವರು ಮತ್ತೆ ಮನೆಗೆ ವಾಪಸ್ ಬಂದಿಲ್ಲ', 'ಮಗ ಆಟ ಆಡಲು ಹೋದವ ಮನೆಗೆ ಹಿಂದಿರುಗಿಲ್ಲ', ಹೆಂಡತಿ ಮತ್ತು ಮಕ್ಕಳು ನಾಪತ್ತೆಯಾಗಿದ್ದಾರೆ ಹುಡುಕಿಕೊಡಿ ಎಂದು ಅಧಿಕ ದೂರು ದಾಖಲಾಗುತ್ತಿವೆ. ಈ ರೀತಿ ಪ್ರಕರಣಗಳ ಜಾಡು ಹಿಡಿದು ಹೋದ ಪೊಲೀಸರಿಗೆ ಕ್ಷುಲ್ಲಕ ಕಾರಣಕ್ಕೆ ಮನೆ ಬಿಟ್ಟು ಹೋಗಿರುವುದು ತಿಳಿದು ಬಂದಿದೆ.

ಪೋಷಕರ ಒತ್ತಡ : ಅಪ್ರಾಪ್ತ ಮಕ್ಕಳು ನಾಪತ್ತೆ ಪ್ರಕರಣಗಳಲ್ಲಿ ಪೋಷಕರು 'ಮಗ/ಮಗಳು ಶಾಲಾ–ಕಾಲೇಜಿಗೆ ಹೋಗುತ್ತೇವೆಂದು ಹೇಳಿ ಹೋಗಿ ಮರಳಿ ಮನೆಗೆ ಬಂದಿಲ್ಲ', 'ಮನೆಯಲ್ಲಿ ಯಾರಿಗೂ ತಿಳಿಸದೆ ಹೋಗಿದ್ದಾರೆ' ಎಂದು ದೂರು ಸಲ್ಲಿಸುತ್ತಿದ್ದಾರೆ.

ಅವರು ನೀಡಿರುವ ದೂರಿನನ್ವಯ ವಿಚಾರಣೆ ಆರಂಭಿಸುವ ಪೊಲೀಸರಿಗೆ ಮೊದಲು ತಿಳಿಯುವುದು ಪೋಷಕರು ಓದಿನ ವಿಚಾರದಲ್ಲಿ ಹೆಚ್ಚಿನ ಒತ್ತಡ ಹಾಕಿರುವ ಹಿನ್ನೆಲೆ ಅಪ್ರಾಪ್ತರು ಮನೆ ಬಿಟ್ಟು ಹೋಗಿರುವುದು ತಿಳಿದು ಬರುತ್ತಿದೆ. ತಕ್ಷಣ ಪೊಲೀಸರು ಆ ಮಗುವಿನ ದಿನಚರಿ ಮತ್ತು ಸ್ನೇಹಿತರ ಬಳಿ ವಿಚಾರಿಸಿ, ಕೆಲವೊಂದು ಪ್ರಕರಣವನ್ನು 24 ಗಂಟೆಯೊಳಗೆ ಪತ್ತೆ ಹಚ್ಚಿದ್ದಾರೆ.


ಲವ್ ಸ್ಟೋರಿ: ತಂತ್ರಜ್ಞಾನ ಆಧರಿತ ಸಾಧನಗಳು ಹೆಚ್ಚಳವಾಗಿ ಪ್ರೇಮ ಪ್ರಕರಣಗಳ ಸಂಖ್ಯೆಯೂ ಹೆಚ್ಚಾಗಿದ್ದು, ಆನ್‌ಲೈನ್‌ನಲ್ಲಿ ಯುವಕ–ಯುವತಿಯರನ್ನು, ಯುವತಿಯರು ಯುವಕರನ್ನು ಪರಿಚಯಿಸಿಕೊಳ್ಳುವುದು ಸಾಮಾನ್ಯವಾಗುತ್ತಿದ್ದು, ಮುಂದಿನ ಹಂತವಾಗಿ ಪ್ರೀತಿ–ಪ್ರೇಮದ ಕಾರಣಕ್ಕೆ ವ್ಯಾಜ್ಯಗಳು ಜಾಸ್ತಿಯಾಗುತ್ತಿವೆ. ಮಿಗಿಲಾಗಿ ಇದರಿಂದ ಮೋಸ ಹೋಗುವವರ ಪ್ರಮಾಣವೂ ಏರಿಕೆಯಾಗಿದೆ. ಈ ಮಾಯಾಜಾಲಕ್ಕೆ ಯುವಕ, ಯುವತಿಯರು ಸಿಲುಕಿ ಮನೆ ಬಿಟ್ಟು ಹೋಗುವ ಹಂತಕ್ಕೂ ತಲುಪಿದ್ದಾರೆ.

ಈ ರೀತಿ ಮೋಸದ ಪ್ರೀತಿ–ಪ್ರೇಮಕ್ಕೆ ಸಿಲುಕಿದವರು ಮನೆ ಬಿಟ್ಟು ಹೋಗುವಾಗ ಪೋಷಕರು ಪೊಲೀಸರಿಗೆ ಸಾಮಾನ್ಯ ಪ್ರಕರಣದಂತೆ 'ಕಾಣೆಯಾಗಿದ್ದಾರೆ' ಎಂದೇ ದೂರು ಸಲ್ಲಿಸುತ್ತಾರೆ. ಪೊಲೀಸರು ಯುವಕ, ಯುವತಿಯ ಪೂರ್ವಪರ ವಿಚಾರಿಸಿ, ಅವರ ಮೊಬೈಲ್ ಸಿಡಿಆರ್ ಪರಿಶೀಲನೆಗಿಳಿದು, ಅವರು ಇರುವಿಕೆಯ ಪತ್ತೆ ಹಚ್ಚುತ್ತಿದ್ದಾರೆ. ಕೆಲವೊಂದು ಮೋಸದ ಪ್ರಕರಣದಲ್ಲಿ ಅವರೇ ಮರಳಿ ಮನೆಗೆ ಬರುತ್ತಿದ್ದಾರೆ.

ಕೌಟುಂಬಿಕ ಕಲಹ : ಅನಾದಿ ಕಾಲದಿಂದಲೂ ಕೌಟುಂಬಿಕ ಕಲಹ ಸರ್ವೇ ಸಾಮಾನ್ಯ ಸಂಗತಿಯಾಗಿದ್ದು, ಇದು ಈಗ ನಾಪತ್ತೆಗೆ ದಾರಿ ಮಾಡಿಕೊಡುತ್ತಿದೆ. ಹಿಂದೆ, ಮನೆಯಲ್ಲಿ ಗಂಡ–ಹೆಂಡತಿ ಜಗಳ ಉಂಡು ಮಲಗುವ ತನಕ ಎಂಬ ಲೋಕರೂಢಿ ಹೇಳಿಕೆಯಂತೆಯೇ ಶಮನವಾಗುತ್ತಿತ್ತು. ಆದರೆ, ಈಗ ಹಿರಿಯರ ಮಾರ್ಗದರ್ಶನಕ್ಕೆ ಯಾರು ಕಿವಿಗೊಡಲಾರರು ಹಾಗಾಗಿ ದಂಪತಿ ಆತುರದ ನಿರ್ಧಾರಗಳ ತೆಗೆದುಕೊಳ್ಳುತ್ತಿದ್ದಾರೆ. ಸಣ್ಣ ಪುಟ್ಟ ಜಗಳದ ನಂತರ ಮನೆ ಬಿಟ್ಟು ಹೋಗುವ ನಿರ್ಧಾರ ಮಾಡುತ್ತಿರುವುದರಿಂದ ಮಹಿಳೆಯರು, ಪುರುಷರ ನಾಪತ್ತೆ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ.

ಈ ರೀತಿ ಪ್ರಕರಣಗಳಲ್ಲಿ ಪೊಲೀಸರು ಮೊದಲು ಈ ಹಿಂದೆ ಅವರು ಮನೆ ಬಿಟ್ಟು ಹೋಗಿದ್ದರಾ, ಆಗ ಎಲ್ಲಿ ಇದ್ದರೂ, ಎಷ್ಟು ದಿನದ ನಂತರ ವಾಪಸ್ ಬಂದರು ಎಂದು ಮಾಹಿತಿ ಪಡೆದು ಆ ಮೂಲಕ ತನಿಖೆ ಹಾದಿ ಹಿಡಿದು ಪ್ರಕರಣವನ್ನು ಭೇದಿಸುತ್ತಿದ್ದಾರೆ.





"ಬಹುತೇಕ ನಾಪತ್ತೆ ಪ್ರಕರಣದಲ್ಲಿ ಯಾವುದೇ ಬಲವಾದ ಕಾರಣವಿರುವುದಿಲ್ಲ. ಸಣ್ಣ ಪುಟ್ಟ ವಿಚಾರಕ್ಕೆ ಮನೆ ಬಿಟ್ಟು ಹೋಗುತ್ತಿದ್ದಾರೆ. ನಾಪತ್ತೆ ದೂರು ಬಂದ ತಕ್ಷಣ ಅದಕ್ಕೆ ಆದ್ಯತೆ ನೀಡಲಾಗುತ್ತಿದ್ದು, ಇದರಲ್ಲಿ ಉತ್ತಮ ಫಲಿತಾಂಶವನ್ನು ಪಡೆದಿದ್ದೇವೆ.

-ಡಾ.ಹರ್ಷ ಪ್ರಿಯವಂದ, ಡಿಸಿಪಿ

ಇಲ್ಲಿಯೂ ಹೆಣ್ಣು ಮಕ್ಕಳದ್ದೇ ಮೇಲುಗೈ

ಕಳೆದ 6 ತಿಂಗಳಲ್ಲಿ ಮೈಸೂರು ನಗರದಲ್ಲಿ 225 ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಪೊಲೀಸರು 165 ಪ್ರಕರಣಗಳಲ್ಲಿ ಕಾಣೆಯಾದವರನ್ನು ಪತ್ತೆ ಹಚ್ಚಿದ್ದಾರೆ. ಅಪ್ರಾಪ್ತರು, ಪುರುಷ, ಮಹಿಳೆ ಎಂಬ ಪ್ರತ್ಯೇಕ ನಾಪತ್ತೆ ಪ್ರಕರಣಗಳಲ್ಲಿ ಅಪ್ರಾಪ್ತ ಯುವತಿಯರು 32 ಮಂದಿ, ಮಹಿಳೆಯರು 92 ಮಂದಿ ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ.

ಅಪ್ರಾಪ್ತ ಮಕ್ಕಳು ನಾಪತ್ತೆಯಾಗಿರುವ ಸಂಬಂಧ 46 ಪ್ರಕರಣಗಳು ದಾಖಲಾಗಿದ್ದು, 7 ಮಂದಿ ಪತ್ತೆಯಾಗಿದ್ದು, ಬಾಕಿ 7 ಪ್ರಕರಣಗಳ ತನಿಖೆ ನಡೆಯುತ್ತಿದೆ. ಅಪ್ರಾಪ್ತ ಯುವತಿಯರಲ್ಲಿ 32 ಮಂದಿ ನಾಪತ್ತೆಯಾಗಿದ್ದು, 20 ಮಂದಿ ಪತ್ತೆಯಾಗಿದ್ದಾರೆ. ಇನ್ನೂ 12 ಪ್ರಕರಣಗಳ ತನಿಖೆ ನಡೆಯುತ್ತಿದೆ.

ನಗರದಲ್ಲಿ ಪುರುಷರು, ಮಹಿಳೆಯರ ನಾಪತ್ತೆ ಸಂಬಂಧ 179 ಪ್ರಕರಣಗಳು ದಾಖಲಾಗಿವೆ. ಮಹಿಳೆಯರು 92 ಮಂದಿ ನಾಪತ್ತೆಯಾಗಿದ್ದು, ಅವರಲ್ಲಿ 72 ಮಂದಿಯನ್ನು ಪತ್ತೆ ಹಚ್ಚಿದ್ದಾರೆ. ಬಾಕಿ 20 ಪ್ರಕರಣಗಳ ತನಿಖೆ ನಡೆಯುತ್ತಿದೆ. ಪುರುಷರು 87 ಮಂದಿ ನಾಪತ್ತೆಯಾಗಿದ್ದು, 66 ಮಂದಿ ಪತ್ತೆಯಾದರೆ, 21 ಪ್ರಕರಣಗಳ ತನಿಖೆಯನ್ನು ಪೊಲೀಸರು ಮುಂದುವರೆಸಿದ್ದಾರೆ.

ಬಿಎಲ್‌ಒಗಳಿಗೆ ಸಾರ್ವಜನಿಕರು ದಾಖಲೆ ಒದಗಿಸಿ ಸಹಕರಿಸಿ

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮನವಿ

ತಿ.ನರಸೀಪುರ, ಜೂ.15– ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಕಾರ್ಯದ ಕುರಿತು ಅಧಿಕಾರಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಮತದಾರರ ಸಭೆ ಸೋಮವಾರ ಪಟ್ಟಣದ ಮಹದೇವಪ್ಪ ಸ್ಮಾರಕ ಭವನದಲ್ಲಿ ನಡೆಯಿತು.

ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,12,735 ಮತದಾರರಿದ್ದು, ಇದುವರೆಗೆ 2,07,580 ಅರ್ಹ ಮತದಾರರನ್ನು ಗುರುತಿಸಲಾಗಿದೆ. ಇನ್ನೂ 5,155 ಮತದಾರರನ್ನು ಗುರುತಿಸುವ ಕಾರ್ಯ ಬಾಕಿ ಇದ್ದು, ಈ ಕಾರ್ಯವನ್ನು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒಗಳು) ಮನೆ ಮನೆಗೆ ತೆರಳಿ ಕೈಗೊಳ್ಳಲಿದ್ದಾರೆ ಎಂದರು.

ಮತದಾರರ ಪಟ್ಟಿ ಸಮರ್ಪಕ ಹಾಗೂ ದೋಷರಹಿತವಾಗಿರಲು ಪ್ರತಿಯೊಬ್ಬ ಮತದಾರರ ವಿವರಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಿಎಲ್‌ಒಗಳು ಜೂನ್ ಅಂತ್ಯದೊಳಗೆ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದು, ಸಾರ್ವಜನಿಕರು ಅಗತ್ಯ ದಾಖಲೆ ಒದಗಿಸಿ ಸಹಕರಿಸಬೇಕು ಎಂದು ಮನವಿ ಮಾಡಿದರು.


ಸಭೆಯಲ್ಲಿ ಮತದಾರರ ಪಟ್ಟಿಗೆ ಹೊಸದಾಗಿ ಅರ್ಹರಾಗಿರುವ ಮತದಾರರ ಹೆಸರು ಸೇರ್ಪಡೆ, ಮತದಾರರ ವಿವರಗಳ ತಿದ್ದುಪಡಿ ಹಾಗೂ ಅನರ್ಹ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವ ಕುರಿತು ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲಾಯಿತು. 18 ವರ್ಷ ವಯಸ್ಸು ಪೂರ್ಣಗೊಳಿಸಿರುವ ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ವಿಶೇಷ ಗಮನ ಹರಿಸುವಂತೆ ಸೂಚಿಸಲಾಯಿತು.

ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒಗಳು) ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿ ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು. ಮೃತರು, ಸ್ಥಳಾಂತರಗೊಂಡವರು ಹಾಗೂ ನಕಲಿ ದಾಖಲೆಗಳ ಆಧಾರದ ಮೇಲೆ ಸೇರ್ಪಡೆಯಾಗಿರುವ ಹೆಸರುಗಳನ್ನು ನಿಯಮಾನುಸಾರ ಪರಿಶೀಲಿಸಿ ಕೈಬಿಡುವಂತೆ ಸೂಚನೆ ನೀಡಲಾಯಿತು.

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ನಿಖರತೆ ಮತ್ತು ಪಾರದರ್ಶಕತೆ ಕಾಪಾಡುವುದು ಅತ್ಯಂತ ಮುಖ್ಯವಾಗಿದ್ದು, ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಯಿತು. ಸಾರ್ವಜನಿಕರಿಂದ ಸಲ್ಲಿಕೆಯಾಗುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ, ಮತದಾರರಿಗೆ ಅಗತ್ಯ ಮಾಹಿತಿ ಮತ್ತು ಮಾರ್ಗದರ್ಶನ ಒದಗಿಸುವಂತೆ ಸೂಚನೆ ನೀಡಲಾಯಿತು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಚುನಾವಣಾ ಸಿಬ್ಬಂದಿ ಹಾಗೂ ಮತಗಟ್ಟೆ ಮಟ್ಟದ ಅಧಿಕಾರಿಗಳು ಭಾಗವಹಿಸಿ ಪರಿಷ್ಕರಣೆ ಕಾರ್ಯದ ಪ್ರಗತಿ ಕುರಿತು ಚರ್ಚಿಸಿದರು. ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸುವ ಸಂಕಲ್ಪ ಮಾಡಿದರು.

ಮಾಜಿ ಸಚಿವರ ಆಪ್ತ ಕಾರ್ಯದರ್ಶಿ ಬಸವರಾಜು, ಬಿಜೆಪಿಯ ಎಸ್. ಲೋಕೇಶ್, ಜೆಡಿಎಸ್ ಮುಖಂಡ ಸೋಸಲೆ ಶಿವಕುಮಾರ್, ಬಿಎಸ್ಪಿ ಪುಟ್ಟಸ್ವಾಮಿ, ದೊಡ್ಡೆಬಾಗಿಲು ಎಂ.ಮಲ್ಲೇಶ್, ಕಾರ್ಪುರಸ್ವಾಮಿ, ಉಮಾಪತಿ, ಕಬ್ಬೇಪುರಸ್ವಾಮಿ, ಕೊಳತ್ತೂರು ಕೆ.ಎನ್. ಕುಮಾರ್, ಚಿದರವಳ್ಳಿ ಚಂದ್ರಶೇಖರ್, ಮಹದೇವ, ಚಿನ್ನಸ್ವಾಮಿ, ಸೋಮಣ್ಣ, ಬಿಳಿಗಿರಿ ಸ್ವಾಮಿ, ಬಿ.ಎಂ. ಮನೋಹರ, ನಂದೀಶ್, ನಾಗರಾಜು, ಗುರುಪ್ರಸಾದ್, ಎಂ.ಕುಮಾರ, ಶಿವರಾಜು, ಯೋಗೇಂದ್ರ ಸೇರಿದಂತೆ ವಿವಿಧ ಪಕ್ಷದ ಮುಖಂಡರು ಭಾಗವಹಿಸಿದ್ದರು.



ಕಾರ್ಯಾಗಾರದಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಲು ಒತ್ತಾಯ



ನಂಜನಗೂಡು, ಜೂ.15– ಶಾಸಕ ದರ್ಶನ್ ಧ್ರುವನಾರಾಯಣ್ ಅವರು ಸಾವಿರ ಕೋಟಿಗೂ ಹೆಚ್ಚು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಉತ್ತಮ ಹೆಸರು ಗಳಿಸಿದ್ದಾರೆ. ಹೀಗಾಗಿ ಸಿಎಂ ಡಿ.ಕೆ.ಶಿವಕುಮಾರ್ ಅವರು ತಮ್ಮ ಸಚಿವ ಸಂಪುಟದಲ್ಲಿ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಕೆ.ಎಂ. ಮಾದಪ್ಪ ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 47 ಸಾವಿರ ಮತಗಳ ಅಂತರದಿಂದ ಶಾಸಕರಾಗಿ ಆಯ್ಕೆಯಾದ ದರ್ಶನ್ ಧ್ರುವನಾರಾಯಣ್ ಕಳೆದ 3 ವರ್ಷಗಳಲ್ಲಿ ತಮ್ಮ ವೈಯಕ್ತಿಕ ಜೀವನ ಲೆಕ್ಕಿಸದೆ ಜನಸೇವೆಗೆ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡುವ ಮೂಲಕ ಎಲ್ಲಾ ವರ್ಗಗಳನ್ನು ಸಮಾನವಾಗಿ ಕಾಣುವ ಮೂಲಕ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ತಂದೆ ಧ್ರುವನಾರಾಯಣ್ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ 9 ಜಿಲ್ಲೆಗಳ ಹೊಣೆ ಹೊತ್ತು 47 ಕಾಂಗ್ರೆಸ್ ಶಾಸಕರು ಆಯ್ಕೆಯಾಗುವಂತೆ ಪಕ್ಷ ಸಂಘಟಿಸಿದ್ದಾರೆ. ಸಂಸದರಾಗಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಎರಡು ಜಿಲ್ಲೆಗಳಲ್ಲಿ ಪಕ್ಷ ಸಂಘಟನೆ ಹಿತ ದೃಷ್ಟಿಯಿಂದ, ಶಾಸಕ ದರ್ಶನ್‌ಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ದೊರೆಸ್ವಾಮಿ ನಾಯಕ, ಶಿವಪ್ಪದೇವರು, ಅಶೋಕ್, ಮುದ್ದುಮಾದಶೆಟ್ಟಿ, ಕೆಂಡಗಣ್ಣಪ್ಪ, ಎಂ.ಸಂಗರಾಜು ಇದ್ದರು.

ಕಾಂಗ್ರೆಸ್ ಕಾರ್ಮಿಕ ವಿಭಾಗದ ಪದಾಧಿಕಾರಿಗಳ ಪದಗ್ರಹಣ

ನಂಜನಗೂಡು, ಜೂ.15– ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕಾರ್ಮಿಕ ಸಚಿವರಾಗಿದ್ದ ಸಂತೋಷ್ ಲಾಡ್ ಅವರು ಕಾರ್ಮಿಕರಿಗೆ ಸರ್ಕಾರದ ಸೌಲಭ್ಯ ಸವಲತ್ತು, ರಕ್ಷಣೆ ಮತ್ತು ಕಾರ್ಮಿಕರ ಕಲ್ಯಾಣ ಕಾರ್ಯಕ್ರಮ ರೂಪಿಸುವ ಮೂಲಕ ಕಾರ್ಮಿಕ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದ್ದಾರೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ನಡೆದ ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ನೂತನವಾಗಿ ಆಯ್ಕೆಯಾದ ಕಾರ್ಮಿಕ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಕಳೆದ ಬಜೆಟ್‌ನಲ್ಲಿ ಶ್ರಮಿಕ ವಸತಿ ಶಾಲೆ ನಿರ್ಮಾಣಕ್ಕೆ ಕ್ಷೇತ್ರಕ್ಕೆ 30 ಕೋಟಿ ಅನುದಾನ ನೀಡಿದ್ದಾರೆ. ಈಗಾಗಲೇ ಕಟ್ಟಡ ನಿರ್ಮಾಣಕ್ಕೆ ನಿವೇಶನ ಗುರ್ತಿಸುವ ಕೆಲಸವಾಗಿದೆ. ಈ ಶ್ರಮಿಕ ವಸತಿ ಶಾಲೆಯಲ್ಲಿ ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾದ ಕಾರ್ಮಿಕರ ಮಕ್ಕಳಿಗೆ 6 ರಿಂದ 10ನೇ ತರಗತಿವರೆಗೆ ಹಾಸ್ಟೆಲ್ ಸೌಲಭ್ಯ, ಉಚಿತ ಊಟ, ವಸತಿ ಜೊತೆಗೆ ಉಚಿತವಾಗಿ ಗುಣಮಟ್ಟದ ಶಿಕ್ಷಣ ದೊರಕಲಿದೆ. ಅಲ್ಲದೇ ನಮ್ಮ ಕಾಂಗ್ರೆಸ್ ಸರ್ಕಾರ ಕಾರ್ಮಿಕರ ಕಲ್ಯಾಣಕ್ಕಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ನೂತನ ಪದಾಧಿಕಾರಿಗಳು ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕರ ಹಕ್ಕುಗಳು ಮತ್ತು ಸಂಘಟನೆಯ ಬಲವರ್ಧನೆಗಾಗಿ ಕಾರ್ಯ ನಿರ್ವಹಿಸಬೇಕು. ಜೊತೆಗೆ ಕಾರ್ಮಿಕ ಆರೋಗ್ಯ ವಿಮೆ, ಅಪಘಾತ ಪರಿಹಾರ, ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ಸರ್ಕಾರ ನೀಡಲಿದೆ. ಈ ಸೌಲಭ್ಯ ಪಡೆಯಲು ಕಾರ್ಮಿಕರು ಲೇಬರ್ ಕಾರ್ಡ್ ಕಡ್ಡಾಯವಾಗಿದ್ದು, ಕಾರ್ಡ್ ಪಡೆಯಲು ಸರ್ಕಾರ 100 ರೂ. ನಿಗದಿ ಪಡಿಸಿದೆ. ಆದರೆ ಈ ಲೇಬರ್ ಕಾರ್ಡ್ ಕೊಡಿಸಲು ಮಧ್ಯವರ್ತಿಗಳು 2 ರಿಂದ 3 ಸಾವಿರ ಹಣ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದ್ದರಿಂದ ತಾಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಉಚಿತವಾಗಿ ಲೇಬರ್ ಕಾರ್ಡ್ ಕೊಡಿಸಲು ತೀರ್ಮಾನಿಸಲಾಗಿದೆ. ನೂತನ ಕಾರ್ಮಿಕ ವಿಭಾಗದ ಪದಾಧಿಕಾರಿಗಳು ಕಾರ್ಮಿಕರಿಗೆ ಲೇಬರ್ ಕಾರ್ಡ್ ವಿತರಿಸಲು ಶ್ರಮಿಸಬೇಕು ಎಂದರು.

ಬ್ಲಾಕ್ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗದ ತಾಲೂಕು ಅಧ್ಯಕ್ಷರಾಗಿ ಎನ್. ರಾಜು, ಉಪಾಧ್ಯಕ್ಷ ನಂಜಪ್ಪ, ಪ್ರಧಾನ ಕಾರ್ಯದರ್ಶಿ ಮಣಿಕಂಠ, ರಮೇಶ್, ನಂಜುಂಡನಾಯಕ, ರಂಗಸ್ವಾಮಿ, ನಾಗೇಂದ್ರ, ಪ್ರಸಾದ್, ಶ್ರೀಧರ್, ಶಿವಲಿಂಗೇಗೌಡ, ಸತೀಶ್, ಪ್ರಕಾಶ್, ಸುರೇಶ್ ಸೇರಿದಂತೆ ಪದಾಧಿಕಾರಿಗಳು ಆಯ್ಕೆಯಾದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಲೂಕು ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಅಧ್ಯಕ್ಷ ಲತಾ, ಕಾರ್ಮಿಕ ಘಟಕದ ಜಿಲ್ಲಾ ಅಧ್ಯಕ್ಷ ಪ್ರವೀಣ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮುಖಂಡರಾದ ದೊರೆಸ್ವಾಮಿ ನಾಯಕ, ಎಂ.ಮಾದಪ್ಪ, ಮುದ್ದುಮಾದಶೆಟ್ಟಿ, ದೇಬೂರು ಅಶೋಕ್, ಕಳಲೆ ರಾಜೇಶ್, ಶಿವಪ್ಪದೇವರು, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಯುವ ಕಾಂಗ್ರೆಸ್ ಅಧ್ಯಕ್ಷ ವಿಜಯ್ ಕುಮಾರ್, ಮಹೇಶ್, ಆದರ್ಶ್ ಇದ್ದರು.



ನೂತನ ಪದಾಧಿಕಾರಿಗಳಿಗೆ ಶಾಸಕ ದರ್ಶನ್ ನೇಮಕಾತಿ ಪತ್ರ ವಿತರಿಸಿದರು.

ನಂಜೀಪುರದಲ್ಲಿ ಮಂಡಲ ಪೂಜೆ, ಬಸವ ಪ್ರತಿಮೆ ಅನಾವರಣ

ಸರಗೂರು, ಜೂ.15– ತಾಲೂಕಿನ ನಂಜೀಪುರ ಗ್ರಾಮದಲ್ಲಿ ಶ್ರೀಮಹದೇಶ್ವರ ದೇವಾಲಯದಲ್ಲಿ 48ನೇ ದಿನದ ಮಂಡಲ ಪೂಜೆ ಹಾಗೂ ಬಸವ ಪ್ರತಿಮೆ ಅನಾವರಣ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಗ್ರಾಮದಲ್ಲಿ ಕಳೆದ ಏ.29 ರಂದು ಶ್ರೀಮಹದೇಶ್ವರಸ್ವಾಮಿ ದೇವಸ್ಥಾನ ಲೋಕಾರ್ಪಣೆ ಹಾಗೂ ಕಳಸಾರೋಹಣ ಕಾರ್ಯಕ್ರಮ ನಡೆದಿತ್ತು. ನಂತರ ನಿತ್ಯ ಗ್ರಾಮದ ಪ್ರತಿಯೊಂದು ಕುಟುಂಬ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಭಕ್ತರಿಗೆ ಪ್ರಸಾದ ವಿತರಿಸಿದ್ದರು. ಅಂತಿಮವಾಗಿ ಇಂದು 48ನೇ ದಿನದ ಮಂಡಲ ವಿಶೇಷ ಪೂಜಾ ಕಾರ್ಯಕ್ರಮ ನಂಜೀಪುರದ ಶ್ರೀವಿದ್ವಾನ್ ಹೇಮೇಶ್ ಚಿಲಾಳ ಮತ್ತು ತಂಡದಿಂದ ನೆರವೇರಿತು. ಒಂದು ಮಂಡಲ ಎಂದರೆ 27 ನಕ್ಷತ್ರಗಳು, 12 ರಾಶಿ, 9 ಗ್ರಹಗಳು ಸೇರಿದರೆ ಒಂದು ಮಂಡಲವಾಗುತ್ತದೆ. ಇಡೀ ಜಗತ್ತು ದೇವರಿಂದ ಸೃಷ್ಟಿಯಾಗಿರುತ್ತದೆ ಎಂದು ಶ್ಲೋಕದಲ್ಲಿ ಹೇಳಲಾಗುತ್ತದೆ. ಹೀಗಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಭಕ್ತಿ ಭಾವದೊಂದಿಗೆ ಪೂಜಾ ವಿಧಿ ವಿಧಾನಗಳು ನಡೆಯಿತು.



ನಂಜೀಪುರದಲ್ಲಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ನಡೆಯಿತು.

ಈ ವೇಳೆ ಗಣಪತಿ ಹೋಮ, 101 ಕಳಸಗಳ ಪೂಜೆ, ಮಹಾ ರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ ನಂತರ ಮಹಾಪ್ರಸಾದ ವಿನಿಯೋಗವಾಯಿತು. ಇದೇ ವೇಳೆ ಬಸವ ಪ್ರತಿಮೆ ಅನಾವರಣಗೊಳಿಸಲಾಯಿತು. ಸಾವಿರಾರು ಮಂದಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಗ್ರಾಮದ ಗೌಡಿಕೆ ಶಿವಮಲ್ಲಪ್ಪ, ಶಿವರಾಜಪ್ಪ, ಮುಖಂಡರಾದ ಪ್ರಭುಸ್ವಾಮಿ, ಮಹದೇವಪ್ಪ, ಗುರುಸ್ವಾಮಿ, ಗುರುಮೂರ್ತಿ, ಗುರು, ಎನ್.ಪಿ.ನಾಗರಾಜಪ್ಪ, ಶಿವಕುಮಾರ್, ಶಿಕ್ಷಕರಾದ ಪರಶಿವಮೂರ್ತಿ, ಮಹೇಶ್, ಕುಮಾರ, ರವಿ, ಮಹೇಂದ್ರ, ಮೋಹನ್, ಪ್ರಕಾಶ್, ಮಹೇಶ್, ನವೀನ್ ಕುಮಾರ್, ಸುರೇಶ, ಮಂಜುನಾಥ, ಯೋಗೇಶ್, ಮಹದೇವಪ್ಪ, ಮೋಹನ್, ಸತೀಶ್, ಶಂಭು ಲಿಂಗಪ್ಪ ಸುತ್ತಮುತ್ತಲಿನ ಗ್ರಾಮಸ್ಥರು ಹಾಗೂ ನಂಜೀಪುರ ಗ್ರಾಮದ ಬಸವೇಶ್ವರ ಯುವಕ ಸಂಘದವರು ಭಾಗವಹಿಸಿದ್ದರು.

ಪಾರದರ್ಶಕವಾಗಿ ಎಸ್‌ಐಆರ್ ಮತಪಟ್ಟಿ ಪರಿಷ್ಕರಣೆಗೆ ಮನವಿ

ಕೆ.ಆರ್.ನಗರ, ಜೂ.15– ತಾಲೂಕು ಚುನಾವಣಾಧಿಕಾರಿಗಳು ಎಸ್‌ಐಆರ್ ಮತಪಟ್ಟಿ ಪರಿಷ್ಕರಣೆಯಿಂದ ಅರ್ಹ ಮತದಾರರು ಯಾವುದೇ ಕಾರಣಕ್ಕೂ ವಂಚಿತರಾಗದಂತೆ ಪಾರದರ್ಶಕವಾಗಿ ಪರಿಷ್ಕರಣೆ ಮಾಡಬೇಕು ಎಂದು ಮೌಲಾನ ಅಬುಲ್ ಕಲಾಂ ಆಜಾದ್ ಸೇವಾ ಟ್ರಸ್ಟ್ ಅಧ್ಯಕ್ಷ ಸೈಯದ್ ಜಾಬೀರ್ ತಿಳಿಸಿದರು.

ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಹಾರ ಹಾಕಿ ಎಸ್‌ಐಆರ್ ಜಾಗೃತಿ ಜಾಥ ಅಭಿಯಾನಕ್ಕೆ ಚಾಲನೆ ನೀಡಿ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು, ಕೆ.ಆರ್.ನಗರ ಕ್ಷೇತ್ರದಲ್ಲಿ 252 ಬೂತ್‌ಗಳಿದ್ದು, ಚುನಾವಣಾ ಆಯೋಗದ ತಾವು, ಬಿಎಲ್‌ಒಗಳು ಯಾವುದೇ ಪಕ್ಷದ ಪರ ಇರಬಾರದು. ಪಕ್ಷಾತೀತವಾಗಿ ದೇಶದ ಸಂವಿಧಾನದ ಅಡಿ ಅರ್ಹ ಮತದಾರರು ಮತದಾನದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಮೂಲಕ ಮತಪಟ್ಟಿ ಪರಿಷ್ಕರಣೆಯನ್ನು ಪಾರದರ್ಶಕವಾಗಿ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ಕೊಡಬೇಕು ಎಂದು ವಿವರಿಸಿದರು.

ಮತಪಟ್ಟಿ ಜ್ಞಾನದ ಜೊತೆಗೆ ಬಿಎಲ್‌ಒಗಳು ಆರೋಗ್ಯವಂತರಾಗಿರಬೇಕು. ಅಲ್ಪಸಂಖ್ಯಾತರು, ದಲಿತರು, ವಯೋವೃದ್ಧರು ಗೌರವಯುತವಾಗಿ ಪ್ರಶ್ನೆ ಕೇಳಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಂದರ್ಶನ ಮಾಡಬೇಕು ಮತ್ತು ಚುನಾವಣಾಧಿಕಾರಿಗಳಿಂದ ಯಾವುದೇ ಲೋಪಗಳು ಆಗಬಾರದು ಎಂದು ತಿಳಿಸಿದರು.

ಬಿಎಲ್‌ಒಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಎಸ್‌ಐಆರ್ ಮಾಡಬೇಕು. ಬೇರೆ ರಾಜ್ಯಗಳಲ್ಲಿ ಎಸ್‌ಐಆರ್ ಮತಪಟ್ಟಿ ಪರಿಷ್ಕರಣೆ ಮಾಡಿದ್ದು, ಸುಮಾರು ದೋಷ ಕಂಡು ಬಂದಿದ್ದು, ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಅರ್ಹ ಮತದಾರರು ಮತದಾನದಿಂದ ವಂಚಿತರಾಗಿರುವುದು ದಾಖಲೆಯಿಂದ ಸಾಬೀತಾಗಿದೆ. ಈ ರೀತಿಯ ತಪ್ಪುಗಳು ನಮ್ಮ ರಾಜ್ಯದಲ್ಲಿ ಆಗಬಾರದು ಎಂದರು. ಈ ವೇಳೆ ಸೈಯ್ಯದ್ ಶಾಕೀರ್ ರೆಹಮಾನ್, ಸೈಯ್ಯದ್ ಸಮೀರ್, ಶೇಕ್ ಶೋಯೆಬ್, ವಸೀಂ ಉಲ್ಲಾ ಖಾನ್, ಸೈಯ್ಯದ್ ಝಾಕೀರ್ ಇನ್ನಿತರರಿದ್ದರು.



ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಭಯ ಬೇಡ

ಬಿಎಸ್‌ಪಿಯಿಂದ ಮತದಾರರಿಗೆ ಅರಿವು: ಬಿ.ಆರ್.ಪುಟ್ಟಸ್ವಾಮಿ

ತಿ.ನರಸೀಪುರ, ಜೂ.15– ರಾಜ್ಯದಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ(ಎಸ್‌ಐಆರ್) ಬಗ್ಗೆ ಯಾವುದೇ ಭಯ ಬೇಡ. ಜಾಗೃತಿ ಇರಲಿ, ಅದಕ್ಕಾಗಿ ಬಹುಜನ ಸಮಾಜ ಪಕ್ಷದಿಂದ ಮನೆ ಮನೆಗೆ ತೆರಳಿ ಮತದಾರರಲ್ಲಿ ಅರಿವು ಮೂಡಿಸಲಾಗುವುದು ಎಂದು ಬಿಎಸ್‌ಪಿ ರಾಜ್ಯ ಕಾರ್ಯದರ್ಶಿ ಬಿ.ಆರ್.ಪುಟ್ಟಸ್ವಾಮಿ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಈಗಾಗಲೇ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆಯನ್ನು ರಾಜ್ಯ ಚುನಾವಣಾ ಆಯೋಗ ಆರಂಭಿಸಿದೆ. ಮತದಾರರ ಪಟ್ಟಿಯಿಂದ ಮತದಾರನ ಹೆಸರು ಕೈಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಿ, ಅಗತ್ಯ ದಾಖಲೆ ಒದಗಿಸಲು ಮತದಾರ ಬಂಧುಗಳಿಗೆ ಅಗತ್ಯ ಮಾಹಿತಿ ನೀಡುತ್ತೇವೆ ಎಂದರು.

ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸೋಲಲು ಎಸ್‌ಐಆರ್ ಕಾರಣ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ. ಕೇಂದ್ರ ಸರ್ಕಾರ ಅಧಿಕಾರ ಹಿಡಿಯಲು ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ ವಾಮಮಾರ್ಗ ಹಿಡಿದಿದೆ. ರಾಜ್ಯದಲ್ಲಿ ಈ ಹಿಂದೆ 2 ಬಾರಿ ಆಡಳಿತ ನಡೆಸಿರುವ ಬಿಜೆಪಿಗೆ ಯಾವ್ಯಾವ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಭಾವನೆ ಹೇಗಿದೆ ಎಂಬುದರ ಅರಿವಿದೆ. ಹಾಗಾಗಿ ಎಸ್‌ಐಆರ್ ಬಗ್ಗೆ ವಿಶೇಷ ಗಮನ ನೀಡುತ್ತಿದ್ದೇವೆ. ಮತದಾರರಲ್ಲಿ ಜಾಗೃತಿ ಮೂಡಿಸಲು ಮುಂದಾಗಿದ್ದೇವೆ ಎಂದರು.

ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಪುಟ್ಟಮರಡಯ್ಯ ಮಾತನಾಡಿ, ತಿ.ನರಸೀಪುರ ಕ್ಷೇತ್ರದ ಚುನಾವಣಾ ಅಧಿಕಾರಿಗಳು ಸೋಮವಾರ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ(ಎಸ್‌ಐಆರ್)ಗೆ ಬೂತ್ ಏಜೆಂಟರ ಸಭೆ ಕರೆದಿದ್ದಾರೆ. ಸಭೆ ಮುಗಿದ ಬಳಿಕ ಬಹುಜನ ಸಮಾಜ ಪಕ್ಷದ ಕರಪತ್ರಗಳನ್ನು ಸಾರ್ವಜನಿಕರಿಗೆ ಹಾಗೂ ಪ್ರತಿ ಮನೆಗೂ ವಿತರಿಸಿ, ಪರಿಷ್ಕರಣೆಯಲ್ಲಿ ಭಾಗವಹಿಸಿ ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳುವ ಬಗ್ಗೆ ಜಾಗೃತಿ ಕಾರ್ಯಕ್ರಮ ಆರಂಭಿಸುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಮುಖಂಡ ಬಿ.ಮಹದೇವಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಜಿ.ಪುಟ್ಟರಾಜು, ಕ್ಷೇತ್ರ ಸಂಯೋಜಕ ಕೆ.ಎನ್.ಆನಂದ್, ಕ್ಷೇತ್ರಾಧ್ಯಕ್ಷ ಗೋವಿಂದ, ಟೌನ್ ಅಧ್ಯಕ್ಷ ಹೆಚ್.ಸಿ. ಭಾಸ್ಕರ್, ಕ್ಷೇತ್ರ ಉಪಾಧ್ಯಕ್ಷ ಲಿಂಗರಾಜು ಹಾಗೂ ಇತರರಿದ್ದರು.



ಬಿಎಸ್ಪಿ ರಾಜ್ಯ ಕಾರ್ಯದರ್ಶಿ ಬಿ.ಆರ್.ಪುಟ್ಟಸ್ವಾಮಿ ಮಾತನಾಡಿದರು.

ಅಭಿನಂದನೆ



ಕರ್ನಾಟಕದಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಸಂಚಾಲಕ ರಂಗನಾಥ ಪ್ರಸಾದ್ ಅಭಿನಂದಿಸಿದರು.

ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಣೆ



ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್ ಪೋಸ್ಟ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 45 ವಿದ್ಯಾರ್ಥಿಗಳಿಗೆ ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕ ಪಿ.ರಾಘವನ್ ಉಚಿತವಾಗಿ ಬ್ಯಾಗ್ ನೀಡಿದರು. ಈ ವೇಳೆ ಪುರಸಭೆ ಮಾಜಿ ಸದಸ್ಯ ಕರಾಟೆ ಪ್ರೇಮ್ ಸಾಗರ್, ಎಸ್‌ಡಿಎಂಸಿ ಸದಸ್ಯರಾದ ಬಸವರಾಜು, ರೇವತಿ, ಶಿವಮಣಿ, ಮುಖ್ಯ ಶಿಕ್ಷಕ ವಿಜಯರಂಗನ್, ಸಹ ಶಿಕ್ಷಕರಾದ ಮಂಜುಳಾ, ವಿದ್ಯಾ, ಶೀಲಾ, ವಿದ್ಯಾರ್ಥಿಗಳು ಹಾಜರಿದ್ದರು.

ಏಕಲವ್ಯ ಶಾಲೆಯಲ್ಲಿ ಬುಡಕಟ್ಟು ಮಕ್ಕಳಿಗೆ ಅವಕಾಶ ನೀಡಿ

ಹೆಚ್.ಡಿ.ಕೋಟೆ, ಜೂ.15– ಬುಡಕಟ್ಟು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಏಕಲವ್ಯ ಶಾಲೆ ತೆರೆಯಲಾಗಿದೆ. ಆದರೆ ಶಾಲೆಯಲ್ಲಿ ಆದಿವಾಸಿಗಳಿಗೆ ಅವಕಾಶ ದೊರೆಯದ ಸ್ಥಿತಿ ಎದುರಾಗಿದೆ ಎಂದು ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಶೈಲೇಂದ್ರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಕ್ರೈಸ್ಟ್ ಸಹಯೋಗದಲ್ಲಿ ಆದಿವಾಸಿ ಮಕ್ಕಳಿಗೆ ಮುಕ್ತ ಅವಕಾಶವಿತ್ತು. ಸೆಂಟ್ರಲ್ ಸಿಲಬಸ್ ಬಂದ ಬಳಿಕ ಕಠಿಣ ಪ್ರವೇಶ ಪರೀಕ್ಷೆ ನೀತಿ ಜಾರಿ ತಂದ ಹಿನ್ನೆಲೆಯಲ್ಲಿ ಆದಿವಾಸಿ ಮಕ್ಕಳಿಗೆ ನುಂಗಲಾರದ ತುತ್ತಾಗಿದೆ. ಆದ್ದರಿಂದ ಸರ್ಕಾರ ಆದಿವಾಸಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಮುಖಂಡ ಕಾಳಕಲ್ಕರ್ ಮಾತನಾಡಿ, ಏಕಲವ್ಯ ಶಾಲೆಯ 6ನೇ ತರಗತಿಯಲ್ಲಿ 60 ಮಕ್ಕಳು ದಾಖಲಾಗಿದ್ದಾರೆ. ಆದರೆ 5 ಆದಿವಾಸಿ ಮಕ್ಕಳು ಮಾತ್ರ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಇನ್ನೂ 15 ವಿದ್ಯಾರ್ಥಿಗಳು ಪ್ರವೇಶಾತಿಯಿಂದ ವಂಚಿತರಾಗಿದ್ದಾರೆ. ಕೇಂದ್ರಿಯ ಶಿಕ್ಷಣ ನೀತಿಗೆ ಒಳಪಟ್ಟಿರುವುದರಿಂದ ಸಂಸದರು ಆದಿವಾಸಿ ಮಕ್ಕಳು ಮುಕ್ತವಾಗಿ ಓದಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಸುರೇಂದ್ರ, ಕೃಷ್ಣ, ಪ್ರೇಮ, ಕಿರುಮಾದಿ, ಗಣೇಶ್, ಆನಂದ, ಚಿಕ್ಕಮಾರ, ದಾಸಪ್ಪ ಇದ್ದರು.



ಸುದ್ದಿಗೋಷ್ಠಿಯಲ್ಲಿ ಲ್ಯಾಂಪ್ಸ್ ಸೊಸೈಟಿ ಅಧ್ಯಕ್ಷ ಶೈಲೇಂದ್ರ ಮಾತನಾಡಿದರು.

ಗಾಣಿಗ ಸಮುದಾಯ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟು ಪ್ರದರ್ಶಿಸಿ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮನವಿ

ಹುಣಸೂರು, ಜೂ.15– ಸಣ್ಣಪುಟ್ಟ ಸಮುದಾಯಗಳು ಒಗ್ಗಟ್ಟಿನಿಂದ ಇದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ. ತಾಲೂಕಿನ ಗಾಣಿಗ ಸಮಾಜ ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮನವಿ ಮಾಡಿದರು.

ನಗರದ ಆರ್ಯವೈಶ್ಯ ಕಲ್ಯಾಣ ಮಂಟಪದಲ್ಲಿ ತಾಲೂಕು ಪ್ರಗತಿಪರ ಗಾಣಿಗರ ವೇದಿಕೆ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮಲ್ಲಿ ಒಗ್ಗಟ್ಟು ಇಲ್ಲದಿದ್ದರೆ, ರಾಜಕೀಯ ಸ್ಥಾನಮಾನ, ಸೌಲಭ್ಯ ಪಡೆಯುವುದು ಸೇರಿದಂತೆ ಸಮುದಾಯದ ಅಭಿವೃದ್ಧಿಗೆ ತೊಡಕಾಗಲಿದೆ. ನಿಮ್ಮ ಸಮಾಜವನ್ನು ಗೌರವಿಸುವ, ಪ್ರೀತಿಸುವವರನ್ನು ನಿಮ್ಮ ನಾಯಕನಾಗಿ ನೇಮಿಸಿಕೊಳ್ಳಿ. ಸಮಾಜದಿಂದ ಯಾರೇ ಕಾರ್ಯಕ್ರಮ ನಡೆಸಿದರೂ ಸಕ್ರೀಯವಾಗಿ ತೊಡಗಿಸಿಕೊಳ್ಳಿ ಎಂದರು.

ತಾಲೂಕಿನಲ್ಲಿ ಪ್ರಥಮ ಬಾರಿಗೆ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದ್ದು, ಇದನ್ನು ಮುಂದುವರೆಸಿ ಸಾಧಕರನ್ನು ವಿದ್ಯಾರ್ಥಿಗಳು ಆದರ್ಶವಾಗಿಸಿಕೊಳ್ಳಿ. ಹುಣಸೂರಿನಲ್ಲಿ ಗುಣ ಮಟ್ಟದ ಶಿಕ್ಷಣ ಸಿಗುತ್ತಿದೆ. ಇಲ್ಲಿ ಜಿಟಿಟಿಸಿ, ಐಟಿಐ, ಸಂಶೋಧನಾ(ಪಿಎಚ್‌ಡಿ) ಕೇಂದ್ರಗಳಿದ್ದು ಬಳಸಿಕೊಳ್ಳಿ ಎಂದರು.

ಶಿಕ್ಷಣ ಇಲಾಖೆ ನಿವೃತ್ತ ಅಧಿಕಾರಿ ಬಿ.ಕೆ.ಬಸವರಾಜ್ ಮಾತನಾಡಿ, ಇದು ಸ್ಪರ್ಧಾತ್ಮಕ ಯುಗ. ಮಕ್ಕಳಲ್ಲಿ ಸಾಧಿಸುವ ಛಲ ಇರಬೇಕು. ಪುಸ್ತಕ ಓದುವ ಪ್ರವೃತ್ತಿ ಬೆಳೆಸಿಕೊಳ್ಳಿ. ನಿಮ್ಮ ಗುರಿ ನಿಖರವಾಗಿರಲಿ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ತಯಾರಾಗಿ. ಯುವಜನತೆ ಮನಸ್ಸು ಮಾಡಿದರೆ ದೇಶವನ್ನು ಸುಭೀಕ್ಷವಾಗಿಸಬಹುದು. ಉದ್ಯಮಿಗಳಾಗಿ ನೂರಾರು ಮಂದಿಗೆ ಉದ್ಯೋಗ ಕಲ್ಪಿಸಬಹುದು. ಈ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಆಶಿಸಿದರು.

ಪೌರಾಯುಕ್ತೆ ಎಂ.ಮಾನಸ, ಡಿವೈಎಸ್ಪಿ ಶಿವಕುಮಾರ್, ನಿವೃತ್ತ ಪ್ರಾಚಾರ್ಯ ಪುಟ್ಟಶೆಟ್ಟಿ, ಗಾಣಿಗರ ವೇದಿಕೆ ಅಧ್ಯಕ್ಷ ಮನು ಕುಮಾರ್, ಪ್ರಧಾನ ಕಾರ್ಯದರ್ಶಿ ಪ್ರಸಾದ್, ಗೌರವಾಧ್ಯಕ್ಷ ಕೆ.ರಮೇಶ್, ಕೃಷಿ ಅಧಿಕಾರಿ ವೆಂಕಟಾಚಲಪತಿ ಸೇರಿದಂತೆ ಅನೇಕರು ಮಾತನಾಡಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿಯ 73 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಜನಪ್ರತಿನಿಧಿಗಳು, ಯಜಮಾನರು, ನಿವೃತ್ತ ನೌಕರರನ್ನು ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಸಭೆಯಲ್ಲಿ ಬೆಂಗಳೂರಿನ ಸ್ಕಂದ ಲೈಫ್‌ಸೈನ್ಸ್‌ನ ಸಿಇಓ ಡಾ.ಯೋಗೇಶ್, ಉದ್ಯಮಿ ಶಿವಕುಮಾರ್, ಮಂಡ್ಯ ಜಿಲ್ಲಾ ಗಾಣಿಗರ ಸಂಘದ ಅಧ್ಯಕ್ಷ ಶಿವಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷರಾದ ವಿ.ಮಹದೇವ್, ರವಿ, ಮುಖಂಡರಾದ ಕೃಷ್ಣ, ವೇದಿಕೆ ಪದಾಧಿಕಾರಿಗಳಾದ ಶಿವಸ್ವಾಮಿ, ಗೋವಿಂದಶೆಟ್ಟಿ, ನಾಗೇಂದ್ರ, ಕೃಷ್ಣಕುಮಾರ್, ಶಿವಣ್ಣ ಹಾಗೂ ನಿರ್ದೇಶಕರು ಸೇರಿದಂತೆ ಇನ್ನಿತರರಿದ್ದರು.



ಕಾರ್ಯಕ್ರಮದಲ್ಲಿ ಗಾಣಿಗ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> "ಗಾಣಿಗ ಸಮುದಾಯ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದಿದೆ. ಸಮಾಜದಲ್ಲಿ ಒಗ್ಗಟ್ಟಿಲ್ಲದಿರುವುದು ರಾಜಕೀಯದವರಿಗೆ ಖುಷಿಯಾಗಲಿದೆ ಎಂಬ ಎಚ್ಚರಿಕೆಯಿಂದಾದರೂ ಒಗ್ಗಟ್ಟಾಗಬೇಕು. ನಮ್ಮ ಸಮಾಜ ಇತರೆ ಸಮಾಜದೊಂದಿಗೆ ಬೆರೆಯಬೇಕು. ಮಾಜಿ ಸಿಎಂ ಸಿದ್ದರಾಮಯ್ಯನವರು ಸಣ್ಣಪುಟ್ಟ ಸಮುದಾಯವನ್ನು ಗುರುತಿಸಿ ಅಧಿಕಾರ ನೀಡಿದ್ದಾರೆ. ನನ್ನನ್ನು ಮೇಯರ್ ಮಾಡಿದ್ದರು. ಇದೀಗ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕ ಮಾಡಿದ್ದಾರೆ. ನಿಗಮದಿಂದ ಸ್ವಯಂ ಉದ್ಯೋಗ, ಉನ್ನತ ಶಿಕ್ಷಣಕ್ಕೂ ನೆರವು ಸಿಗಲಿದೆ. ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣ, ಉನ್ನತ ಶಿಕ್ಷಣ ಪಡೆಯಲು ಮುಂದಾಗಬೇಕು. ಮುಂಬರುವ ಜಿಪಂ, ತಾಪಂ ಚುನಾವಣೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರು ಸಮಾಜದವರಿಗೆ ಟಿಕೆಟ್ ನೀಡಬೇಕು.
>
> –ಅನಂತು, ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ.

ನೇಮಕ



ತಿ.ನರಸೀಪುರ, ಜೂ.15– ಬಿಜೆಪಿ ರೈತ ಮೋರ್ಚಾ ಮೈಸೂರು ಜಿಲ್ಲಾ ಕಾರ್ಯದರ್ಶಿಯಾಗಿ ವರುಣ ಕ್ಷೇತ್ರದ ಬಿದರಗೂಡು ಗ್ರಾಮದ ಕುಮಾರ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕೆ.ಎಸ್.ರಮೇಶ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಮಹಿಳೆ ಸಾವು

ನಂಜನಗೂಡು, ಜೂ.15– ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಪತ್ನಿ ಸಾವನ್ನಪ್ಪಿ, ಪತಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಗರದ ದೇವರಾಜ ಅರಸು ಸೇತುವೆ ಬಳಿ ಜರುಗಿದೆ.

ತಾಲೂಕಿನ ಆಲತ್ತೂರು ಗ್ರಾಮದ ನಿವಾಸಿ, ಹಾಲಿ ಮೈಸೂರಿನ ಜೆ.ಪಿ. ನಗರದಲ್ಲಿ ವಾಸವಾಗಿರುವ ಎ.ಜಿ. ಮಹದೇವಪ್ಪ ಗಂಭೀರವಾಗಿ ಗಾಯಗೊಂಡಿದ್ದು, ಇವರ ಪತ್ನಿ ಮಂಜುಳಾ (55) ಸಾವನ್ನಪ್ಪಿದವರು.

ಮೈಸೂರು ತಾಲೂಕಿನ ಆಯರಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಎಂ.ಮಂಜುಳಾ ಮತ್ತು ಕೃಷಿಕರಾದ ಮಹದೇವಪ್ಪ ಅವರು ತಮ್ಮ ಸ್ವಗ್ರಾಮ ಆಲತ್ತೂರು ಗ್ರಾಮದಿಂದ ಮೈಸೂರಿಗೆ ತೆರಳುತ್ತಿದ್ದ ವೇಳೆ ನಗರದ ದೇವರಾಜ ಅರಸು ಸೇತುವೆ ಬಳಿ ಟಿಪ್ಪರ್ ಹಿಂಬದಿಯಿಂದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಎಂ.ಮಂಜುಳಾ ಮತ್ತು ಮಹದೇವಪ್ಪ ದಂಪತಿ ಲಾರಿ ಚಕ್ರಕ್ಕೆ ಸಿಲುಕಿ ತೀವ್ರ ಗಾಯಗೊಂಡಿದ್ದರು. ಈ ವೇಳೆ ಸ್ಥಳೀಯರು ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮಂಜುಳಾ ಮೃತಪಟ್ಟರೇ, ಪತಿ ಮಹದೇವಪ್ಪ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ಸಂಚಾರಿ ಠಾಣೆ ಪೊಲೀಸರು ಪರಿಶೀಲಿಸಿ ಲಾರಿಯನ್ನು ವಶಕ್ಕೆ ಪಡೆದಿದ್ದಾರೆ. ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪರಿಸರ ಪ್ರೇಮಿ ರವಿಕುಮಾರ್ ಜೊತೆ 'ಪ್ರಕೃತಿ ನಡಿಗೆ' ಪರಿಸರ ಹಬ್ಬ

ಕುಕ್ಕರಹಳ್ಳಿಯ ಕೆರೆ ಆವರಣದ ಸಸ್ಯ, ಜೀವ ಸಂಕುಲ ಪರಿಚಯ



ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ನಡೆದ ಪರಿಸರ ಹಬ್ಬ ಪ್ರಕೃತಿ ನಡಿಗೆಯಲ್ಲಿ ಪಾಲ್ಗೊಂಡ ಪರಿಸರವಾದಿಗಳು.

ಮೈಸೂರು,ಜೂ.15(ಎಂಟಿವೈ)– ಪರಿಸರ ಸಂರಕ್ಷಣೆ ಕುರಿತಂತೆ ಜನರಲ್ಲಿ ಜಾಗೃತಿ ಮೂಡಿಸಲು ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಆಯೋಜಿಸಿದ್ದ 'ಪರಿಸರ ಹಬ್ಬ' ಪ್ರಕೃತಿ ನಡಿಗೆಯಲ್ಲಿ ಹಲವು ಮಂದಿ ಪಾಲ್ಗೊಂಡು ಕೆರೆ ಪರಿಸರದೊಂದಿಗೆ ಜೀವ ವೈವಿಧ್ಯತೆ ಬಗ್ಗೆ ಮಾಹಿತಿ ಪಡೆದರು.

ಪ್ರಕೃತಿ ನಡಿಗೆಯಲ್ಲಿ ಪಾಲ್ಗೊಂಡಿದ್ದ ಪರಿಸರ ಪ್ರೇಮಿಗಳಿಗೆ ಪರಿಸರ ಪ್ರೇಮಿ, ಜಲತಜ್ಞ ಯು.ಎನ್.ರವಿಕುಮಾರ್ ಅವರು ಕೆರೆಯ ಪರಿಸರ, ಮಳೆ ನೀರು ಹರಿವ ಮಾರ್ಗ, ಜಲಾಶಯದ ಸಂರಕ್ಷಣೆ, ಕುಕ್ಕರಹಳ್ಳಿ ಕೆರೆ ಇತಿಹಾಸ, ಜೀವವೈವಿದ್ಯತೆ, ಜಲಚರ, ಪಕ್ಷಿ ಸಂಕುಲ ಸೇರಿದಂತೆ ಇನ್ನಿತರ ಮಹತ್ತರ ಅಂಶಗಳ ಬಗ್ಗೆ ವಿವರಿಸಿದರು.

ನಡಿಗೆ ಸಂದರ್ಭದಲ್ಲಿ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸ್ವಚ್ಛಂಧವಾಗಿ ವಿಹರಿಸುತ್ತಿದ್ದ ಹೆಜ್ಜಾರ್ಲೆ(ಪೆಲಿಕಾನ್), ಬೂದು ಬಕ (ಗ್ರೇಟ್ ಹೆರಾನ್), ಕೊಳದ ಬಕ (ಪಾಂಡ್ ಹೆರಾನ್), ಉಂಡುಕೋಳಿ (ಪರ್ಪಲ್ ಸ್ವಾಂಪ್‌ಹೆನ್), ದೊಡ್ಡ ನೀರುಕಾಗೆ (ಗ್ರೇಟ್ ಕಾರ್ಮೊರೆಂಟ್), ಸಣ್ಣ ನೀರುಕಾಗೆ(ಲಿಟಲ್ ಕಾರ್ಮೊರೆಂಟ್), ಕೃಷ್ಣ ಹದ್ದು (ಬ್ರಾಹ್ಮಿಣಿ ಕೈಟ್) ಹಾಗೂ ಬೂದು ಮಂಗಟ್ಟೆ (ಗ್ರೇ ಹಾರ್ನ್‌ಬಿಲ್) ಸೇರಿದಂತೆ 35 ಜಾತಿಯ ಪಕ್ಷಿಗಳನ್ನು ಗುರುತಿಸಿ ಪರಿಸರ ಪ್ರೇಮಿಗಳಿಗೆ ವಿವರಿಸಲಾಯಿತು. ಮಂಗಟ್ಟೆ ಪಕ್ಷಿಯ ಜೀವನ ಕ್ರಮವನ್ನು ತಿಳಿಸಲಾಯಿತು.

ಕೆರೆ ಆವರಣದಲ್ಲಿರುವ ತಾರೆ, ಆಲದ ಮರ, ನಾಗಲಿಂಗ ಪುಷ್ಪ, ಅರಳಿ, ನೇರಳೆ, ಈಚಲು, ಶ್ರೀಗಂಧ, ಹಲಸು, ಹೊಂಗೆ ಹಾಗೂ ಬುಗುರಿ ಸೇರಿದಂತೆ ವಿವಿಧ ಜಾತಿಯ ಮರಗಳ ಮಹತ್ವ ಹಾಗೂ ಅವುಗಳಿಂದ ಪರಿಸರಕ್ಕೆ ಆಗುವ ಪ್ರಯೋಜನವನ್ನು ಮನವರಿಕೆ ಮಾಡಿಕೊಡಲಾಯಿತು.

ಕೆರೆಯ ಅಂಚಿನಲ್ಲಿ ಬೆಳೆಯುವ ಈಚಲು, ನೇರಳೆ ಹಾಗೂ ಆಲದ ಮರಗಳು ಮಣ್ಣಿನ ಸವಕಳಿ ತಡೆಯುವುದರೊಂದಿಗೆ ನೀರಿನ ಸಂರಕ್ಷಣೆಗೆ ಸಹಕಾರಿಯಾಗುತ್ತವೆ. ನೇರಳೆ ಮರಗಳು ನೀರಿನ ಗುಣಮಟ್ಟ ಕಾಪಾಡುವಲ್ಲಿ ಪಾತ್ರ ವಹಿಸುತ್ತವೆ. ಪರಿಸರಕ್ಕೆ ಸವಾಲಾಗಿರುವ ಕೆಲವು ಸಮಸ್ಯೆಗಳ ಬಗ್ಗೆಯೂ ಗಮನ ಸೆಳೆಯಲಾಯಿತು. ಸುಬಾಬುಲ್ ಹಾಗೂ ರಕ್ತಬೀಜಾಸುರ (ಸೆನ್ನಾ ಸೆಪ್ಟಾಬುಲಸ್) ಮರಗಳು ಸ್ಥಳೀಯ ಜಾತಿಯ ಸಸ್ಯಗಳ ಬೆಳವಣಿಗೆಗೆ ಅಡ್ಡಿಯಾಗುತ್ತಿದ್ದು, ಅವುಗಳ ನಿಯಂತ್ರಣ ಅಗತ್ಯವಾಗಿದೆ ಎಂದು ಯು.ಎನ್. ರವಿಕುಮಾರ್ ತಿಳಿಸಿದರು.

ಮೈಸೂರಿನ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆಗೆ ಪಡುವಾರಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಕೊಳಚೆ ನೀರು ಕೆರೆಯನ್ನು ಸೇರುತ್ತಿರುವುದರಿಂದ ನೀರು ಕಲುಷಿತಗೊಳ್ಳುತ್ತಿದೆ. ಇದರ ಪರಿಣಾಮವಾಗಿ ಮೀನು ಹಾಗೂ ಪಕ್ಷಿ ಸಂಕುಲಕ್ಕೆ ಅಪಾಯ ಉಂಟಾಗುತ್ತಿದೆ. ಕೆರೆಯ ಮಧ್ಯಭಾಗದಲ್ಲಿರುವ ದ್ವೀಪ ನಿಧಾನವಾಗಿ ಮುಳುಗುತ್ತಿದ್ದು, ಅಲ್ಲಿ ಗೂಡು ಕಟ್ಟುವ ಸುಮಾರು ಆರೇಳು ಜಾತಿಯ ಪಕ್ಷಿಗಳ ಸಂರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಪರಿಸರ ನಡಿಗೆಯಲ್ಲಿ 95 ವರ್ಷದ ಹೆಚ್.ಆರ್. ಬಾಪು ಸತ್ಯನಾರಾಯಣ, ಪರಿಸರವಾದಿಗಳಾದ ಪರಶುರಾಮೇಗೌಡ, ರವಿ ಬಳೆ, ಲೀಲಾವೆಂಕಟೇಶ್, ಶೈಲಜೇಶ್, ವಿಶ್ವನಾಥ್, ನಂದೀಶ್, ಬಾನು ಪ್ರಶಾಂತ್, ಸಂಜಯ್ ದತ್ತಾತ್ರಿ ಸೇರಿದಂತೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹಂಟೆಡ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಪರಿಮಳ & ಕಂಪನಿ (ತ)	4 ಪ್ರದರ್ಶನಗಳು
ಸಂಗಂ	
ಪೊಲೀಸ್ ಕಂಪ್ಲೇಂಟ್ (ಕ) + ಮ್ಯಾಂಗೋ ಪಚ್ಚ (ಕ)	2+2 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಪಿ.ಲಂಕೇಶ್ ಪತ್ನಿ, ಲೇಖಕಿ ಇಂದಿರಾ ಲಂಕೇಶ್ ನಿಧನ

ಸಿಎಂ ಡಿಕೆಶಿ, ಮಾಜಿ ಸಿಎಂ ಸಿದ್ದರಾಮಯ್ಯ ಸಂತಾಪ



ಬೆಂಗಳೂರು, ಜೂ.15– ವಯೋ ಸಹಜ ಕಾಯಿಲೆಯಿಂದ, ಹಿರಿಯ ಪತ್ರಕರ್ತ ಹಾಗೂ ಖ್ಯಾತ ಬರಹಗಾರ ದಿ. ಪಿ. ಲಂಕೇಶ್ ಪತ್ನಿ, ಲೇಖಕಿ ಶ್ರೀಮತಿ ಇಂದಿರಾ ಲಂಕೇಶ್(84) ಅವರು ಸೋಮವಾರ ನಿಧನರಾಗಿದ್ದಾರೆ.

ಇಂದು ಬೆಳಗ್ಗೆ ಬೆಂಗಳೂರಿನ ರಾಜಾಜಿ ನಗರದಲ್ಲಿರುವ ತಮ್ಮ ನಿವಾಸದಲ್ಲಿ ಇಂದಿರಾ ಕೊನೆಯುಸಿರೆಳೆದಿದ್ದಾರೆ. ಅವರ ನಿಧನದಿಂದ ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಮತ್ತೊಂದು ಮಹತ್ವದ ಕೊಂಡಿ ಕಳಚಿದಂತಾಗಿದೆ.

ಇಂದಿರಾ ಅವರು ಪುತ್ರಿ ಕವಿತಾ ಲಂಕೇಶ್(ಚಿತ್ರನಿರ್ದೇಶಕಿ) ಹಾಗೂ ಪುತ್ರ ಇಂದ್ರಜಿತ್ ಲಂಕೇಶ್(ನಿರ್ದೇಶಕ ಹಾಗೂ ಪತ್ರಕರ್ತ) ಸೇರಿದಂತೆ ಅಪಾರ ಬಂಧು–ಮಿತ್ರರು ಮತ್ತು ಅಭಿಮಾನಿ ಬಳಗವನ್ನು ಅಗಲಿದ್ದಾರೆ.

ಇನ್ನು ಇಂದಿರಾ ಲಂಕೇಶ್ ಅವರ ನಿಧನಕ್ಕೆ ಮುಖ್ಯಮಂತ್ರಿ ಡಿಕೆ ಶಿವ ಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜಕೀಯ, ಸಾಹಿತ್ಯ ಹಾಗೂ ಚಲನ ಚಿತ್ರ ರಂಗದ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ 'ಲಂಕೇಶ್ ಪತ್ರಿಕೆ'ಯ ಆರಂಭದ ದಿನಗಳಿಂದಲೂ ಇಂದಿರಾ ಲಂಕೇಶ್ ಅವರು ಪತಿ ಪಿ. ಲಂಕೇಶ್ ಅವರಿಗೆ ಬೆನ್ನೆಲುಬಾಗಿ ನಿಂತಿದ್ದರು. ಕೇವಲ ವೈವಾಹಿಕ ಜೀವನದಲ್ಲಷ್ಟೇ ಅಲ್ಲದೆ, ಪತ್ರಿಕೆಯ ಆಡಳಿತ, ಮುನ್ನಡೆ ಹಾಗೂ ಪ್ರಕಾಶನದ ಜವಾಬ್ದಾರಿಯನ್ನು ತೆರೆಮರೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ ಹೆಗ್ಗಳಿಕೆ ಇವರದ್ದಾಗಿದೆ.

2000 ಇಸವಿಯಲ್ಲಿ ಪಿ. ಲಂಕೇಶ್ ಅವರ ನಿಧನದ ತದನಂತರದ ದಿನಗಳಲ್ಲಿ ಹಿರಿಯ ಪುತ್ರಿ ದಿ. ಗೌರಿ ಲಂಕೇಶ್ ಅವರ ಅಗಲಿಕೆಯ ನಂತರವೂ ಧೃತಿಗೆಡದ ಇಂದಿರಾ ಅವರು, ಕುಟುಂಬದ ಸಾಹಿತ್ಯಿಕ ಮತ್ತು ಪತ್ರಿಕೋದ್ಯಮದ ಪರಂಪರೆಯನ್ನು ಮುನ್ನಡೆಸಿಕೊಂಡು ಬಂದಿದ್ದರು.

ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಮೆರವಣಿಗೆ

ಮಾನವ ಸರಪಳಿ ನಿರ್ಮಾಣ, ವರಿಷ್ಠರಿಗೆ ಮನವಿ ಸಲ್ಲಿಕೆ



ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡುವಂತೆ ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಯ ದಿವಂಗತ ಎಸ್ ಚಿಕ್ಕಮಾದು ಅವರ ಅಭಿಮಾನಿಗಳು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರ ಅಭಿಮಾನಿಗಳು ಒತ್ತಾಯಿಸಿ, ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಜೂ.15(ಜಿಎ)–ಶಾಸಕ ಅನಿಲ್ ಚಿಕ್ಕಮಾದುಗೆ ಸಚಿವ ಸ್ಥಾನ ನೀಡುವಂತೆ ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಯ ದಿವಂಗತ ಎಸ್ ಚಿಕ್ಕಮಾದು ಅವರ ಅಭಿಮಾನಿಗಳು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರ ಅಭಿಮಾನಿಗಳು ಮೈಸೂರಿನಲ್ಲಿ ಮೆರವಣಿಗೆ ನಡೆಸಿದರು.

ಮೈಸೂರು ನಗರದ ನಂಜರಾಜ ಬಹದ್ದೂರ್ ಛತ್ರದಿಂದ ಅಭಿಮಾನಿಗಳು ಹಾಗೂ ನಾಯಕ ಸಮಾಜದ ಮುಖಂಡರು ಕಾರ್ಯಕರ್ತರು ಬಿತ್ತಿ ಪತ್ರಗಳನ್ನು ಹಿಡಿದುಕೊಂಡು ದಿವಾನ್ಸ್ ರಸ್ತೆಯ ಮುಖಾಂತರ ಕಾಲ್ನಡಿಗೆ ಮೂಲಕ ದಾಸಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸಚಿವ ಸ್ಥಾನಕ್ಕೆ ಆಗ್ರಹಿಸಿದರು. ನಂತರ ಮುಖಂಡರು ಅಭಿಮಾನಿಗಳು ಕಾಂಗ್ರೆಸ್ ಕಚೇರಿಗೆ ತಲುಪಿದರು.

ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಡಾ.ಬಿ.ಜೆ.ವಿಜಯ ಕುಮಾರ್ ಮತ್ತು ಆರ್.ಮೂರ್ತಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಅಧ್ಯಕ್ಷರು ನೀವು ಕೊಟ್ಟಿರುವ ಮನವಿಯನ್ನು ಕೂಡಲೇ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹಾಗೂ ಕರ್ನಾಟಕದ ಉಸ್ತುವಾರಿಗಳಿಗೆ ಫ್ಯಾಕ್ಸ್ ಮಾಡುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಲೋಕೇಶ್ (ಪಿಯಾ) ನಾಯಕ, ಜನಾಂಗದ ಹಿರಿಯ ಮುಖಂಡ ಉದ್ಬೂರು ಕೃಷ್ಣ, ಕರ್ನಾಟಕ ರಾಜ್ಯ ಯುವ ಸೇನೆ ಅಧ್ಯಕ್ಷ ಕಾಟೂರು ದೇವರಾಜು, ಅಹಿಂದ ಒಕ್ಕೂಟಗಳ ರಾಜ್ಯಾಧ್ಯಕ್ಷರು ದ್ಯಾವಪ್ಪನಾಯಕ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಪಾಳ್ಯ ಕೃಷ್ಣ, ಅರಕಲವಾಡಿ ಸೋಮನಾಯಕ, ಹೊಂಗನೂರು ಚಂದ್ರು ಕೊಳ್ಳೇಗಾಲ ಕಿರಣ್, ಮಹೇಶನಾಯಕ, ಸರಗೂರು ಶ್ರೀನಿವಾಸ್ ಅಗತ್ತಗೌಡನಹಳ್ಳಿ ಆರ್ ನಾಗ ಜಿ ಶ್ರೀನಿವಾಸ್ ಹೊಸ್ಕಾಪಾಳ್ಯ ನಂಜುಂಡ ನಾಗರಾಜು, ತಿಪ್ಪೂರು ಮಹದೇವ, ಆಲಗೂಡು ನಾಗರಾಜು,ಇಟ್ಟಾ ಬೆಟ್ಟನಾಯಕ ಕುಣಿಗಲುಸಣ್ಣ, ಸ್ವಾಮಿನಾಯಕ, ಸಾಹುಕಾರಹುಂಡಿ ಮಹದೇವ, ನಾಗವಾಲ ಮಹೇಶ.ವೇಣುಗೋಪಾಲ, ಸಾಲಿಗ್ರಾಮ ಮಹದೇವನಾಯಕ. ಮಣಿ,ರಮ್ಮನ್ನಹಳ್ಳಿ ಸೋಮಣ್ಣ ಶೇಖರ್,ರಂಗಸ್ವಾಮಿ. ನಾಗನಾಯಕ, ಸಿಂಡಿಕೇಟ್ ಸದಸ್ಯರು ಬಸವರಾಜು ಮತ್ತಿತರರು ಪಾಲ್ಗೊಂಡಿದ್ದರು.

ಪಂಜಿನ ಕವಾಯತು ಮೈದಾನದ ಆಸನ ಸಾಮರ್ಥ್ಯ ಹೆಚ್ಚಳಕ್ಕೆ ಮರು ಟೆಂಡರ್ ಪ್ರಕ್ರಿಯೆ



ಮೈಸೂರು, ಜೂ.15(ಎಂಟಿವೈ, ಬಿಸಿಟಿ, ಎಜಿ)– ದಸರಾ ಮಹೋತ್ಸವದ ಕ್ಲೈಮ್ಯಾಕ್ಸ್, ಮೈನವಿರೇಳಿಸುವ ಪಂಜಿನ ಕವಾಯತು ನಡೆಯುವ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಆಸನ ಸಾಮರ್ಥ್ಯ ಹೆಚ್ಚಿಸುವ ಎರಡನೇ ಹಂತದ ಕಾಮಗಾರಿ ಹಾಗೂ ಮೈದಾನದ ಸುತ್ತ ವಿವಿಧ ಅಭಿವೃದ್ಧಿ ಕಾಮಗಾರಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಕ್ರಿಯಾ ಯೋಜನೆ (ಡಿಪಿಆರ್)ಗೆ ಟೆಂಡರ್ ಪ್ರಕ್ರಿಯೆಯ ಸಿದ್ಧತೆಯಲ್ಲಿದೆ.

ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ದಿನ ಸಂಜೆ ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ 'ಪಂಜಿನ ಕವಾಯತು' ದೇಶ–ವಿದೇಶದಲ್ಲಿ ತನ್ನದೇ ಆದ ಮಹತ್ವ ಪಡೆದಿದ್ದು, ಈ ಮೆಗಾ ಕಾರ್ಯಕ್ರಮ ವೀಕ್ಷಿಸುವವರ ಸಂಖ್ಯೆ ಅಸದಳ. ಜನಸಾಮಾನ್ಯರೊಂದಿಗೆ ಗಣ್ಯರು, ಆಹ್ವಾನಿತರು ಪಂಜಿನ ಕವಾಯತು ವೀಕ್ಷಣೆಗೆ ಬಯಸುವುದರಿಂದ ಮೈದಾನದಲ್ಲಿ ಆಸನದ ಕೊರತೆ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ 2018ರಲ್ಲಿ ವರ್ಷದ ಮುಡಾ ವತಿಯಿಂದ ರೂ. 6.5 ಕೋಟಿ ವೆಚ್ಚದಲ್ಲಿ ಮೈದಾನದ ಜಿ, ಹೆಚ್,ಐ,ಜೆ,ಕೆ, ಎಲ್, ಎಂ, ಎನ್ ಬ್ಲಾಕ್‌ಗಳಲ್ಲಿ 9 ಹಂತಗಳನ್ನು ಹೆಚ್ಚುವರಿಯಾಗಿ ನಿರ್ಮಿಸಿ, ಇನ್ನು 15 ಸಾವಿರ ಆಸನದ ಸಾಮರ್ಥ್ಯ ಹೆಚ್ಚಿಸಲಾಗಿತ್ತು. ಇದರಿಂದ ಈ ಹಿಂದೆ 20 ಸಾವಿರ ಆಸನದೊಂದಿಗೆ ಹೆಚ್ಚುವರಿಯಾಗಿ ಸೇರ್ಪಡೆಗೊಂಡ 15 ಸಾವಿರ ಆಸನವೂ ಸೇರಿ ಇದೀಗ ಒಟ್ಟು 35 ಸಾವಿರ ಮಂದಿ ಪಂಜಿನ ಕವಾಯತು ಕಾರ್ಯಕ್ರಮ ವೀಕ್ಷಿಸಬಹುದಾಗಿತ್ತು. ಈಗ ಮತ್ತೆ 8 ಸಾವಿರ ಆಸನ ಸಾಮರ್ಥ್ಯ ಹೆಚ್ಚಳಕ್ಕೆ ಉದ್ದೇಶಿಸಲಾಗಿದೆ. ಆಗ 43 ಸಾವಿರ ಆಸನ ಸಾಮರ್ಥ್ಯವನ್ನು ಮೈದಾನ ಹೊಂದಲಿದೆ.

ಇನ್ನಷ್ಟು ಅಭಿವೃದ್ಧಿಗೆ ಚಿಂತನೆ: ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವ್ಯಾಪ್ತಿಯಲ್ಲಿರುವ ಪಂಜಿನ ಕವಾಯತು ಮೈದಾನವನ್ನು ಎರಡನೇ ಹಂತದಲ್ಲಿ ಅಭಿವೃದ್ಧಿ ಮಾಡಲು ಎಂಡಿಎ ನಿರ್ಧರಿಸಿದೆ. ಇದರಲ್ಲಿ ಮೈದಾನದ ಎ,ಬಿ,ಸಿ,ಡಿ,ಇ ಹಾಗೂ ಒ,ಪಿ,ಕ್ಯು,ಆರ್,ಎಸ್ ಬ್ಲಾಕ್‌ಗಳಲ್ಲಿ ಆಸನದ ವ್ಯವಸ್ಥೆ ಹೆಚ್ಚಳ ಮಾಡುವ ಕಾಮಗಾರಿಯೊಂದಿಗೆ ಪಂಜಿನ ಕವಾಯತು ಮೈದಾನದಲ್ಲಿ ಸಂಗ್ರಹವಾಗುವ ಮಳೆ ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ವ್ಯವಸ್ಥೆ, ಪಾರ್ಕಿಂಗ್ ಸ್ಥಳದಲ್ಲಿ ಇಂಟರ್‌ಲಾಕ್ ಅಳವಡಿಕೆ ಸೇರಿದಂತೆ ಸಮಗ್ರ ಅಭಿವೃದ್ಧಿ ಮಾಡಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಕ್ರಿಯಾ ಯೋಜನೆ (ಡಿಪಿಆರ್)ಗೆ ಟೆಂಡರ್ ಕರೆಯಲಾಗಿದೆ.

ಮರು ಟೆಂಡರ್: ಡಿಪಿಆರ್ ಸಿದ್ಧಪಡಿಸಲು ಕಳೆದ ಮೇ ತಿಂಗಳಲ್ಲಿ ಟೆಂಡರ್ ಕರೆಯಲಾಗಿತ್ತು. ಮೇ 18 ರಿಂದ ಟೆಂಡರ್ ಪ್ರಕ್ರಿಯೆ ಆರಂಭವಾಗಿ ಮೇ 25ರಂದು ಕೊನೆ ದಿನವಾಗಿತ್ತು. ಆದರೆ, ಒಬ್ಬರು ಮಾತ್ರ ಬಿಡ್‌ಗೆ ಅರ್ಜಿ ಸಲ್ಲಿಸಿದ್ದರು. ಹಾಗಾಗಿ ಪ್ರಕ್ರಿಯೆಯು ನಿಯಮಾವಳಿ ಅನ್ವಯ ಅದನ್ನು ರದ್ದು ಮಾಡಿ, ಇದೀಗ ಹೊಸದಾಗಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. ಈ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಿಡ್ ತೆರೆಯುವುದಕ್ಕೆ ಕನಿಷ್ಠ ಆರು ತಿಂಗಳು ಬೇಕಾಗುತ್ತದೆ. ಅಭಿವೃದ್ಧಿ ಕಾಮಗಾರಿಗೆ ಅಂದಾಜು ವೆಚ್ಚ ಸೇರಿ ದಂತೆ ಇನ್ನಿತರ ಅಭಿವೃದ್ಧಿ ಕಾರ್ಯದ ಬಗ್ಗೆ ರೂಪುರೇಷೆ ಸಿದ್ಧಪಡಿಸಿ, ಆ ನಂತರ ಸರ್ಕಾರದ ಅನುಮೋದನೆ ಪಡೆಯಲಾಗುತ್ತದೆ ಎಂದು ಎಂಡಿಎ ಅಧಿಕಾರಿ ಮೇಘನಾ ತಿಳಿಸಿದ್ದಾರೆ.

ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜಿತ್ ದಿಪ್ಕೆಗೆ ಕಪಾಳ ಮೋಕ್ಷ!



ಜೈಪುರ: ನೀಟ್ ಪರೀಕ್ಷಾ ಅವಾಂತರದ ವಿರುದ್ಧ ಪ್ರತಿಭಟನೆಗೆ ತೆರಳಿದ್ದ ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜಿತ್ ದಿಪ್ಕೆಗೆ ಸಾರ್ವಜನಿಕವಾಗಿ ಕಪಾಳ ಮೋಕ್ಷ ಮಾಡಿ ಹಲ್ಲೆ ನಡೆಸಲಾಗಿದೆ.

ರಾಜಸ್ತಾನದ ಜೈಪುರದಲ್ಲಿ ಈ ಘಟನೆ ನಡೆದಿದ್ದು, ಪ್ರತಿಭಟನೆಯ ವೇಳೆ ಜನರನ್ನು ಉದ್ದೇಶಿಸಿ ಮಾತನಾಡಲು ವೇದಿಕೆಯತ್ತ ತೆರಳುತ್ತಿದ್ದಾಗ ಗುಂಪಿನಲ್ಲಿದ್ದ ಕೆಲವರು ಅಭಿಜಿತ್ ದಿಪ್ಕೆ ಮೇಲೆ ಹಲ್ಲೆ ಮಾಡಿ ಕಪಾಳ ಮೋಕ್ಷ ಮಾಡಿದ್ದಾರೆ ಎನ್ನಲಾಗಿದೆ.

ಈ ಕುರಿತ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ವ್ಯಾಪಕ ವೈರಲ್ ಆಗುತ್ತಿದೆ.

ಮಧ್ಯಾಹ್ನ 3 ಗಂಟೆಗೆ ಶಹೀದ್ ಸ್ಮಾರಕ್‌ನಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಲು ದಿಪ್ಕೆ ಕರೆ ನೀಡಿದ್ದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಲು ಅವರು ತೆರಳುತ್ತಿದ್ದ ವೇಳೆ ಪರಿಸ್ಥಿತಿ ಹಠಾತ್ ಉದ್ವಿಗ್ನಗೊಂಡಿತು.

ವರದಿಗಳ ಪ್ರಕಾರ, ದಿಪ್ಕೆ ಅವರನ್ನು ಅವರ ಬೆಂಬಲಿಗರು ಹೆಗಲ ಮೇಲೆ ಹೊತ್ತುಕೊಂಡು ಸಾಗಿಸುತ್ತಿದ್ದ ವೇಳೆ ಕೆಲವರು ಅವರ ಕುತ್ತಿಗೆಯಲ್ಲಿದ್ದ ಸ್ಕಾರ್ಫ್ ಅನ್ನು ಎಳೆದರು. ಈ ವೇಳೆ ಅಭಿಜಿತ್ ಕೆಳಕ್ಕೆ ಬಗ್ಗುತ್ತಲೇ ಕೆಲವರು ಅಭಿಜಿತ್‌ರನ್ನು ಹಿಡಿದು ಹಲವಾರು ಬಾರಿ ಕಪಾಳಮೋಕ್ಷ ಮಾಡಿದರು ಮತ್ತು ಕೆಳಗೆ ಎಳೆಯಲು ಯತ್ನಿಸಿದರು. ಈ ಅನಿರೀಕ್ಷಿತ ಘಟನೆಯಿಂದ ಪ್ರತಿಭಟನಾ ಸ್ಥಳದಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು.

ಅಂತೆಯೇ ಅಭಿಜಿತ್ ದಿಪ್ಕೆ ಅವರನ್ನು ಸುತ್ತುವರಿದು ಕೆಲವರು ತಳ್ಳಾಟ–ನೂಕಾಟ ನಡೆಸುತ್ತಿರುವ ದೃಶ್ಯಗಳು ಕಾಣಿಸಿಕೊಂಡಿವೆ. ನಂತರ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಪೊಲೀಸರು ಮಧ್ಯಪ್ರವೇಶಿಸಿದರೆಂದು ವರದಿಯಾಗಿದೆ. ಸದ್ಯಕ್ಕೆ ಹಲ್ಲೆ ನಡೆಸಿದವರ ಗುರುತು ಅಥವಾ ಹಲ್ಲೆಯ ಹಿಂದಿನ ಉದ್ದೇಶದ ಕುರಿತು ಅಧಿಕೃತ ಮಾಹಿತಿ ಪ್ರಕಟವಾಗಿಲ್ಲ. ಪೊಲೀಸರು ಘಟನೆ ಕುರಿತು ತನಿಖೆ ನಡೆಸುತ್ತಿದ್ದಾರೆ.

ಸಂಪೂರ್ಣ ಗ್ರ್ಯಾಂಡ್ ಚಾಲೆಂಜ್ ಕಾರ್ಯಕ್ರಮ

ಮೈಸೂರು, ಜೂ.15– ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಎದುರಾಗುತ್ತಿರುವ ಸವಾಲುಗಳಿಗೆ ನವೀನ, ತಂತ್ರಜ್ಞಾನ ಆಧಾರಿತ ಹಾಗೂ ಪ್ರಾಯೋಗಿಕ ಪರಿಹಾರಗಳನ್ನು ಉತ್ತೇಜಿಸುವ ಉದ್ದೇಶದಿಂದ ಸಂಪೂರ್ಣ ಗ್ರ್ಯಾಂಡ್ ಚಾಲೆಂಜ್ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.

ಬೆಳೆ ಕೊಯ್ಲಿನ ನಂತರ ಮೌಲ್ಯ ಸರಪಳಿ ನಿರ್ವಹಣೆ (Post-Harvest Value Chain Solutions) ಸುಸ್ಥಿರ ಪ್ಯಾಕೇಜಿಂಗ್ ಪರಿಹಾರಗಳು, ಪರಿಣಾಮಕಾರಿ ಸಾಗಾಣಿಕೆ ವ್ಯವಸ್ಥೆ (Logistics Optimisation), ಸಮುದಾಯ ಆಧಾರಿತ ಒಕ್ಕೂಟ ಮಾದರಿಗಳು, ಡಿಜಿಟಲ್ ವ್ಯವಸ್ಥೆಗಳು ಹಾಗೂ ನಷ್ಟದಿಂದ ಮೌಲ್ಯ ಸೃಷ್ಟಿಸುವ (Loss-to-Value) ನವೀನ ಪರಿಹಾರಗಳಿಗೆ ಆದ್ಯತೆ ನೀಡಲಾಗಿದೆ.

ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು www.sampurna.food ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಜಿಲ್ಲೆಯ ವ್ಯಾಪ್ತಿಯಲ್ಲಿರುವ ನವೋದ್ಯಮಿಗಳು (Innovators), ಸ್ಟಾರ್ಟ್ ಅಪ್‌ಗಳು (Start-ups) ಹಾಗೂ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ ಸವಾಲುಗಳಿಗೆ ಹೊಸ ಪರಿಹಾರಗಳು, ನವೀನ ಆಲೋಚನೆಗಳನ್ನು ಹೊಂದಿರುವ ರೈತ ಉತ್ಪಾದಕರ ಸಂಸ್ಥೆಗಳು (FPOS) ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುಂತೆ ತೋಟಗಾರಿಕೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೀಸೆಲ್ ದರ ಏರಿಕೆ, ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟ ವಿರೋಧಿಸಿ

ಕರ್ನಾಟಕ ಪ್ರಾಂತ ರೈತ ಸಂಘ ಪ್ರತಿಭಟನೆ



ಮೈಸೂರಿನ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಕರ್ನಾಟಕ ಪ್ರಾಂತ ರೈತ ಸಂಘ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.15(ಜಿಎ)–ಡೀಸೆಲ್–ರಸಗೊಬ್ಬರ ಬೆಲೆ ಏರಿಕೆ–ಕಾಳಸಂತೆ ಮಾರಾಟ, ವಿದ್ಯುತ್ ವಿತರಣೆ ಖಾಸಗೀಕರಣ ವಿರೋಧಿಸಿ, ಕರ್ನಾಟಕ ಪ್ರಾಂತ ರೈತ ಸಂಘ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಹಳೇ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮುಂಗಾರು ಮಳೆ ಆರಂಭವಾಗಿದ್ದು, ಈಗಾಗಲೇ ರೈತರು ಕೃಷಿ ಚಟುವಟಿಕೆ ಆರಂಭಿಸಿ ಬಿತ್ತನೆಯಲ್ಲಿ ತೊಡಗಿದ್ದಾರೆ. ಆದರೆ ರೈತರಿಗೆ ಬೇಕಾದ ಬಿತ್ತನೆ ಬೀಜ, ರಸಗೊಬ್ಬರ ಸಿಗದೇ ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಪಶ್ಚಿಮ ಏಷ್ಯಾದ ಯುದ್ಧದ ಬಿಕ್ಕಟ್ಟು, ಕೇಂದ್ರ ಸಕಾರದ ತಪ್ಪು ವಿದೇಶಾಂಗ ನೀತಿ ಮತ್ತು ವಾಣಿಜ್ಯ ನೀತಿಗಳಿಂದಾಗಿ ಒಂದು ಕಡೆ ರಸಗೊಬ್ಬರದ ಬೆಲೆ ಏರಿಕೆ ಮತ್ತು ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ರೈತರು ತೊಂದರೆಗೀಡಾಗಿದ್ದಾರೆ. ಇದನ್ನು ಬಳಸಿಕೊಂಡ ಕೆಲವು ವ್ಯಾಪಾರಸ್ಥರು ದಾಸ್ತಾನಿದ್ದರೂ, ಸ್ಟಾಕ್ ಇಲ್ಲ ಎಂದೂ ವಾಪಾಸ್ ಕಳುಹಿಸುತ್ತಾರೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಮತ್ತೊಂದೆಡೆ ಡಿಎಪಿ, ಯೂರಿಯಾ ಗೊಬ್ಬರವನ್ನು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ರೈತರ ಸುಲಿಗೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವು 1150ರೂ. ರಸಗೊಬ್ಬರವನ್ನು 2250 ರೂ.ಗೆ ಏರಿಸಿ ರೈತರನ್ನು ದಿವಾಳಿ ಮಾಡಲು ಹೊರಟಿದೆ. ಆದ್ದರಿಂದ ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ರೈತರಿಗೆ ಗೊಬ್ಬರ, ಬಿತ್ತನೆ ಬೀಜ ಸಿಗುವಂತೆ ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಟಾಟಾ ಪವರ್ ಕಂಪನಿಗೆ ಅವಕಾಶ ಕಲ್ಪಿಸುತ್ತಿದೆ. ಇದುವರೆಗೆ ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಸಾರ್ವಜನಿಕ ಕಂಪನಿಗಳಿಗೆ ಮಾತ್ರ ಅವಕಾಶ ಇತ್ತು. ವಿದ್ಯುತ್ ವಲಯವನ್ನು ಸಂಪೂರ್ಣ ಖಾಸಗೀಕರಿಸುವ ಇಂತಹ ಪ್ರಯತ್ನ ನಡೆಯುತ್ತಿದ್ದು ಇದನ್ನು ತೀವ್ರವಾಗಿ ಖಂಡಿಸುತ್ತೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದ್ಯುತ್ ಉತ್ಪಾದನೆ ಮತ್ತು ಪ್ರಸರಣವನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರ ಮಾಡಿದ ನಂತರ ವಿತರಣೆಯನ್ನು ಕೂಡಾ ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ವಹಿಸಿಕೊಡುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಟಾಟಾ ಪವರ್ ಲಿಮಿಟೆಡ್ ಕಂಪನಿಯು ರಾಜ್ಯದ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ತನಗೆ ನೀಡಬೇಕೆಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿ ಸಲ್ಲಿಸಿದೆ. ಅದರಲ್ಲಿ ಮೈಸೂರು ಜಿಲ್ಲೆಯೂ ಸೇರಿದೆ. ಒಂದು ವೇಳೆ ವಿದ್ಯುತ್ ವಿತರಣೆಯನ್ನು ಖಾಸಗಿ ಕಾರ್ಪೊರೇಟ್ ಕಂಪೆನಿಗಳಿಗೆ ವಹಿಸಿದರೆ, ವಿದ್ಯುತ್ ಬಳಕೆದಾರರು, ರೈತರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ನೌಕರರು, ವ್ಯಾಪಾರಿಗಳು ತೀವ್ರವಾದ ಬಾಧೆಗೆ ಒಳಗಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗಿ ಕಾರ್ಪೊರೇಟ್ ಕಂಪನಿಗಳಿಗೆ ವಹಿಸಬಾರದೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಅಧ್ಯಕ್ಷ ಚಿಕ್ಕಣ್ಣೇಗೌಡ, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಖಜಾಂಚಿ ಪಿ.ಪಿ.ಪ್ರಶಾಂತ್, ಕೆ.ಬಸವರಾಜ್, ಮೈಸೂರು ತಾಲೂಕು ಅಧ್ಯಕ್ಷ ಲೋಕೇಶ್, ಕಾರ್ಯದರ್ಶಿ ಸಣ್ಣ ನಾಯಕ, ಹುಣಸೂರು ತಾಲೂಕು ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಬೀರೇಶ್ವರ, ಕೆಂಪಯ್ಯ, ರಂಗರಾಜ್, ರಾಜೇಂದ್ರ, ಸಿದ್ದಯ್ಯ, ಮುಳ್ಳೂರು ಮಹಾದೇವ, ಚಿಕ್ಕಣ್ಣ, ಗುರುರಾಜ್, ಅಣ್ಣಪ್ಪ, ಶಾಕುಂತಲ, ಸುಬ್ರಹ್ಮಣ್ಯ ಮತ್ತಿತರರು ಪಾಲ್ಗೊಂಡಿದ್ದರು.

ಅರಸು ರಸ್ತೆ, ಅರಮನೆ ಬಳಿ ಸ್ವಚ್ಛತೆಗಾಗಿ ಮತ್ತೆ ನೂರು ಡಸ್ಟ್‌ಬಿನ್ ಇರಿಸಿದ ಪಾಲಿಕೆ!

ಇವುಗಳನ್ನು ಕದ್ದರೆ ಕಠಿಣ ಶಿಕ್ಷೆ ಎಚ್ಚರಿಕೆ!



ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಕಸದ ಬುಟ್ಟಿ(ಡಸ್ಟ್‌ಬಿನ್)ಗಳನ್ನಿಡುವ ಕಾರ್ಯ ಯೋಜನೆಗೆ ಸೋಮವಾರ ಚಾಲನೆ ನೀಡಲಾಯಿತು.

ಈ ಹಿಂದೆ ಕಳ್ಳತನವಾಗಿತ್ತು...!

"ಡಿ.ದೇವರಾಜ ಅರಸು ರಸ್ತೆಯಲ್ಲಿ ಈ ಹಿಂದೆಯೂ ಡೆಸ್ಟ್ ಬಿನ್‌ಗಳನ್ನಿಡ ಲಾಗಿತ್ತು. ಆದರೆ, ಅವುಗಳೆಲ್ಲ ಕಳ್ಳತನ ವಾಗಿದ್ದವು. ಮತ್ತೆ ಹೊಸದಾಗಿ ಡೆಸ್ಟ್ ಬಿನ್‌ಗಳನ್ನು ಇಟ್ಟಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಆಯಾ ಸ್ಥಳದಲ್ಲಿನ ವಾಣಿಜ್ಯ ಮಳಿಗೆದಾರರು, ವ್ಯಾಪಾರಸ್ಥರಿಗೆ ತಿಳಿಸಲಾಗಿದೆ. ಅರಸು ರಸ್ತೆಯಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು, ಡಸ್ಟ್‌ಬಿನ್‌ಗಳನ್ನು ಕಳವು ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು.

– **ಶೇಖ್ ತನ್ವೀರ್ ಆಸಿಫ್,**
ಆಯುಕ್ತರು, ಮೈಸೂರು ನಗರಪಾಲಿಕೆ

ಮೈಸೂರು, ಜೂ.15(ಎಂಕೆ)– ಮೈಸೂರಿನ ಪ್ರವಾಸಿ ತಾಣಗಳು ಹಾಗೂ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ 'ನೂರು ಸ್ಥಳಗಳಲ್ಲಿ ನೂರು ಕಸದ ಬುಟ್ಟಿ(ಡಸ್ಟ್‌ಬಿನ್)ಗಳನ್ನಿಡುವ' ನಗರಪಾಲಿಕೆಯ ಕಾರ್ಯ ಯೋಜನೆಗೆ ಸೋಮವಾರ ಚಾಲನೆ ದೊರೆಯಿತು.

ವಿಶ್ವ ಮಟ್ಟದಲ್ಲಿ ಪ್ರವಾಸಿಗರ ಗಮನ ಸೆಳೆದಿರುವ ಮೈಸೂರಿಗೆ ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ಕಾರಂಜಿ ಕೆರೆ ಸೇರಿದಂತೆ ವಿವಿಧ ಪ್ರೇಕ್ಷಣೀಯ ಸ್ಥಳಗಳು ಹಾಗೂ ವಾಣಿಜ್ಯ ಕೇಂದ್ರವೆಂದು ಗುರ್ತಿಸಿಕೊಂಡಿರುವ ದೇವರಾಜ ಅರಸು ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಿಗೆ ಆಗಮಿಸುವ ಪ್ರವಾಸಿಗರ ಅನುಕೂಲತೆಗೆ ಅನುಗುಣವಾಗಿ ಹಾಗೂ ಇಲ್ಲೆಲ್ಲಾ ಸ್ವಚ್ಛತೆ ಕಾಪಾಡುವ ಮಹತ್ವದ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಸ್ವಚ್ಛ ಕಾರ್ಯಕ್ಕೆ ಚಾಲನೆ ಸಿಕ್ಕಿದೆ.

ಸಿಎಸ್‌ಆರ್ ಅನುದಾನ, ಎಸ್‌ಬಿಐ ಫೌಂಡೇಶನ್ ಹಾಗೂ ಹಸಿರು ದಳದ ಸಹಕಾರದೊಂದಿಗೆ ಪ್ರಾಯೋಗಿಕವಾಗಿ ಮೈಸೂರಿನ ಅರಮನೆ ಹಾಗೂ ಸದಾ ಜನದಟ್ಟಣೆಯಿಂದ ಕೂಡಿರುವ ದೇವರಾಜ ಅರಸು ರಸ್ತೆ ಮಾರ್ಗದಲ್ಲಿ 15 ಕಸದ ಡಬ್ಬಿಗಳನ್ನು ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ನಗರದ ಚಾಮರಾಜೇಂದ್ರ ಮೃಗಾಲಯ, ಸೇಂಟ್ ಫಿಲೋಮಿನಾ ಚರ್ಚ್, ಟೌನ್‌ಹಾಲ್, ದೊಡ್ಡ ಗಡಿಯಾರ, ಚಿಕ್ಕ ಗಡಿಯಾರ, ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧೆಡೆ ಅಳವಡಿಸಲು ಉದ್ದೇಶಿಸಿದೆ.

ಜಾಗೃತಿ: ಹಸಿಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಹಾಕುವ ಡೆಸ್ಟ್ ಬಿನ್‌ಗಳನ್ನು ಅಳವಡಿಸುವುದರ ಜೊತೆಗೆ ಪ್ರವಾಸಿಗರು, ಬೀದಿ ಬದಿ ವ್ಯಾಪಾರಿಗಳು, ಅಂಗಡಿ ಮಾಲೀಕರು ಹಾಗೂ ಸಾರ್ವಜನಿಕರಿಗೆ ಸ್ವಚ್ಛತೆ ಬಗ್ಗೆ ಹಸಿರು ದಳದೊಂದಿಗೆ ಜಾಗೃತಿ ಮೂಡಿಸಲು ತೀರ್ಮಾನಿಸಲಾಗಿದೆ ಎಂದು ನಗರಪಾಲಿಕೆ ಸ್ವಚ್ಛತಾ ನೋಡಲ್ ಅಧಿಕಾರಿ ಕೆ.ಎಸ್. ಮೃತ್ಯುಂಜಯ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನೂರು ಮೀಟರ್‌ಗೆ ಒಂದು: ಡಿ.ದೇವರಾಜ ಅರಸು ರಸ್ತೆಯಲ್ಲಿ ಪ್ರತೀ ನೂರು ಮೀಟರ್‌ಗೆ ಡಸ್ಟ್‌ಬಿನ್‌ಗಳನ್ನು ಅಳವಡಿಸಲಾಗಿದೆ. ಉಳಿದಂತೆ ಅರಮನೆ ಸುತ್ತಮುತ್ತವೂ ಹಾಕಲಾಗಿದೆ. 1 ವರ್ಷ ಹಸಿರುದಳ ಇದರ ನಿರ್ವಹಣೆ ಮಾಡಲಿದೆ. ಈ ಮೂಲಕ ಸ್ವಚ್ಛತೆ ಕಾಪಾಡುವುದರ ಜೊತೆಗೆ ಜನರಲ್ಲಿಯೂ ಸ್ವಚ್ಛತಾ ಅರಿವು ಮೂಡಲಿದೆ ಎಂದು ಹೇಳಿದರು.

ಸವಾಲ್ ಮಾಧ್ಯಮ ಮತ್ತು
ಬದುಕು ಅಸೋಸಿಯೇಟ್ಸ್
ಮಾಲೀಕರಾದ
ಪ್ರದೀಪ್ ಕುಮಾರ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಸವಾಲ್ ವಾಹಿನಿ ಟೀಮ್ ಹಾಗೂ
ಬದುಕು ಅಸೋಸಿಯೇಟ್ಸ್





ಮನೋಹರ್.ಎಂ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಸವಾಲ್ ವಾಹಿನಿ ಟೀಮ್ ಹಾಗೂ
ಬದುಕು ಅಸೋಸಿಯೇಟ್ಸ್

JOB VACANCY

For a Manufacturing Company in Hebbal Industrial Area.

1. **ACCOUNTS EXECUTIVE**
   Candidate should be a Commerce Graduate, Minimum 3 years of experience in handling all account activities. (experience in the manufacturing industry is preferred).
2. **CHEMIST**
   Candidate should be B.Sc/M.Sc (Chemistry), Minimum 3 years of experience working with Pharma Industries
3. **DISPATCH SUPERVISOR**
   Candidate should be any Graduate, Minimum 3 years of experience working with Pharma Industries. Interested candidates are requested to send their CV to the following address.

recruiter.hr2989@gmail.com

WANTED CIVIL ENGINEER

3 YEARS EXPERIENCE, ABLE TO HANDLE THE PROJECTS.
Send resume to EMAIL ID - workreport9880@gmail.com or
WhatsApp: 9880959585

JOB OPENINGS



Join our growing team!
Multibrand Distribution company for CCTV and Networking products.

1.	SALES EXECUTIVE	Good communication skills and experience in sales will be an added advantage.
2.	TELECALLING	Good communication skills with a positive attitude and willingness to achieve targets.
3.	ACCOUNTANT	Knowledge of accounting, Tally, GST and basic MS Office. Experience preferred.
4.	OFFICE BOYS	Should be punctual, honest and willing to assist in office and related work.

Be a part of our dynamic team and grow with us!

NAKODA ELECTRONICS
An ISO 9001:2015 Certified Company
MAIL: accounts@nakodaelectronics.com
PH: 9448023050

ರತ್ನ ಪ್ಯಾರಾ ಮೆಡಿಕಲ್ ಕಾಲೇಜ್

ರಮಾವಿಲಾಸ್ ರಸ್ತೆ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರ
ಪ್ರವೇಶ ತೆರೆದಿದೆ
ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ
(DMLT) SSLC / PUC Pass / Fail
Direct PUC Science Commerce @ Arts
9886654463

ಪುರಸಭೆ ಕಾರ್ಯಾಲಯ, ವಿರಾಜಪೇಟೆ

ಕೊಡಗು ಜಿಲ್ಲೆ 571218
ದೂರವಾಣಿ ಸಂಖ್ಯೆ: 08274-257332
ಇ–ಮೇಲ್: itstaff_ulb_virajpet@yahoo.com
ವೆಬ್‌ಸೈಟ್:- www.virajpettown.mrc.gov.in

ಕ್ರಸಂ.ನಂ.ಪು.ವಿ./ಎಸ್.ಎಫ್.ಸಿ.ಎ.ಆ.ಎಸ್.ಎಫ್.ಸಿ.ಉ.ಅ.ಕು.ನಿ.ಸ.ಎಸ್.ಎಫ್.ಸಿ.ಪು.ನಿ/ಟಿ–02/2026–27
ದಿನಾಂಕ: 15–6–2026

*** ಟೆಂಡರ್ ಪ್ರಕಟಣೆ"**
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಯ 2019–20, 2020–21, 2021–22, 2022–23, ಮತ್ತು 2024–25 ನೇ ಸಾಲಿನಲ್ಲಿ ಎಸ್.ಎಫ್.ಸಿ (ಕ್ಯಾಪಿಟಲ್ ಅಸೆಟ್ಸ್, ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ) ಯೋಜನೆಯಡಿ ಕಾಮಗಾರಿಯನ್ನು ನಿರ್ವಹಿಸಿ ಉಳಿಕೆಯಾದ ಅನುದಾನ, 2026–27ನೇ ಸಾಲಿನ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನ, 2026–27 ನೇ ಸಾಲಿನ ಎಸ್.ಎಫ್.ಸಿ ಕ್ಯಾಪಿಟಲ್ ಅಸೆಟ್ಸ್ ಅನುದಾನ ಮತ್ತು 2026–27 ನೇ ಸಾಲಿನ ಪುರಸಭೆ ನಿಧಿ ಅನುದಾನದಡಿಯಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1 ರ ನಿಯಮಗಳಿಗನುಸಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.gov.in** ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. ಟೆಂಡರ್ ಪ್ರಕಟಣೆಯ ದಿನಾಂಕದಲ್ಲಿ ಬದಲಾವಣೆ ಇದ್ದಲ್ಲಿ ಮತ್ತು ಹೆಚ್ಚಿನ ಮಾಹಿತಿಯನ್ನು ಸದರಿ ಪೋರ್ಟಲ್ ಮುಖಾಂತರ ಪಡೆಯುವುದು.

1. ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	:	15–06–2026 ರಿಂದ 30–06–2026 ಸಂಜೆ 17:00 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	:	30–06–2026 ಸಂಜೆ 17:30 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ	:	02/07/2026 ಬೆಳಿಗ್ಗೆ 11.30 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ	:	ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್:– www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/–(ಶ್ರೀ ನಿತಿನ್ ಚಕ್ಕಿ ಕೆ.ಎ.ಎಸ್) ಆಡಳಿತಾಧಿಕಾರಿ ಪುರಸಭೆ, ವಿರಾಜಪೇಟೆ.
ಸಹಿ/– (ಶ್ರೀ ನಾಚಪ್ಪ ಪಿ.ಕೆ.) ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.

ಚಾಮರಾಜನಗರ ವಿಶ್ವವಿದ್ಯಾನಿಲಯ
CHAMARAJANAGARA UNIVERSITY

SUVARNA GANGOTRI, CHAMARAJANAGARA - 571313
Ph No: 08226-297512 Email ID:chamarajanagarauniversity@gmail.com

No:CUC/UED-1/4(a)/2026-27 Date:12-06-2026

TENDER NOTIFICATION

ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ಇಲ್ಲಿ **RATE CONTRACT FOR SUPPLY, SERVICE AND MAINTENANCE OF COMPUTERS, PRINTERS, PROJECTORS, INTERNET AND OTHER PERIPHERALS AT CHAMARAJANAGAR UNIVERSITY** ಟೆಂಡರ್ ಅವಶ್ಯಕತೆ ಇದ್ದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ (K.T.P.P) 1999/2000ರ ಪ್ರಕಾರ **E-Procurement** ಟೆಂಡರ್ ಮೂಲಕ ಪಡೆಯುವ ಅವಶ್ಯಕತೆ ಇರುತ್ತದೆ. ಈ ಸಂಬಂಧ ಸದರಿ ದರ ಒಪ್ಪಂದದ ಟೆಂಡರ್ ಅನ್ನು ಹೆಸರಾಂತ/ಅರ್ಹ ಮಾರಾಟಗಾರರು/ ಸೇವೆ ಒದಗಿಸುವವರಿಂದ **E-Procurement** ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ.

1	Tender Notification Date	NO/CUC/UED-1/4(a)/2026-27 Date: 12-06-2027
2	Last date and time for tender queries / clarifications	25-06-2026, 11-00 am
3	Last date and time for receipt of tenders	29-06-2026, 17-00 PM
4	Place, date and time for openings of technical bid.	30-06-2026, 17-00 PM Registrar, Chamarajanagar University, Chamarajanagar-571313
5	Place, date and time for opening of financial bid	01-07-2026, 11-00 am Registrar Chamarajanagar University, Chamarajanagar-571313
6	EMD Amount	1,20,000-00/-
7	Contact Details	Registrar Chamarajanagar University, Chamarajanagar-571313 Ph: 9483968818

ಸಂ:ವಾಸಾಸಂಇ:ಚಾನಗರ:178:2026–27
ಸಹಿ/– ಕುಲಸಚಿವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ–571 313

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
INDIAN FAMOUS ASTROLOGER

ಪಂ: ಎಸ್. ಮಣಿಕಂಠನ್, ಮೊ: 9480743991
ಇವರು ಅಷ್ಟಮಂಗಳ ಪ್ರಶ್ನೆ, ಉದಾ: ವಿದ್ಯೆ, ಉದ್ಯೋಗ ಸ್ತ್ರೀ ಪುರುಷ ಪ್ರೇಮ ವಿವಾಹ ಸಂತಾನ ಯೋಗ, ಮನೆಯಲ್ಲಿ ನೆಮ್ಮದಿ ಇಲ್ಲದಿರುವುದು, ಧೈರ್ಯ ಕಡಿಮೆ, ಮರಣ ಭಯ, ಕೋರ್ಟ್ ಕೆಲಸ ಇನ್ನು ಅನೇಕ ಸಮಸ್ಯೆಗಳಿಗೆ ವಿಶಿಷ್ಟವಾದ ಭಗವತಿ ಕ್ರಿಯೆಯಿಂದ ಕೇರಳದ ಕುಟ್ಟಿ ಚೇತನ್ ನಿಂದ 3 ದಿನದಲ್ಲಿ ಶೀಘ್ರ ಮತ್ತು ಶಾಶ್ವತ ಪರಿಹಾರ ನೀಡುತ್ತಾರೆ. ಖಾಯಂ ವಿಳಾಸ **ಅಶೋಕ ರೋಡ್**. ಈಸ್ಟ್ ಕಾಸ್, 36, ಮೈಸೂರು, ಲ್ಯಾಂಡ್ ಮಾರ್ಕ್: ಕನ್ನಿಕಾಪರಮೇಶ್ವರಿ ದೇವಸ್ಥಾನದ ಹತ್ತಿರ
ಇಲ್ಲಿ ಹೇಳುವ ವಿಷಯಗಳನ್ನು ಗುಪ್ತವಾಗಿ ಇಡಲಾಗುವುದು.

ಬೇಕಾಗಿದ್ದಾರೆ

ಇಂಗ್ಲಿಷ್ ಭಾಷೆ ಹಾಗೂ ಕನ್ನಡ ನುಡಿ ಅನುಭವವುಳ್ಳ
ಕಂಪ್ಯೂಟರ್ ಆಪರೇಟರ್.
ಕೆಲಸದ ವೇಳೆ :ಬೆಳಿಗ್ಗೆ 10.30 ರಿಂದ ಸಂಜೆ: 4.00ರ ತನಕ ವೃತ್ತಿಪರ ಮಾಹಿತಿ ಸಲ್ಲಿಸುವುದು
ಸಂದರ್ಶನ ವೇಳೆ 21–06–2026ರ ಬೆಳಿಗ್ಗೆ 12 ಗಂಟೆಗೆ
ಸ್ಥಳ: ಎನ್.ಎ.ಕೆ. ಅಸೋಸಿಯೇಟ್ಸ್, ವೆಸ್ಲಿ ರಸ್ತೆ, ತಿಲಕ್‌ನಗರ, ಮೈಸೂರು
ಸಂಬಳ: ರೂ. 16,000/– ಪ್ರತಿ ತಿಂಗಳಿಗೆ
ನಿಸಾರ್ ಅಹಮದ್ ಖಾನ್,
ಅಧ್ಯಕ್ಷರು,
ಮೈಸೂರು ಜಿಲ್ಲೆ ಪತ್ರ ಬರಹಗಾರರ ಸಂಘ (ರಿ), ಮೈಸೂರು
MOB: 9342188034

47 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು



ಹಸಿರು ನಮ್ಮ ಉಸಿರು

WANTED IMMEDIATELY

For a reputed Resort in Mysuru
Male candidates only
FRONT OFFICE ASSISTANT
HOUSE KEEPING STAFFS
WAITERS
SOUTH INDIAN COOK
Call : 99455 46713



FOR ADVERTISEMENT IN
STAR OF MYSORE & ಮೈಸೂರು ಮಿತ್ರ
Call: 0821-2496522 / 0821-2496523

